ಶನಿವಾರ, ಮೇ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 140 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಳೆಗಾಲದ ಮುನ್ಸೂಚನೆ, ಸಾಂಕ್ರಾಮಿಕ ರೋಗಗಳು ಹಾಗೂ ಕೋವಿಡ್ ಮರುಕಳಿಸುವ ಭೀತಿಯ ನಡುವೆ ಮಕ್ಕಳ ಊಟದ ಡಬ್ಬಿಯ ಬಗ್ಗೆ ಗಮನಹರಿಸುವ ಅಗತ್ಯ ಪೋಷಕರದ್ದು!



ಚರ್ಚೆ
ಪಠ್ಯಪುಸ್ತಕಗಳ ಮರುಪರಿಷ್ಕರಣೆಯ ಅಗತ್ಯವಿತ್ತೇ...

ಮಳೆ: ಜಲಾಶಯಗಳು ಭರ್ತಿ 5

'ದಿಶಾ ಪ್ರಕರಣ: ಎನ್‌ಕೌಂಟರ್ ಉದ್ದೇಶಪೂರ್ವಕ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,326 ▲	16,266 ▲	₹52,600 (ಬೆಂಗಳೂರು) ▲	₹63,400 (ಬೆಂಗಳೂರು) ▲	77.63 ▼

ಎಫ್‌ಡಿಐ: ಕರ್ನಾಟಕಕ್ಕೆ ಮೊದಲ ಸ್ಥಾನ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚನೆ

ಬಿಬಿಎಂಪಿ ಚುನಾವಣೆ ನಡೆಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾರ್ಡ್‌ಗಳ ಪುನರ್ ವಿಂಗಡಣೆ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ ಕೂಡಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಚುನಾವಣೆ ಆಯೋಜಿಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಚುನಾವಣಾ ಆಯೋಗಕ್ಕೆ ಶುಕ್ರವಾರ ಸೂಚಿಸಿದೆ.

ಬಿಬಿಎಂಪಿ ಚುನಾವಣೆ ಆಯೋಜಿಸುವಂತೆ ಕೋರಲಾದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ದ್ವಿಸದಸ್ಯ ಪೀಠವು, ಬಿಬಿಎಂಪಿಯ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಒಬಿಸಿ ಮೀಸಲಾತಿ ನಿರ್ಣಯದ ಪ್ರಕ್ರಿಯೆ ಪೂರ್ಣಗೊಳಿಸಲು ಕರ್ನಾಟಕ ಸರ್ಕಾರಕ್ಕೆ ಎಂಟು ವಾರಗಳ ಕಾಲಾವಕಾಶ ನೀಡಿದೆ.

ಯಾವುದೇ ಸ್ಥಳೀಯ ಸಂಸ್ಥೆಯ ಆಡಳಿತವನ್ನು ರಾಜ್ಯ ಸರ್ಕಾರ ನಡೆಸುವಂತಿಲ್ಲ. ಹಾಗಾಗಿ ಚುನಾಯಿತ ಸಂಸ್ಥೆ ಅಸ್ತಿತ್ವದಲ್ಲಿರುವುದು ಅಗತ್ಯ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿದ್ದು, ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2020ರಲ್ಲೇ ಅಂಗೀಕರಿಸಿದ್ದ ನೂತನ ಕಾನೂನು 2021ರ ಜನವರಿಯಿಂದಲೇ ಜಾರಿಗೆ ಬಂದಿರುವುದು ಗಮನಾರ್ಹ ಎಂದು ಪೀಠ ಹೇಳಿದೆ.



ವಾರ್ಡ್‌ಗಳ ಪುನರ್ ವಿಂಗಡಣೆ ಕುರಿತ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ಈ ಕುರಿತ ಅಧಿಸೂಚನೆಯನ್ನು ಶೀಘ್ರವೇ ಹೊರಡಿಸಲಾಗುವುದು. ಮೀಸಲಾತಿ ಅಂತಿಮಗೊಳಿಸುವ ಪ್ರಕ್ರಿಯೆ ಎಂಟು ವಾರಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಪೀಠಕ್ಕೆ ವಿವರಿಸಿದರು.

ಸರ್ಕಾರವು ಎಂಟು ವಾರಗಳಲ್ಲೇ ಈ ಪ್ರಕ್ರಿಯೆ ಪೂರ್ಣಗೊಳಿಸಿ ಅಂತಿಮ ಅಧಿಸೂಚನೆ ಹೊರಡಿಸಬೇಕು ಎಂದು ಸೂಚಿಸಿದ ಪೀಠ, ನಂತರದ ಒಂದು ವಾರದೊಳಗೆ ರಾಜ್ಯ ಚುನಾವಣಾ ಆಯೋಗವು ಬಿಬಿಎಂಪಿ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ತಿಳಿಸಿತು.

ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ, 2020ರ ಡಿಸೆಂಬರ್ 4ರಂದು ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು 2020 ಡಿಸೆಂಬರ್ 18ರಂದು ಸುಪ್ರೀಂ ಕೋರ್ಟ್ ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ– 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

5Bನೇ ಪುಟ ನೋಡಿ

ಮುಖ್ಯಾಂಶಗಳು

- ಒಬಿಸಿ ಮೀಸಲಾತಿ ನಿಗದಿಗೆ ಗಡುವು
- ವಾರ್ಡ್‌ಗಳ ಪುನರ್ ವಿಂಗಡಣೆಗೆ ಎಂಟು ವಾರಗಳ ಕಾಲಾವಕಾಶ

ಬಿಜೆಪಿ ಸರ್ಕಾರ ಎರಡು ವರ್ಷಗಳಿಂದಲೂ ಬಿಬಿಎಂಪಿ ಚುನಾವಣೆ ಮುಂದೂಡುತ್ತಾ ಬಂದಿತ್ತು. ಈಗ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಸ್ವಾಗತಾರ್ಹ

ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಎಂಟು ವಾರದ ನಂತರ ಚುನಾವಣೆ: ಸಿ.ಎಂ

ಬೆಂಗಳೂರು: ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಎಂಟು ವಾರಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿ, ಹಿಂದುಳಿದ ವರ್ಗದವರ ಮಿಸಲಾತಿಯನ್ನೂ ನಿಗದಿಪಡಿಸಿ ಬಿಬಿಎಂಪಿಗೆ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಈ ತೀರ್ಪು ನಮ್ಮ ವಾದಕ್ಕೆ ಸಿಕ್ಕಿರುವ ಮನ್ನಣೆಯಾಗಿದೆ. ಚುನಾವಣೆ ನಡೆಸಲು ತಕ್ಷಣವೇ ಅಗತ್ಯ ಪ್ರಕ್ರಿಯೆಗಳನ್ನು ನಡೆಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

ಬಿಬಿಎಂಪಿ ವಾರ್ಡ್‌ಗಳ ಪುನರ್‌ವಿಂಗಡಣೆ ಕಾರ್ಯ ಪೂರ್ಣಗೊಳ್ಳುತ್ತಿದ್ದು, ಮುಗಿದ ಕೂಡಲೇ ಅಧಿಸೂಚನೆ ಹೊರಡಿಸುತ್ತೇವೆ. ಹಿಂದುಳಿದ ವರ್ಗದವರಿಗೆ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ.ಭಕ್ತವತ್ಸಲಂ ಸಮಿತಿಯೂ ಎಂಟು ವಾರಗಳೊಳಗೆ ವರದಿ ನೀಡಲಿದೆ ಎಂದರು.

'ಚುನಾವಣೆಗೆ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ಬಿಜೆಪಿ ಚುನಾವಣೆಗೆ ಸಿದ್ಧವಿದೆ. ಮತ್ತೆ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತುವ ಪ್ರಶ್ನೆಯೇ ಇಲ್ಲ' ಎಂದು ಅವರು ತಿಳಿಸಿದರು.

₹28 ಸಾವಿರ ಕೋಟಿ ಅನುದಾನ

ಪರಿಶಿಷ್ಟರ ಕಲ್ಯಾಣ: ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳಿಗೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಈ ಸಾಲಿನಲ್ಲಿ ₹ 28234.36 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು.

ಕಳೆದ ವರ್ಷದ ಅನುದಾನದಲ್ಲಿ ಎಷ್ಟು ಬಳಕೆಯಾಗಿದೆ ಮತ್ತು ಎಷ್ಟು ಬಾಕಿ ಇದೆ ಎನ್ನುವುದನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಕೆಲವು ಯೋಜನೆಗಳಲ್ಲಿ ಮಾತ್ರ ಬದಲಾವಣೆ ಮಾಡಿ ಉಳಿದವುಗಳಿಗೆ ಅನುಮೋದನೆ ನೀಡಲಾಗಿದೆ. ಬಜೆಟ್‌ನಲ್ಲಿ ಇದಕ್ಕೆ ಅವಕಾಶ ಕಲ್ಪಿಸಲಾಗಿತ್ತು, ಪರಿಷತ್ತಿನ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆಯಲಾಯಿತು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಗೆ ₹ 500 ಕೋಟಿ ಹೆಚ್ಚಿಗೆ ನೀಡಲಾಗಿದೆ. ಕೃಷಿ ಇಲಾಖೆಗೆ ₹ 851 ಕೋಟಿ ಇದ್ದ ಅನುದಾನವನ್ನು ₹1,061 ಕೋಟಿಗೆ ಏರಿಸಲಾಗಿದೆ. ತೋಟಗಾರಿಕೆ ಇಲಾಖೆಗೆ ₹142 ಕೋಟಿ ಇದ್ದ ಅನುದಾನವನ್ನು ₹187 ಕೋಟಿಗೆ ಹೆಚ್ಚಿಸಲಾಗಿದೆ. ಆರೋಗ್ಯ ಇಲಾಖೆಗೆ ಕಳೆದ ವರ್ಷ ₹ 899 ಕೋಟಿ ನೀಡಲಾಗಿತ್ತು. ಈ ವರ್ಷ ₹1,300 ಕೋಟಿಗೆ ಹೆಚ್ಚಿಸಲಾಗಿದೆ ಎಂದು ಬೊಮ್ಮಾಯಿ ವಿವರಿಸಿದರು.

ಸಹಕಾರ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಸಮುದಾಯದ ಜನರಿಗೆ ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೀಡಲು ₹203 ಕೋಟಿ ಒದಗಿಸಲಾಗಿದೆ. ಕಂದಾಯ ಇಲಾಖೆಯಲ್ಲಿ ಪಿಂಚಣಿ ಮೊತ್ತ ಹೆಚ್ಚಳ ಮಾಡಿದ್ದು, ಕಳೆದ ವರ್ಷ ₹2,900 ಕೋಟಿ ಇದ್ದ ಅನುದಾನವನ್ನು ಈ ವರ್ಷ ₹3,748 ಕೋಟಿ ಹೆಚ್ಚಿಸಲಾಗಿದೆ. ಕೌಶಲಾಭಿವೃದ್ಧಿಗೆ ₹180 ಕೋಟಿ ಮತ್ತು ಗಂಗಾ ಕಲ್ಯಾಣ ಯೋಜನೆಗೆ ₹9,000 ಕೋಟಿಗೆ ಅನುಮೋದನೆ ನೀಡಲಾಗಿದೆ ಎಂದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದ ಸ್ಥಳಗಳ ಅಭಿವೃದ್ಧಿಗೆ ಒಟ್ಟು ₹ 20 ಕೋಟಿ ಮೀಸಲಿಡಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಕ್ಷೇತ್ರಗಳ ಶಾಸಕರಿಗೆ ತಲಾ ₹ 1 ಕೋಟಿ ನೀಡಲಾಗುವುದು ಎಂದೂ ಹೇಳಿದರು.

ಮುಖ್ಯಾಂಶಗಳು

- ಉನ್ನತ ಶಿಕ್ಷಣ ಇಲಾಖೆಯಡಿ ಫೆಲೋಶಿಪ್, ಲ್ಯಾಪ್‌ಟಾಪ್ ವಿತರಣೆಗೆ ಆದ್ಯತೆ
- ಆ.15 ರೊಳಗೆ ಎಲ್ಲಾ ವೈಯಕ್ತಿಕ ಯೋಜನೆಗಳಿಗೆ ಚಾಲನೆ

ಗಂಗಾ ಕಲ್ಯಾಣ ಯೋಜನೆಯಲ್ಲಿ ಭ್ರಷ್ಟಾಚಾರ ಆಗಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಲಾಗುತ್ತದೆ. ಯಾರ ಅವಧಿಯಲ್ಲಿ ಎಷ್ಟು ಭ್ರಷ್ಟಾಚಾರ ಆಗಿದೆ ಎಂಬುದರ ತನಿಖೆ ನಡೆಸಲಾಗುವುದು

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

'ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್'

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಅನ್ನು ಸಂಪೂರ್ಣ ಉಚಿತವಾಗಿ ನೀಡಲು ತೀರ್ಮಾನಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮ ಮಂಡಳಿಗಳ ಬ್ಯಾಂಕ್ ಖಾತೆಯಲ್ಲಿರುವ ₹1,600 ಕೋಟಿ ಅನ್ನು ಮೂರು ತಿಂಗಳಲ್ಲಿ (ಗಂಗಾ ಕಲ್ಯಾಣ ಹೊರತುಪಡಿಸಿ) ಎಸ್‌ಸಿಎಸ್‌ಪಿ ಯೋಜನೆಗಳಿಗೆ ವಿನಿಯೋಗಿಸಬೇಕು. ತಪ್ಪಿದ್ದಲ್ಲಿ ಈ ಮೊತ್ತವನ್ನು ಈ ಸಾಲಿನ ಕಾರ್ಯಕ್ರಮಗಳಿಗೆ ಮರುಹಂಚಿಕೆ ಮಾಡುವುದಾಗಿ ಸೂಚಿಸಲಾಗಿದೆ ಎಂದು ಹೇಳಿದರು.

ಪಟಿಯಾಲಾ ಕಾರಾಗೃಹಕ್ಕೆ ಕಾಂಗ್ರೆಸ್ ನಾಯಕ ಸಿಧು

ಪಟಿಯಾಲಾ/ನವದೆಹಲಿ(ಪಿಟಿಐ): 34 ವರ್ಷಗಳ ಹಿಂದಿನ ಪ್ರಕರಣದಲ್ಲಿ ಒಂದು ವರ್ಷ ಕಠಿಣ ಸಜೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು ಶುಕ್ರವಾರ ಪಟಿಯಾಲಾದ ಜಿಲ್ಲಾ ನ್ಯಾಯಾಲಯದಲ್ಲಿ ಶರಣಾದರು.



ಸಿಧು ಅವರು ಮುಖ್ಯ ಮ್ಯಾಜಿಸ್ಟ್ರೇಟ್ ಅಮಿತ್ ಮಲ್ಹಾನ್ ಎದುರು ಹಾಜರಾದರು. ಬಳಿಕ ಮಾತಾ ಕೌಶಲ್ಯ ಆಸ್ಪತ್ರೆಯಲ್ಲಿ ಕಡ್ಡಾಯ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಇದಾದ ಬಳಿಕ ಅವರನ್ನು ಪಟಿಯಾಲಾ ಕೇಂದ್ರೀಯ ಕಾರಾಗೃಹಕ್ಕೆ ಕಳುಹಿಸಲಾಯಿತು.

ಈ ಸಂದರ್ಭದಲ್ಲಿ ನವತೇಜ್ ಸಿಂಗ್ ಚೀಮಾ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರು ಸಿಧು ಜೊತೆಗಿದ್ದರು. ನ್ಯಾಯಾಲಯಕ್ಕೆ ಶರಣಾಗಲಿದ್ದಾರೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿಧು ಅವರ ನಿವಾಸದ ಬಳಿ ಸೇರಿದ್ದರು. ಆದರೆ, ರಾಜ್ಯ ಕಾಂಗ್ರೆಸ್‌ನ ಯಾವುದೇ ಪ್ರಮುಖ ನಾಯಕರು ಸಿಧು ಅವರ ನಿವಾಸದ ಬಳಿ ಕಾಣಿಸಿಕೊಳ್ಳಲಿಲ್ಲ. 1988ರಲ್ಲಿ 65 ವರ್ಷದ ವಯಸ್ಸಿನ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಸಿಧು ಅವರಿಗೆ ಈ ಶಿಕ್ಷೆ ವಿಧಿಸಲಾಗಿದೆ.

ಕೆನಡಾ ಸಂಸತ್: ಕನ್ನಡದಲ್ಲಿ ಭಾಷಣ

ಬೆಂಗಳೂರು(ಪಿಟಿಐ): ಕರ್ನಾಟಕ ಸಂಜಾತ ಕೆನಡಾ ಸಂಸದ ಚಂದ್ರ ಆರ್ಯ ಅವರು ಅಲ್ಲಿನ ಸಂಸತ್‌ನಲ್ಲಿ ಕನ್ನಡದಲ್ಲಿ ಮಾಡಿದ ಭಾಷಣವು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಮಾತೃಭಾಷೆ ಮೇಲಿನ ಅವರ ಪ್ರೀತಿಯು ಪ್ರಶಂಸೆಗೆ ಪಾತ್ರವಾಗಿದೆ.



ಚಂದ್ರ ಆರ್ಯ

'ಕೆನಡಾದ ಸಂಸತ್ತಿನಲ್ಲಿ ನಾನು ನನ್ನ ಮಾತೃಭಾಷೆ ಕನ್ನಡದಲ್ಲಿ ಮಾತನಾಡಿದ್ದೇನೆ. ಈ ಸುಂದರ ಭಾಷೆಯು ಸುದೀರ್ಘ ಇತಿಹಾಸವನ್ನು ಹೊಂದಿದೆ ಮತ್ತು ಇದನ್ನು ಸುಮಾರು 5 ಕೋಟಿ ಜನರು ಮಾತನಾಡುತ್ತಾರೆ. ಬೇರೆ ದೇಶದ ಸಂಸತ್‌ನಲ್ಲಿ ಕನ್ನಡ ಮಾತನಾಡುತ್ತಿರುವುದು ಇದೇ ಮೊದಲು' ಎಂದು ಚಂದ್ರ ಆರ್ಯ ಟ್ವೀಟ್ ಮಾಡಿದ್ದಾರೆ. ಜೊತೆಗೆ ಭಾಷಣದ ವಿಡಿಯೊವನ್ನೂ ಹಂಚಿಕೊಂಡಿದ್ದಾರೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ದ್ವಾರಾಳು ಗ್ರಾಮದ ಚಂದ್ರ ಆರ್ಯ ಕೆನಡಾದ ನೇಪಿಯನ್ ಕ್ಷೇತ್ರದ ಸಂಸದರಾಗಿದ್ದಾರೆ. ಅವರ ಭಾಷಣ ಆಲಿಸಿದ ಸಂಸದರು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದ್ದಾರೆ.

3ನೇ ಪುಟ ನೋಡಿ

ವಿಡಿಯೊ ನೋಡಲು
ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಆಪ್ಟೆಕ್ ಮೋಟರ್ಸ್‌ನಿಂದ ಎಲ್ಲೊ ಇ.ವಿ.

ಬೆಂಗಳೂರು: ಆಪ್ಟೆಕ್ ಮೋಟರ್ಸ್ ಇಂಡಿಯಾ ಕಂಪನಿಯು ವಿದ್ಯುತ್ ಚಾಲಿತ (ಇ.ವಿ.) ದ್ವಿಚಕ್ರ ವಾಹನಗಳನ್ನು ಮಾರುಕಟ್ಟೆಗೆ ತರಲು ಸಜ್ಜಾಗಿದೆ. ಎಲ್ಲೊ ಹೆಸರಿನ ಇ.ವಿ. ದ್ವಿಚಕ್ರ ವಾಹನವು ಶೀಘ್ರದಲ್ಲಿಯೇ ರಸ್ತೆಗಿಳಿಯಲಿದೆ.

ರಿಯಲ್ ಎಸ್ಟೇಟ್ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವ ಆಪ್ಟೆಕ್ ಗ್ರೂಪ್‌ನ ಅಂಗಸಂಸ್ಥೆ ಆಪ್ಟೆಕ್ ಮೋಟರ್ಸ್ ಇಂಡಿಯಾ ಪ್ರೈ.ಲಿ. ಸವಾರರ ಸುರಕ್ಷತೆಯನ್ನು ಗಮನದಲ್ಲಿ ಇರಿಸಿಕೊಂಡು ಇ.ವಿ. ದ್ವಿಚಕ್ರ ವಾಹನ ವಿನ್ಯಾಸ ಮಾಡಲಾಗಿದೆ, ಇದು ಎಲ್ಲ ವಯಸ್ಸಿನವರಿಗೂ ಹೊಂದುವಂತಿದೆ ಎಂದು ಕಂಪನಿ ಹೇಳಿದೆ.

ಆಪ್ಟೆಕ್ ಮೋಟರ್ಸ್ ಕಂಪನಿಯು ಡೀಲರ್‌ಗಳ ಜಾಲವನ್ನು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಹೊಂದಿದೆ. ಕರ್ನಾಟಕದಲ್ಲಿ ಇ.ವಿ. ತಯಾರಿಕಾ ಘಟಕವೊಂದನ್ನು ಆರಂಭಿಸುವ ಆಲೋಚನೆ ಕೂಡ ಇದೆ ಎಂದು ಕಂಪನಿ ಹೇಳಿದೆ.

ಎಲ್ಲೊ ದ್ವಿಚಕ್ರ ವಾಹನವು ಒಂದು ಬಾರಿ ಚಾರ್ಜ್ ಮಾಡಿದರೆ 90 ಕಿ.ಮೀ. ಸಾಗುತ್ತದೆ. ಗಂಟೆಗೆ ಗರಿಷ್ಠ 75 ಕಿ.ಮೀ. ವೇಗದಲ್ಲಿ ಇದು ಸಾಗಬಲ್ಲದು.



ಆನೇಕಲ್‌ನಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಅಲಯನ್ಸ್ ಸಾಹಿತ್ಯ ಉತ್ಸವ'ದಲ್ಲಿ ಸಂಸದ ಸಂಸದ ಶಶಿ ತರೂರ್ ಅವರು ಸಭಿಕರತ್ತ ಕೈ ಬೀಸಿದರು – ಪ್ರಜಾವಾಣಿ ಚಿತ್ರ

'ನೈಜ ಸಮಸ್ಯೆ ಮರೆಮಾಚುವ ವಿಷಪೂರಿತ ಮನಸ್ಸುಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್ಪಾವಧಿಯ ಕ್ಷುಲ್ಲಕ ರಾಜಕೀಯ ಲಾಭಕ್ಕಾಗಿ ನೈಜ ಸಮಸ್ಯೆಗಳನ್ನು ಮರೆಮಾಚಿ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರುವ ಕೃತ್ಯಗಳನ್ನು ನಡೆಸುತ್ತಿರುವುದು ಆಘಾತಕಾರಿ ಮತ್ತು ನಾಚಿಕೆಗೇಡಿತನ ಸಂಗತಿ' ಎಂದು ಸಂಸದ ಶಶಿ ತರೂರ್ ಕಿಡಿಕಾರಿದರು.

ಆನೇಕಲ್‌ನಲ್ಲಿನ ಅಲಯನ್ಸ್ ವಿಶ್ವವಿದ್ಯಾಲಯ ಆಯೋಜಿಸಿದ್ದ ಎರಡು ದಿನಗಳ 'ಅಲಯನ್ಸ್ ಸಾಹಿತ್ಯ ಉತ್ಸವ'ಕ್ಕೆ (ಎಎಲ್‌ಎಫ್) ಶುಕ್ರವಾರ ಚಾಲನೆ ನೀಡಿದ ಅವರು, ಸಮಕಾಲೀನ ಬೆಳವಣಿಗೆಗಳು, ರಾಜಕೀಯ, ಸಾಮಾಜಿಕ, ಸಾಹಿತ್ಯ, ಉಕ್ರೇನ್-ರಷ್ಯಾ ಯುದ್ಧ ಸೇರಿದಂತೆ ವಿವಿಧ ವಿಷಯಗಳನ್ನು ವಿಶ್ಲೇಷಿಸಿದರು.

'ದೇಶದಲ್ಲಿ ನಿರುದ್ಯೋಗ, ಹಣದುಬ್ಬರ ಹೆಚ್ಚಿದೆ. ಆದರೆ, ಜನರ ಸಂಕಷ್ಟಗಳಿಗೆ ಸ್ಪಂದಿಸುವವರು ಇಲ್ಲ. ವಿಷಪೂರಿತ ಮನಸ್ಥಿತಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಆಕ್ರಮಣಕಾರಿ ಧೋರಣೆ ಅನುಸರಿಸುತ್ತಿವೆ. ಇದು ದುರಂತ. ಕರ್ನಾಟಕದಲ್ಲಿ ಹಿಜಾಬ್, ಹಲಾಲ್ ಕಟ್, ಆಜಾನ್ ವಿವಾದಗಳನ್ನು ಸೃಷ್ಟಿಸಲಾಯಿತು. ಪ್ರಸ್ತುತ ಕಾಲಘಟ್ಟದಲ್ಲಿ ಅತ್ಯಂತ ಕೆಟ್ಟ ಸಂಗತಿಗಳೇ ನಡೆಯುತ್ತಿವೆ. ಜತೆಗೆ, ರಾಜಕೀಯದ ಕೆಟ್ಟ ದಿನಗಳಿವು. ಜನರೇ ಜಾಗೃತಗೊಳ್ಳುವ ಮೂಲಕ ಪರಿಹಾರ ಕಂಡುಕೊಳ್ಳಬೇಕು' ಎಂದು ಸಲಹೆ ಅವರು ನೀಡಿದರು.

'ಧರ್ಮ ಪ್ರತಿಯೊಬ್ಬರ ಖಾಸಗಿ ವಿಷಯ. ಆದರೆ, ಬಿಜೆಪಿ ಮತ್ತು ಸಂಘ ಪರಿವಾರದವರು ಜನರ ನಂಬಿಕೆಗಳನ್ನು ರಾಜಕೀಯ ಅಸ್ತ್ರಗಳನ್ನಾಗಿಸಿಕೊಂಡಿದ್ದಾರೆ. ದೈವಿಕ ಶಕ್ತಿ ಅಥವಾ ದೇವರ ಕಲ್ಪನೆ ಮಾಡಿಕೊಳ್ಳಲು ಪ್ರತಿಯೊಬ್ಬರು ಸ್ವತಂತ್ರರು. ಸಂಕಷ್ಟದಲ್ಲಿರುವವರಿಗೆ ನೆರವಾಗುವ ಮೂಲಕವೂ ದೈವತ್ವವನ್ನು ಕಾಣಬಹುದು' ಎಂದು ಹೇಳಿದರು.

'ಜನರು ಇಂದು ಮುಕ್ತವಾಗಿ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೂ ಹಿಂದೇಟು ಹಾಕುವ ವಾತಾವರಣ ಸೃಷ್ಟಿಯಾಗಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಟ್ರೋಲ್ ಮಾಡುವುದೂ ಇದಕ್ಕೆ ಕಾರಣವಾಗಿರಬಹುದು' ಎಂದು ವಿಶ್ಲೇಷಿಸಿದರು.

ಉಕ್ರೇನ್-ರಷ್ಯಾ ಯುದ್ಧದ ಬಗ್ಗೆ ಪ್ರಸ್ತಾಪಿಸಿದ ಅವರು, 'ಭಾರತ ಈ ವಿಷಯದಲ್ಲಿ ಸ್ಪಷ್ಟವಾದ ಮತ್ತು ದೃಢವಾದ ನಿಲುವು ತಳೆಯಲಿಲ್ಲ. ಉಕ್ರೇನ್ ಜನರ ಮೇಲೆ ರಷ್ಯಾ ದೌರ್ಜನ್ಯ ನಡೆಸಿದರೂ ಭಾರತ ಮೌನವಹಿಸಿತು. ಈ ವಿಚಾರದಲ್ಲಿ ಧೈರ್ಯದಿಂದ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿತ್ತು' ಎಂದು ಹೇಳಿದರು.

ಅನಿಂದಿತಾ ಘೋಷ್ ಸಂವಾದ ನಡೆಸಿಕೊಟ್ಟರು. ವಿಶ್ವವಿದ್ಯಾಲಯದ ಸಹಕುಲಾಧಿಪತಿ ಅಭಯ್ ಜಿ.ಛೆಬ್ಬಿ, ಕುಲಪತಿ ಡಾ. ಅನುಭಾ ಸಿಂಗ್ ಇದ್ದರು.

'ಶೇ 95ರಷ್ಟು ಭಯೋತ್ಪಾದಕರು ಎಂಜಿನಿಯರ್‌ಗಳು'

'ಎಲ್ಲ ಎಂಜಿನಿಯರ್‌ಗಳು ಭಯೋತ್ಪಾದಕರಲ್ಲ. ಆದರೆ, ಶೇ 95ರಷ್ಟು ಭಯೋತ್ಪಾದಕರು ಎಂಜಿನಿಯರ್‌ಗಳು' ಎಂದು ಶಶಿ ತರೂರ್ ಹೇಳಿದರು.

ಸಾಹಿತ್ಯ, ಕಲೆ ಮತ್ತು ತಂತ್ರಜ್ಞಾನಗಳು ಬೀರುವ ಪರಿಣಾಮಗಳನ್ನು ವಿಶ್ಲೇಷಿಸಿದ ಅವರು, 'ಸಾಹಿತ್ಯ, ಕಲೆ ಜನರನ್ನು ಪರಸ್ಪರ ಬೆಸೆಯುತ್ತವೆ. ಆದರೆ, ತಂತ್ರಜ್ಞಾನ ಯಾಂತ್ರಿಕ ಮನಸ್ಥಿತಿಯನ್ನು ಸೃಷ್ಟಿಸುತ್ತದೆ. ಭಯೋತ್ಪಾದಕರ ಕುರಿತು ನಡೆಸಿದ ಅಧ್ಯಯನ ವರದಿಯಲ್ಲಿ ಬುದ್ಧಿವಂತ ಎಂಜಿನಿಯರ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭಯೋತ್ಪಾದಕರಾಗಿದ್ದಾರೆ ಎನ್ನುವುದನ್ನು ಉಲ್ಲೇಖಿಸಲಾಗಿದೆ. ಹೀಗಾಗಿಯೇ ಭಯೋತ್ಪಾದನೆ ಮೂಲೋತ್ಪಾಟನೆಯಾಗಿಲ್ಲ' ಎಂದು ವಿಶ್ಲೇಷಿಸಿದರು.

'ನಾನು ಮಾಜಿ ಸಚಿವನಾಗಬಹುದು, ಮಾಜಿ ಸಂಸದನಾಗಬಹುದು. ಆದರೆ, ಮಾಜಿ ಬರಹಗಾರನಾಗಲು ಸಾಧ್ಯವಿಲ್ಲ. ನಾನು ರಾಜಕೀಯದಲ್ಲಿದ್ದರೂ ಬರವಣಿಗೆ ಆದ್ಯತೆಯಾಗಿರುತ್ತದೆ. ಜತೆಗೆ, ಓದುವುದು ನನ್ನ ಹವ್ಯಾಸ. ಓದು ಬರವಣಿಗೆಗೆ ಬೇಕಾದ ಚಿಂತನೆಗಳನ್ನು ವಿಸ್ತರಿಸುತ್ತದೆ. ಬರವಣಿಗೆಯಿಂದಲೂ ಸಾಕಷ್ಟು ಕಲಿಯುತ್ತೇವೆ. ಲೇಖಕ ಅಂತಃಸತ್ವದ ಮೂಲಕ ಬರೆಯುವುದನ್ನು ಆರಂಭಿಸುತ್ತಾನೆ. ಬರವಣಿಗೆಯನ್ನು ಯಾರಿಂದಲೂ ಕಲಿಯುವುದು ಕಷ್ಟಸಾಧ್ಯ' ಎಂದು ವಿವರಿಸಿದರು.

'ತಂತ್ರಜ್ಞಾನ ಬದಲಾಗುತ್ತಿರುವುದರಿಂದ 2030ಕ್ಕೆ ಈಗಿರುವ ಶೇ 30ರಷ್ಟು ಉದ್ಯೋಗಗಳು ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ. ಆದರೆ, ಸಾಹಿತ್ಯ, ಕಲೆ ನಿರಂತರ. ಸಾಹಿತ್ಯ ನಮ್ಮ ಚಿಂತನೆಯ ವಿಶಾಲ ನೋಟವನ್ನು ವಿಸ್ತರಿಸುತ್ತದೆ' ಎಂದು ನುಡಿದರು.

ನಗರದ ಕಸ ತಂದು ಸುರಿಯುತ್ತಿರುವುದರಿಂದ ದುರ್ವಾಸನೆ: ಸ್ಥಳೀಯರ ಅಳಲು

ಬೋಳಾರೆ ಬಂಡೆ ಒಡಲಿಗೆ ಗ್ರಾನೈಟ್ ಕಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲು ಗಣಿಗಾರಿಕೆ ನಿಲ್ಲಿಸಿದ ಬಳಿಕ ದನಕರುಗಳಿಗೆ ಕುಡಿಯುವ ನೀರಿನ ಸಂಗ್ರಹ ತಾಣವಾಗಿದ್ದ ನಗರದ ಹೊರ ವಲಯದ ಬೋಳಾರೆ ಬಂಡೆ ಈಗ ತ್ಯಾಜ್ಯ ಸುರಿಯುವ ತಾಣವಾಗಿ ಮಾರ್ಪಟ್ಟಿದೆ. ಸುತ್ತಮುತ್ತಲ ನಿವಾಸಿಗಳು ದುರ್ವಾಸನೆ ನಡುವೆ ಜೀವನ ಸಾಗಿಸುತ್ತಿದ್ದಾರೆ.

ಕೆಂಗೇರಿ ಹೋಬಳಿಯ ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬೋಳಾರೆ ಬಂಡೆಯಲ್ಲಿ ಕೆಲ ವರ್ಷಗಳ ಹಿಂದೆ ಕಲ್ಲು ಗಣಿಗಾರಿಕೆ ನಡೆಸಲಾಗುತ್ತಿತ್ತು. ಇಲ್ಲಿನ ದೊಡ್ಡ ಗುಂಡಿಗಳಲ್ಲಿ ಗಣಿಗಾರಿಕೆ ನಿಲ್ಲಿಸಿದ ಬಳಿಕ ಮಳೆ ನೀರು ಸಂಗ್ರಹವಾಗುತ್ತಿತ್ತು. ಬಂಡೆಯ ಮೇಲೆ ಮುನೇಶ್ವರ ದೇವಾಲಯವೂ ಇದ್ದು, ವಾರಾಂತ್ಯದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ.

ಲಾಕ್‌ಡೌನ್ ಅವಧಿಯಲ್ಲಿ ನಗರ ಪ್ರದೇಶದ ಕಸವನ್ನು ತಂದು ಇಲ್ಲಿ ಸುರಿಯಲಾಗಿತ್ತು. ಬಂಡೆಗಳ ನಡುವೆ ಸಂಗ್ರಹವಾಗಿದ್ದ ನೀರು ಕಪ್ಪು ಬಣ್ಣಕ್ಕೆ ತಿರುಗಿತ್ತು. ಇದಕ್ಕೆ ಜನರ ವಿರೋಧ ವ್ಯಕ್ತವಾಗಿದ್ದರಿಂದ ಕೆಲ ದಿನಗಳ ಮಟ್ಟಿಗೆ ಕಸ ಸುರಿಯುವುದನ್ನು ನಿಲ್ಲಿಸಲಾಗಿತ್ತು. ಈಗ ಈ ಸಮಸ್ಯೆ ಮತ್ತೆ ಮರುಕಳಿಸಿದೆ.

‘ಕಟ್ಟಡ ಅವಶೇಷ, ಕೋಳಿ ಅಂಗಡಿ ತ್ಯಾಜ್ಯವನ್ನು ವಾಹನಗಳಲ್ಲಿ ತಂದು ಸುರಿಯಲಾಗುತ್ತದೆ. ಅದರ ಜತೆಗೆ ಗ್ರಾನೈಟ್ ಕಾರ್ಖಾನೆಗಳಲ್ಲಿ ಕಲ್ಲು ಕತ್ತರಿಸಲು ಬಳಸುವ ರಾಸಾಯನಿಕ ಮಿಶ್ರಿತ ನೀರನ್ನು ಸಂಗ್ರಹಿಸಿ ಟ್ಯಾಂಕರ್‌ಗಳಲ್ಲಿ ತುಂಬಿಕೊಂಡು ತಂದು ಈ ಗುಂಡಿಗಳಿಗೆ ಸುರಿಯಲಾಗುತ್ತಿದೆ. ಇದು ಸೇರಿಕೊಂಡು ಇಲ್ಲಿನ ನೀರು ಕಲುಷಿತಗೊಂಡಿದೆ. ಇದೇ ನೀರನ್ನು ಕುಡಿದು ಮೇಕೆಗಳು ಮೃತಪಟ್ಟಿವೆ’ ಎಂದು ಸ್ಥಳೀಯರಾದ ದಿನೇಶ್ ಹೇಳಿದರು.

‘ಗ್ರಾನೈಟ್ ಕತ್ತರಿಸುವ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯನೀರನ್ನು ತಂದು ಇಲ್ಲಿ ಸುರಿಯಲಾಗುತ್ತಿದೆ. ದಿನಕ್ಕೆ ಆರೇಳು ಟ್ಯಾಂಕರ್‌ಗಳಷ್ಟು ಕೊಳಚೆ ನೀರು ಸುರಿಯುತ್ತಾರೆ. ಅವುಗಳನ್ನು ಎಲ್ಲಿಂದ ತರಲಾಗುತ್ತಿದೆ ಎಂಬುದು ಗೊತ್ತಿಲ್ಲ. ಯಾರಿಗೆ ದೂರು ನೀಡಬೇಕೋ ಗೊತ್ತಾಗುತ್ತಿಲ್ಲ’ ಎಂದರು.

ಈ ಪ್ರದೇಶ ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ. ಅಲ್ಲಿನ ಅಧಿಕಾರಿಗಳಿಗೂ ಈ ಬಗ್ಗೆ ಮಾಹಿತಿ ಇದೆ. ಆದರೆ, ಸಮಸ್ಯೆಗೆ ಪರಿಹಾರ ಮಾತ್ರ ಕಂಡುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿ.ಎಂ.ಸುನೀತಾ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.



ಬೋಳಾರೆ ಬಂಡೆ ಸೇರುತ್ತಿರುವ ಗ್ರಾನೈಟ್ ಕಾರ್ಖಾನೆ ತ್ಯಾಜ್ಯನೀರು

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ರಾತ್ರಿ ವೇಳೆ ಕಸ ಸುರಿಯುತ್ತಾರೆ!

‘ಕಟ್ಟಡ ಅವಶೇಷ, ಕೋಳಿ ಅಂಗಡಿ ತ್ಯಾಜ್ಯಗಳನ್ನು ರಾತ್ರಿ ವೇಳೆ ಟ್ರ್ಯಾಕ್ಟರ್‌ಗಳಲ್ಲಿ ತಂದು ಸರಿಯಲಾಗುತ್ತದೆ. ಹಗಲಿನ ವೇಳೆ ಜನರ ವಿರೋಧ ಎದುರಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಈ ರೀತಿ ಮಾಡುತ್ತಾರೆ’ ಎಂದು ಸ್ಥಳೀಯರು ದೂರಿದರು.

‘ಗ್ರಾನೈಟ್ ಕಾರ್ಖಾನೆಗಳ ಕಸ ಹೊತ್ತು ತರುವ ಟ್ಯಾಂಕರ್‌ಗಳು ಹಗಲಿನಲ್ಲೇ ರಾಜಾರೋಷವಾಗಿ ಬರುತ್ತವೆ. ಪ್ರಶ್ನೆ ಮಾಡಿದರೆ ನಮಗೆ ಮಾಲೀಕರು ತೋರಿಸಿರುವ ಜಾಗದಲ್ಲಿ ಸುರಿಯುತ್ತಿದ್ದೇವೆ. ಬೇಕಿದ್ದರೆ ನಮ್ಮ ಮಾಲೀಕರ ಬಳಿ ಮಾತನಾಡಿ ಎಂದು ಚಾಲಕರು ಹೇಳುತ್ತಾರೆ. ಮಾಲೀಕರನ್ನು ಹುಡುಕಿಕೊಂಡು ಹೋಗಿ ಸಮಸ್ಯೆ ಹೇಳುವವರು ಯಾರು’ ಎಂದು ದಿನೇಶ್ ಪ್ರಶ್ನಿಸುತ್ತಾರೆ.

ಯಶವಂತಪುರ ಕ್ಷೇತ್ರ: ಜನಸ್ಪಂದನ ಇಂದು



ಯಶವಂತಪುರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಶನಿವಾರ (ಇದೇ 21) ಕೆಂಗೇರಿ ಉಪನಗರದ ಬಂಡೆಮಠ ಎಸ್‌ಬಿಎಸ್ ಗುರುಭವನದಲ್ಲಿ ‘ಜನಸ್ಪಂದನ’ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಆಸಕ್ತರು ಬೆಳಿಗ್ಗೆ 10ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 11ರಿಂದ ಕಾರ್ಯಕ್ರಮ ನಡೆಯಲಿದೆ.

15 ವರ್ಷಗಳಲ್ಲಿ ಅನುದಾನ ಬಳಕೆ: ತನಿಖೆಗೆ ಆಗ್ರಹ

ಬಿಬಿಎಂಪಿ: ಪ್ರವಾಹ ಪೀಡಿತ ಪ್ರದೇಶಗಳಿಗೆ ಎಚ್‌ಡಿಕೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಅಭಿವೃದ್ಧಿಗಾಗಿ 15 ವರ್ಷಗಳ ಅವಧಿಯಲ್ಲಿ ಬಿಡುಗಡೆಯಾಗಿರುವ ಅನುದಾನದ ಬಳಕೆ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು. ‘ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಯಾವೆಲ್ಲ ಕೆಲಸಗಳನ್ನು ಮಾಡಲಾಗಿದೆ. ಸಚಿವರಾದ ಬೈರತಿ ಬಸವರಾಜ, ಮುನಿರತ್ನ, ಕೆ. ಗೋಪಾಲಯ್ಯ, ಎಸ್‌.ಟಿ. ಸೋಮಶೇಖರ್ ಪ್ರತಿನಿಧಿಸುತ್ತಿರುವ ಕ್ಷೇತ್ರಗಳಲ್ಲಿ ಏನೆಲ್ಲಾ ಕೆಲಸ ಆಗಿವೆ ಎಂಬುದನ್ನು ತಿಳಿಯುವ ಹಕ್ಕು ಜನರಿಗೆ ಇದೆ’ ಎಂದರು.

‘ಈಗಿನ ಸಚಿವರು ತಮ್ಮ ಕ್ಷೇತ್ರಗಳಲ್ಲಿ ಮಳೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಸ್ಪಂದಿಸುವ ಕೆಲಸ ಮಾಡಲಿ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಬಿಎಂಪಿ ವ್ಯಾಪ್ತಿಯ ಸಚಿವರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಮಾತ್ರ ಹೋಗುವುದಲ್ಲ; ಇತರ ಕ್ಷೇತ್ರಗಳ ಪರಿಸ್ಥಿತಿಯನ್ನೂ ಅರಿಯಬೇಕು. ಅನುದಾನ ಹಂಚಿಕೆಯಲ್ಲಿನ ತಾರತಮ್ಯ ಹೋಗಲಾಡಿಸಬೇಕು’ ಎಂದು ಆಗ್ರಹಿಸಿದರು.

‘ದಾಸರಹಳ್ಳಿ ಕ್ಷೇತ್ರಕ್ಕೆ ₹ 36 ಕೋಟಿ ಅನುದಾನ ನೀಡಿದ್ದರೆ, ಕೆ.ಆರ್. ಪುರ ಕ್ಷೇತ್ರಕ್ಕೆ ₹ 1000 ಕೋಟಿಗೂ ಹೆಚ್ಚು ಅನುದಾನ ನೀಡಲಾಗಿದೆ. ರಾಜಕಾಲುವೆಗಳ ಸುಧಾರಣೆಗೆ ₹ 1,600 ಕೋಟಿ ಅನುದಾನ ಬಿಡುಗಡೆ ಮಾಡಿರುವುದಾಗಿ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಆ ಹಣ ಎಲ್ಲಿಗೆ ಹೋಗಿದೆ? ಕಾಮಗಾರಿ ವಿಳಂಬವಾಗಲು ಕಾರಣವೇನು’ ಎಂದು ಪ್ರಶ್ನಿಸಿದರು.

ಶೇ 75ರಷ್ಟು ಪರಿಹಾರಕ್ಕೆ ಆಗ್ರಹ: ನಗರದಲ್ಲಿ ಮಳೆಯಿಂದ ಆಗಿರುವ ನಷ್ಟಕ್ಕೆ ಶೇಕಡ 75ರಷ್ಟು ಪರಿಹಾರ ನೀಡಬೇಕು. ಪರಿಹಾರದ ಹಣದಲ್ಲೂ ಭ್ರಷ್ಟಾಚಾರ ನಡೆಸಲು ಅವಕಾಶ ನೀಡಬಾರದು ಎಂದು ಕುಮಾರಸ್ವಾಮಿ ಒತ್ತಾಯಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಮತ್ತು ಜೆಡಿಎಸ್ ಮುಖಂಡ ಟಿ.ಎ. ಶರವಣ ಜತೆಗಿದ್ದರು.



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಶುಕ್ರವಾರ ಭೇಟಿನೀಡಿ, ಜನರ ಅಹವಾಲು ಆಲಿಸಿದರು. ಜೆಡಿಎಸ್ ಮುಖಂಡ ಟಿ.ಎ. ಶರವಣ, ಶಾಸಕ ಆರ್‌. ಮಂಜುನಾಥ್ ಜತೆಗಿದ್ದರು – ಪ್ರಜಾವಾಣಿ ಚಿತ್ರ

ಎಡಿನ್‌ಬರ್ಗ್ ವಿ.ವಿ: ಕ್ಯಾಂಪಸ್ ತೆರೆಯಲು ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಎಡಿನ್ ಬರ್ಗ್ ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡುವಂತೆ ಉನ್ನತ ಶಿಕ್ಷಣ ಸಚಿವ ಡಾ. ಸಿ. ಎನ್. ಅಶ್ವತ್ಥನಾರಾಯಣ ಅವರು ಶುಕ್ರವಾರ ಆಹ್ವಾನ ನೀಡಿದರು.

ಲಂಡನ್‌ನಲ್ಲಿ ಇದೇ 22ರಂದು ಆರಂಭವಾಗಲಿರುವ ‘ಎಜುಕೇಷನ್ ವರ್ಲ್ಡ್ ಫೋರಂ’ನಲ್ಲಿ ಭಾಗವಹಿಸಲು ತೆರಳಿರುವ ಅವರು, ಸ್ಕಾಟ್ಲೆಂಡ್ ನಲ್ಲಿರುವ ಸುಮಾರು 450 ವರ್ಷಗಳಷ್ಟು ಹಳೆಯದಾದ ಎಡಿನ್ ಬರ್ಗ್ ಕ್ಯಾಂಪಸ್‌ಗೆ ಭೇಟಿ ನೀಡಿದ್ದರು.

ವಿಶ್ವವಿದ್ಯಾಲಯದ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದ ಅವರು ಈ ಆಹ್ವಾನ ನೀಡಿದ್ದರು.

ಕ್ಯಾಂಪಸ್ ನಲ್ಲಿರುವ ಬಹುಶಿಸ್ತೀಯ ಶೈಕ್ಷಣಿಕ ಪರಿಪೋಷಕ ಕೇಂದ್ರವಾದ ಬೇಯ್ಸ್ ಸೆಂಟರ್ ಗೆ ಭೇಟಿ ಕೊಟ್ಟ ಸಚಿವರು ಅಲ್ಲಿನ ರೋಬೋಟಿಕ್ ಪ್ರಯೋಗಾಲಯ, ಡ್ಯಾಟಾ ಸೈನ್ಸ್ ಕೇಂದ್ರ ಮತ್ತು ಕೃತಕ ಬುದ್ಧಿಮತ್ತೆ ಕೇಂದ್ರಗಳನ್ನು ವೀಕ್ಷಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ್ ನಾಯ್ಕ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಗೋಪಾಲ ಜೋಶಿ, ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿವಿಯ ಕುಲಪತಿ ಡಾ.ಭಾನು ಮೂರ್ತಿ ಸಚಿವರ ಜತೆಗಿದ್ದರು.

ಕೆ.ಆರ್‌.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಳೆಹಾನಿ ಪ್ರದೇಶಕ್ಕೆ ಸಿ.ಎಂ ಭೇಟಿ

ರಾಜಕಾಲುವೆ ವಿಸ್ತರಣೆ: ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಮಾವು ವಡ್ಡರಪಾಳ್ಯ ಸುತ್ತಮುತ್ತಲ ಬಡಾವಣೆಗಳಿಗೆ ನೀರು ನುಗ್ಗುವುದನ್ನು ತಪ್ಪಿಸಲು ರೈಲ್ವೆ ಸೇತುವೆಯ ಬಳಿ ರಾಜಕಾಲುವೆ ಹಿಗ್ಗಿಸುವ ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದು, ಮುಂದಿನ ವಾರದಲ್ಲೇ ಟೆಂಡರ್ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಶ್ರೀಸಾಯಿ ಬಡಾವಣೆ, ರಾಮಮೂರ್ತಿನಗರದ ನಾಗಪ್ಪ ಬಡಾವಣೆಗಳಿಗೆ ಭೇಟಿ ನೀಡಿ ಸಮಸ್ಯೆ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಹೆಬ್ಬಾಳ ಕಡೆಯಿಂದ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುವ ರಾಜಕಾಲುವೆಗೆ ಅಡ್ಡಲಾಗಿರುವ ರೈಲ್ವೆ ಸೇತುವೆ ಕಿರಿದಾಗಿರುವುದರಿಂದ ನಾಲ್ಕೈದು ಬಡಾವಣೆಗಳಿಗೆ ನೀರು ನುಗ್ಗುತ್ತಿದೆ. ಸೇತುವೆ ಬಳಿ ರಾಜಕಾಲುವೆ ವಿಸ್ತರಿಸಲು ₹42 ಕೋಟಿ ಮೊತ್ತದ ಯೋಜನೆ ಸಿದ್ಧವಾಗಿದ್ದು, ವಿನ್ಯಾಸಕ್ಕೆ ರೈಲ್ವೆ ಇಲಾಖೆಯೂ ಒಪ್ಪಿಗೆ ನೀಡಿದೆ. ಕೂಡಲೇ ಕಾಮಗಾರಿ ಆರಂಭಿಸಿ ಫೆಬ್ರುವರಿ ವೇಳೆಗೆ ಪೂರ್ಣಗೊಳಿಸಲಾಗುವುದು. ಸೇತುವೆ ದಾಟಿದ ನಂತರ ಇರುವ ರಾಜಕಾಲುವೆಯನ್ನೂ ಹಿಗ್ಗಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು’ ಎಂದು ಹೇಳಿದರು.

‘ರಾಜಕಾಲುವೆ ಮೇಲೆ ನಿರ್ಮಾಣ ಆಗಿರುವ ಮನೆಗಳನ್ನು ತೆರವುಗೊಳಿಸಲು ಸೂಚನೆ ನೀಡಿದ್ದೇನೆ. ರಾಜಕಾಲುವೆಗಳು ಸರಿಯಾದರೆ ಇಲ್ಲಿನ ಮೂರ್ನಾಲ್ಕು ಬಡಾವಣೆಗಳ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ’ ಎಂದರು.

‘ಕೆರೆ ಪ್ರದೇಶದಲ್ಲಿ ಮನೆಗಳನ್ನು ಕಟ್ಟಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ದೊಡ್ಡಬೆಟ್ಟಹಳ್ಳಿ ಕೆರೆ ಪ್ರದೇಶದಲ್ಲಿ ಬಡಾವಣೆ ನಿರ್ಮಿಸಲು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸಲಾಗಿದೆ’ ಎಂದರು.

ವಡ್ಡರಪಾಳ್ಯದ ರೈಲ್ವೆ ಸೇತುವೆಯ ಬಳಿ ರಾಜಕಾಲುವೆ ಗಾತ್ರ ಕಿರಿದಾಗುವುದರಿಂದ ಇಲ್ಲಿನ ಬಡಾವಣೆಗಳಲ್ಲಿ ಪ್ರವಾಹ ಸೃಷ್ಟಿಯಾಗುತ್ತಿರುವ ಬಗ್ಗೆ ‘ಪ್ರಜಾವಾಣಿ’ಯು ಶುಕ್ರವಾರದ ಸಂಚಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸಿ ಗಮನಸೆಳೆದಿತ್ತು.

ರಾಜಕಾಲುವೆ ಸ್ವಚ್ಛಗೊಳಿಸಲು ₹36 ಕೋಟಿ: ರಾಜಕಾಲುವೆ ಆಗಿಂದಾಗ್ಗೆ ಸ್ವಚ್ಛಗೊಳಿಸಲು ಸಂಸ್ಥೆಯೊಂದಕ್ಕೆ ವರ್ಷಕ್ಕೆ ₹36 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಮೂರು ತಿಂಗಳಿಗೊಮ್ಮೆ ರಾಜಕಾಲುವೆ ಸ್ವಚ್ಛಗೊಳಿಸುವ ಕಾರ್ಯವನ್ನು ಈ ಸಂಸ್ಥೆ ಕೈಗೊಳ್ಳುತ್ತಿದೆ. ಆದ್ದರಿಂದಲೇ ಕೆಲವೆಡೆ ಪ್ರವಾಹ ಆಗಿಲ್ಲ ಎಂದರು.



ಹೊರಮಾವು ವಡ್ಡರಪಾಳ್ಯದ ಶ್ರೀಸಾಯಿ ಬಡಾವಣೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಚಿವ ಬೈರತಿ ಬಸವರಾಜ್ ಅವರು ಸಮಸ್ಯೆ ವಿವರಿಸಿದರು

ವಲಯಕ್ಕೊಂದು ಕಾರ್ಯಪಡೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಂಟು ವಲಯಗಳಿದ್ದು, ವಲಯಕ್ಕೊಂದು ಕಾರ್ಯಪಡೆ ರಚಿಸಲಾಗುವುದು. ಅವುಗಳಿಗೆ ಸಚಿವರು ಅವುಗಳ ಮುಖ್ಯಸ್ಥರಾಗಿರುತ್ತಾರೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಾಸಕರು, ಸಂಸದರು, ವಿಧಾನ ಪರಿಷತ್ತಿನ ಸದಸ್ಯರು, ಎಂಜಿನಿಯರ್‌ಗಳು ಕಾರ್ಯಪಡೆಯ ಸದಸ್ಯರಾಗಿರುತ್ತಾರೆ. ಅಭಿವೃದ್ಧಿ ಕಾಮಗಾರಿ ಮತ್ತು ಪ್ರವಾಹ ಪರಿಹಾರ ಕಾಮಗಾರಿಗಳ ಬಗ್ಗೆ ಈ ಕಾರ್ಯಪಡೆಯೇ ನಿರ್ಧಾರ ಕೈಗೊಳ್ಳಲಿದೆ. ಎಲ್ಲಾ ರೀತಿಯ ಅಧಿಕಾರವನ್ನೂ ಈ ಕಾರ್ಯಪಡೆಗೆ ನೀಡಲಾಗುವುದು. ಈ ಸಂಬಂಧ ಇಂದೇ ಆದೇಶ ಹೊರಡಿಸಲಾಗುವುದು ಎಂದು ಹೇಳಿದರು.

ಭ್ರಷ್ಟ ಬಿಬಿಎಂಪಿ: ಮೋಹನ್ ದಾಸ್ ಪೈ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಆಗಿರುವ ಅನಾಹುತಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರನ್ನುದ್ದೇಶಿಸಿ ಟ್ವೀಟ್ ಮಾಡಿರುವ ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ, ‘ಸುಂದರವಾದ ನಮ್ಮ ಬೆಂಗಳೂರನ್ನು ಭ್ರಷ್ಟ ಬಿಬಿಎಂಪಿ ಆಳುತ್ತಿರುವ ಪರಿ ಇದು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಅವರು, ‘ಸರ್ ದಯವಿಟ್ಟು ಈ ಫೋಟೊ ನೋಡಿ, ಮಳೆಯ ನೀರನ್ನು ಕಳುಹಿಸುವುದಕ್ಕಾಗಿ ಒಳಚರಂಡಿ ವ್ಯವಸ್ಥೆಯನ್ನೇ ಹಾಳು ಮಾಡಲಾಗುತ್ತಿದೆ’ ಎಂದು ದೂರಿದ್ದಾರೆ.

ವ್ಯಕ್ತಿಯೊಬ್ಬರು ಒಳಚರಂಡಿ ವ್ಯವಸ್ಥೆಯ ಮ್ಯಾನ್ ಹೋಲ್‌ಗೆ ತೂತು ಕೊರೆದು ಮಳೆ ನೀರು ಸರಾಗವಾಗಿ ಸಾಗಲು ಅನುವು ಮಾಡಿಕೊಡುತ್ತಿರುವ ಫೋಟೊ ಒಂದನ್ನು ತಮ್ಮ ಟ್ವೀಟ್ ಜತೆ ಪೈ ಹಂಚಿಕೊಂಡಿದ್ದಾರೆ.

‘ಭ್ರಷ್ಟ ಬಿಜೆಪಿ ಎನ್ನಿ’: ಪೈ ಟ್ವೀಟ್ ಕುರಿತು ಶುಕ್ರವಾರ ಪ್ರತಿಕ್ರಿಯಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ‘ಭ್ರಷ್ಟ ಬಿಬಿಎಂಪಿ ಎನ್ನಬೇಡಿ, ಭ್ರಷ್ಟ ಬಿಜೆಪಿ ಎಂದು ಹೇಳಬೇಕು’ ಎಂದರು.

‘ಬಿಬಿಎಂಪಿಯಲ್ಲಿ ಆಡಳಿತ ನಡೆಸುತ್ತಿರುವುದು ಬಿಜೆಪಿ ಸರ್ಕಾರ. ಬೆಂಗಳೂರು ಉಸ್ತುವಾರಿಯನ್ನು ಮುಖ್ಯಮಂತ್ರಿಯೇ ಹೊಂದಿದ್ದಾರೆ. ನಗರದ ಸಚಿವರು ಅನುದಾನ ಲೂಟಿ ಮಾಡಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

4,152 ವಿದ್ಯುತ್ ಕಂಬಗಳಿಗೆ ಹಾನಿ

ಬೆಂಗಳೂರು: ಧಾರಾಕಾರ ಮಳೆ ಮತ್ತು ಗಾಳಿಗೆ ಕಳೆದ ಎರಡು ವಾರಗಳಲ್ಲಿ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ 4,152ಕ್ಕೂ ಹೆಚ್ಚು ವಿದ್ಯುತ್ ಕಂಬಗಳು, 261 ವಿದ್ಯುತ್ ಪರಿವರ್ತಕಗಳು ಹಾಳಾಗಿವೆ. 2 ಕಂಬಗಳಲ್ಲಿ ಅಳವಡಿಸುವ ಸಾಧನಗಳೂ ಹಾನಿಗೊಳಗಾಗಿದ್ದು, 128 ಕಡೆ ಈ ಸಮಸ್ಯೆ ಕಂಡುಬಂದಿದೆ.

ಹಾನಿಗೊಳಗಾದ ವಿದ್ಯುತ್ ಕಂಬಗಳನ್ನು ಬದಲಿಸಲಾಗಿದೆ. ಮೇ 17ರಂದು ಸುರಿದ ಮಳೆಗೆ ಬೆಂಗಳೂರು ನಗರ ಸೇರಿ 8 ಜಿಲ್ಲೆಗಳಲ್ಲಿ 312 ಕಂಬಗಳು ಮುರಿದಿದ್ದು, 27 ವಿದ್ಯುತ್ ಪರಿವರ್ತಕಗಳು ಮತ್ತು ಎರಡು ಕಂಬಗಳಲ್ಲಿ ಅಳವಡಿಸಿದ 10 ಸಾಧನಗಳು ಹಾನಿಗೊಳಗಾಗಿವೆ. ಮೇ 18 ರಂದು, 82 ವಿದ್ಯುತ್ ಕಂಬಗಳು, 5 ಟಿ.ಸಿ ಮತ್ತು ಎರಡು ಕಂಬಗಳಲ್ಲಿ ಅಳವಡಿಸುವ 6 ಸಾಧನಗಳು ಹಾನಿಯಾಗಿವೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಉಪಕೇಂದ್ರ ಮುಳುಗಡೆ: ಭಾರಿ ಮಳೆಗೆ ಮೇ 17 ರಂದು ಬೆಂಗಳೂರಿನ ನಾಗವಾರ ಸಮೀಪದ ಗೆದ್ದಲಹಳ್ಳಿಯಲ್ಲಿರುವ 66/11 ಕೆವಿ ಉಪಕೇಂದ್ರ ನೀರಿನಲ್ಲಿ ಮುಳುಗಿತ್ತು. ಶಿವಾಜಿನಗರ ಬೆಸ್ಕಾಂ ವಿಭಾಗದ ಸಿಬ್ಬಂದಿ ರಾತ್ರಿ 12 ಗಂಟೆಗೆ ಜೆಸಿಬಿ ಸಹಾಯದಿಂದ ಕೆಪಿಟಿಸಿಎಲ್ ಆವರಣ ಗೋಡೆ ಒಡೆದು ಸುಮಾರು 1 ಕಿ.ಮೀ. ದೂರದವರೆಗೆ ಪಕ್ಕದ ಜಮೀನಿನಲ್ಲಿ ಕಾಲುವೆ ಮಾಡಿ, ನೀರು ಹೊರಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ವಡ್ಡರಪಾಳ್ಯ, ರಾಜಣ್ಣ ಬಡಾವಣೆ, ಗೆದ್ದಲಹಳ್ಳಿ, ಬೈರತಿ ಸುತ್ತಲಿನ ಪ್ರದೇಶದ ಸುಮಾರು 28ಸಾವಿರ ಗ್ರಾಹಕರಿಗೆ ಮಂಗಳವಾರ ರಾತ್ರಿ 3 ಗಂಟೆ ವೇಳೆಗೆ ವಿದ್ಯುತ್ ಪೂರೈಸಲಾಗಿದೆ ಎಂದು ಶಿವಾಜಿನಗರ ವಿಭಾಗದ ಬೆಸ್ಕಾಂ ಅಧಿಕಾರಿಗಳು ತಿಳಿಸಿದರು. ಗೆದ್ದಲಹಳ್ಳಿ ಉಪಕೇಂದ್ರವು ಭಾರಿಮಳೆಗೆ 2020ರಲ್ಲೂ ಮುಳುಗಡೆಯಾಗಿತ್ತು. ಆಗ ವಿದ್ಯುತ್ ಸಂಪರ್ಕ ಸರಿಪಡಿಸಲು 15 ಗಂಟೆಗಳು ಹೆಚ್ಚು ಕಾಲ ತಗಲಿತ್ತು ಎಂದು ಬೆಸ್ಕಾಂ ಶಿವಾಜಿನಗರ ವಿಭಾಗದ ಅಧಿಕಾರಿಗಳು ತಿಳಿಸಿದರು.



ಸಮಾವೇಶದಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹಾಗೂ ನಿರ್ಮಲಾನಂದನಾಥ ಸ್ವಾಮೀಜಿ ಚರ್ಚಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರಿನ ಕಣ ಕಣದಲ್ಲೂ ಅಡಗಿದೆ ತಂತ್ರಜ್ಞಾನ: ಅಶ್ವಿನಿ ವೈಷ್ಣವ್

ಬೆಂಗಳೂರು: ‘ಅಯೋಧ್ಯೆಯ ಪ್ರತಿ ಕಣದಲ್ಲೂ ರಾಮನಿರುವಂತೆ ಬೆಂಗಳೂರಿನ ಕಣ ಕಣದಲ್ಲಿ ತಂತ್ರಜ್ಞಾನ ಅಡಗಿದೆ. ಇದು ತಂತ್ರಜ್ಞಾನದ ನಗರ’ ಎಂದು ಕೇಂದ್ರ ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಇಂಡಿಯಾ ಫೌಂಡೇಷನ್ ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಇಂಡಿಯಾ ಐಡಿಯಾಸ್’ ಸಮಾವೇಶದಲ್ಲಿ ಮಾತನಾಡಿದರು.

‘ಬೆಂಗಳೂರಿನ ಜನರು ತಜ್ಞರಾಗಿದ್ದಾರೆ. ನಾನು ಅವರಿಗಿಂತ ಹೆಚ್ಚಾಗಿ ಅರಿತಿಲ್ಲ’ ಎಂದು ಬೆಂಗಳೂರಿನ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ದೇಶ ಮತ್ತು ಸಮಾಜದ ಅಭಿವೃದ್ಧಿಗೆ ನಾವೇನು ಮಾಡಬೇಕು? ಡಿಜಿಟಲ್ ತಂತ್ರಜ್ಞಾನ, ತಾಂತ್ರಿಕತೆಯನ್ನು ಯಾವ ರೀತಿ ಬಳಸಿಕೊಳ್ಳಬಹುದು ಎಂದು ವಿವರಿಸಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ‘ನಮ್ಮ ಪೂರ್ವಜರು ಹೇಳಿದ ಅಂಶಗಳೇ ಈಗ ವಿಜ್ಞಾನದ ಹೆಸರಿನಲ್ಲಿ ಮುಂಚೂಣಿಗೆ ಬರುತ್ತಿವೆ. ತಂತ್ರಜ್ಞಾನ ಅಳವಡಿಕೆ ತಪ್ಪಲ್ಲ. ಆದರೆ, ನಮ್ಮತನ ಕಳೆದುಕೊಳ್ಳಬಾರದು’ ಎಂದರು.

‘ಭಾರತವನ್ನು ನಾಗರಿಕತೆಯ ತೊಟ್ಟಿಲು ಹಾಗೂ ಗಣಿತ ಮತ್ತು ವಿಜ್ಞಾನದ ತವರು ಎಂದು ಕರೆಯಲಾಗಿದೆ. ಈಗ ತಂತ್ರಜ್ಞಾನದಲ್ಲೂ ನಾವು ಮುಂದಿದ್ದೇವೆ. ಆಧುನಿಕ ತಂತ್ರಜ್ಞಾನಗಳಿಂದ ಸಮಾಜಕ್ಕೆ ಅನುಕೂಲವಾಗುತ್ತಿದೆ’ ಎಂದರು.

‘ಶೇಕ್ಸ್‌ಪಿಯರ್‌ನ ಶ್ರೀಮತಿ’ ನಾಟಕ ಪ್ರದರ್ಶನ ಇಂದು

ಬೆಂಗಳೂರು: ಕ್ರಿಯೇಟಿವ್ ಥಿಯೇಟರ್ ತಂಡದ ಸದಸ್ಯರು ಜೆ.ಪಿ.ನಗರದ 3ನೇ ಹಂತದಲ್ಲಿರುವ ವ್ಯೋಮಾ ಥಿಯೇಟರ್‌ನಲ್ಲಿ ಶನಿವಾರ ಸಂಜೆ 6 ಮತ್ತು ರಾತ್ರಿ 8 ಗಂಟೆಗೆ ‘ಶೇಕ್ಸ್‌ಪಿಯರ್‌ನ ಶ್ರೀಮತಿ’ ನಾಟಕ ಪ್ರದರ್ಶನ ಹಮ್ಮಿಕೊಂಡಿದ್ದಾರೆ.

ಉದಯ ಇಟಗಿ ರಚನೆಯ ಈ ನಾಟಕವನ್ನು ವಿಶ್ವರಾಜ್ ಪಾಟೀಲ ನಿರ್ದೇಶಿಸಿದ್ದಾರೆ. ಗಜಾನನ ನಾಯಕ್ ಅವರ ಧ್ವನಿ ಸಂಯೋಜನೆ, ಎನ್. ಮಂಗಳಾ ಅವರ ವಸ್ತ್ರವಿನ್ಯಾಸ, ವಿಶ್ವನಾಥ್ ಮಂಡಿ ಅವರ ರಂಗಸಜ್ಜಿಕೆ, ರಾಮಕೃಷ್ಣ ಕನ್ನರ್ಪಾಡಿ ಅವರ ಪ್ರಸಾಧನವಿದೆ. ಕಲಾವಿದೆ ಲಕ್ಷ್ಮಿ ಚಂದ್ರಶೇಖರ್ ಅಭಿನಯಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಕಸಾಪ: ಸಾಹಿತ್ಯ ಸಮ್ಮೇಳನ ಮುಂದೂಡಿ’

ಬೆಂಗಳೂರು: ಹಾವೇರಿಯಲ್ಲಿ 2022ರ ಸೆ.23 ರಿಂದ ಸೆ.25 ರವರೆಗೆ ನಡೆಸಲು ನಿರ್ಧರಿಸಿದ್ದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದೂಡಿ, ನ.11ರಿಂದ 13 ರವರೆಗೆ ನಡೆಸಲು ಅವಕಾಶ ಮಾಡಿಕೊಡುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ್ ಹೆಬ್ಬಾರ್ ಮತ್ತು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರಿಗೆ ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಏ.23ರಂದು ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಒಮ್ಮತದಿಂದ ದಿನಾಂಕ ನಿಗದಿಪಡಿಸಲಾಗಿತ್ತು. ಸಮ್ಮೇಳನ ಮುಂದೂಡುವಂತೆ ಪರಿಷತ್ತಿನ ಅಧ್ಯಕ್ಷರಿಗೆ ಪತ್ರ ಬರೆದಿದ್ದ ತರಳಬಾಳು ಬೃಹನ್ಮಠದ ಕಾರ್ಯದರ್ಶಿ, ‘ಸೆ.23 ಮತ್ತು ಸೆ.24ರಂದು ಬೃಹನ್ಮಠದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ ಶ್ರದ್ಧಾಂಜಲಿ ಸಮಾರಂಭ ಇದೆ. ಹಾವೇರಿ, ರಾಣೇಬೆನ್ನೂರು, ರಟ್ಟಿಹಳ್ಳಿ, ಹಿರೇಕೆರೂರು ಮೊದಲಾದ ಭಾಗಗಳಿಂದ ಬರುವ ಭಕ್ತರಿಗೆ ತೊಂದರೆಯಾಗಲಿದೆ. ಹಾಗಾಗಿ ಬೇರೆ ದಿನ ಸಮ್ಮೇಳನ ನಡೆಸಿ’ ಎಂದು ಮನವಿ ಮಾಡಿಕೊಂಡಿದ್ದರು.

‘ಸಮ್ಮೇಳನದ ದಿನಾಂಕಗಳನ್ನು ಮುಂದೂಡುವಂತೆ ಅನೇಕರು ಮನವಿ ಸಲ್ಲಿಸಿದ್ದಾರೆ. ವಿಧಾನ ಪರಿಷತ್ತು ಚುನಾವಣೆಯಿಂದಾಗಿ ಜೂ. 17ರವರೆಗೂ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರಲಿದೆ. ಹೀಗಾಗಿ, ಸಮ್ಮೇಳನದ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಸಚಿವರು, ಶಾಸಕರು ಸಮ್ಮೇಳನದ ಪೂರ್ವಸಿದ್ಧತಾ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಸಮ್ಮೇಳನದ ತಯಾರಿಗೆ ತೊಂದರೆಯಾಗಲಿದೆ’ ಎಂದು ಮಹೇಶ ಜೋಶಿ ಅವರು ಪತ್ರದಲ್ಲಿ ವಿವರಿಸಿದ್ದಾರೆ.

‘ಹಾವೇರಿ ಜಿಲ್ಲೆಯವರಾದ ಕನಕದಾಸರ ಜಯಂತಿ ನ.11ರಂದು ಇದೆ. ಸಾಹಿತ್ಯ ಸಮ್ಮೇಳನದಲ್ಲೂ ಅವರಿಗೆ ಸೂಕ್ತ ಗೌರವ ಸಲ್ಲಿಸಬೇಕು. ಹಾಗಾಗಿ ಕನ್ನಡ ರಾಜ್ಯೋತ್ಸವ ತಿಂಗಳಲ್ಲೇ ಸಮ್ಮೇಳನ ನಡೆಸಲು ಅವಕಾಶ ನೀಡಬೇಕು’ ಎಂದು ಹೇಳಿದ್ದಾರೆ.

ಚಂದ್ರ ಆರ್ಯಗೆ ಕಸಾಪ ಆಹ್ವಾನ

ಬೆಂಗಳೂರು: ಮುಂಬರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸುವಂತೆ ಕೆನಡಾ ಸಂಸತ್ತಿನಲ್ಲಿ ಕನ್ನಡ ಭಾಷಣ ಮಾಡಿದ ಚಂದ್ರ ಆರ್ಯ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರು ಮನವಿ ಮಾಡಿದ್ದಾರೆ.

‘ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನದ ಸಿದ್ಧತೆ ಕೈಗೊಳ್ಳಲಾಗಿದೆ. 3 ದಿನಗಳ ನುಡಿ ಜಾತ್ರೆಯ ಮೊದಲ ದಿನ ತಾವು ವಿಶೇಷ ಅತಿಥಿಯಾಗಿ ಭಾಗವಹಿಸಿ, ಸಮಾರಂಭದ ಘನತೆ ಹೆಚ್ಚಿಸಬೇಕು’ ಎಂದು ಪತ್ರದಲ್ಲಿ ಕೋರಿದ್ದಾರೆ. ‘ಕೆನಡಾ ದಲ್ಲಿ ತಮ್ಮ ಮಾರ್ಗದರ್ಶನದಲ್ಲಿ ಪರಿಷತ್ತಿನ ಘಟಕ ಸ್ಥಾಪಿಸಲು ಉತ್ಸುಕರಾಗಿದ್ದೇವೆ’ ಎಂದು ಹೇಳಿದ್ದಾರೆ.

ಕೆನಡಾ ಸಂಸತ್: ಕನ್ನಡದಲ್ಲಿ ಭಾಷಣ

ಒಂದನೇ ಪುಟದಿಂದ...

‘ಗೌರವಾನ್ವಿತ ಸಭಾಪತಿಗಳೆ, ಕೆನಡಾ ಸಂಸತ್‌ನಲ್ಲಿ ಕನ್ನಡದಲ್ಲಿ ಮಾತನಾಡಲು ಅವಕಾಶ ಸಿಕ್ಕಿರುವುದಕ್ಕೆ ಸಂತೋಷವಾಗುತ್ತಿದೆ. ಇದು ಕನ್ನಡಿಗರಿಗೆ ಹೆಮ್ಮೆಯ ಕ್ಷಣವಾಗಿದೆ. ಕೆನಡಾ ದೇಶದ ಕನ್ನಡಿಗರು ಈ ಸಂಸತ್ತಿನಲ್ಲಿ 2018ರಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದ್ದರು. ಇದೀಗ, ನಾನು ಕನ್ನಡದಲ್ಲಿ ಮಾತನಾಡುತ್ತಿದ್ದೇನೆ. ರಾಷ್ಟ್ರಕವಿ ಕುವೆಂಪು ಬರೆದಿರುವ, ನಟಸಾರ್ವಭೌಮ ಡಾ. ರಾಜ್ ಕುಮಾರ್ ಹಾಡಿರುವ ಕೆಲವು ಹಾಡಿನ ಪದಗಳೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಎಲ್ಲಾದರು ಇರು.. ಎಂತಾದರು ಇರು.. ಎಂದೆಂದಿಗೂ ನೀ ಕನ್ನಡವಾಗಿರು’ ಎಂದು ಚಂದ್ರ ಆರ್ಯ ಅವರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ.

ಚಂದ್ರ ಆರ್ಯ ಅವರ ಭಾಷಣಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಚಂದ್ರ ಆರ್ಯ ಅವರು ಕನ್ನಡದ ಶ್ರೇಷ್ಠತೆಯನ್ನು ವಿಶ್ವಮಟ್ಟದಲ್ಲಿ ಪಸರಿಸಿದ್ದಾರೆ. ಬದುಕಿನಲ್ಲಿ ಎಷ್ಟೇ ದೊಡ್ಡವರಾಗಿ ಬೆಳೆದರೂ ಯಾವಾಗಲೂ ತನ್ನ ಬೇರುಗಳನ್ನು ನೆನಪಿಟ್ಟುಕೊಳ್ಳಬೇಕು’ ಎಂದಿದ್ದಾರೆ.

'ಮಕ್ಕಳಿಗೆ ಸಂವಿಧಾನದ ಆಶಯ ಕಲಿಸಿ, ಆರ್‌ಎಸ್‌ಎಸ್ ಹುಳ ಬಿಡಬೇಡಿ'

ಯಾರು ದೇಶದ್ರೋಹಿಗಳು: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಭಗತ್‌ಸಿಂಗ್ ಅವರಂಥ ಹುತಾತ್ಮರ ಪಠ್ಯ ಕೈಬಿಟ್ಟವರು ದೇಶದ್ರೋಹಿಗಳೋ, ಅದನ್ನು ಮರಳಿ ಹಾಕಿಸಿದವರು ದೇಶದ್ರೋಹಿಗಳೋ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

'ಪಠ್ಯದಿಂದ ಭಗತ್‌ಸಿಂಗ್ ಅಧ್ಯಾಯ ತೆಗೆದಿದ್ದು ಹಾಗೂ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಭಾಷಣ ಸೇರ್ಪಡೆ ಮಾಡಿದ್ದು ಎರಡೂ ತಪ್ಪು ಎಂದು ನಾನು ಹೇಳಿದ್ದೆ. ಇಷ್ಟಕ್ಕೇ ಬಿಜೆಪಿಯವರು ನನ್ನನ್ನು ದೇಶದ್ರೋಹಿ ಎನ್ನುತ್ತಾರೆ' ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಹೆಡಗೇವಾರ್ ಆರ್‌ಎಸ್‌ಎಸ್ ಸ್ಥಾಪನೆ ಮಾಡಿದ್ದಕ್ಕೆ ಅವರಿಗೆ ಈಗ ಗೌರವ ಕೊಡುತ್ತಿದ್ದಾರೆ. ಇದೇ ಆರ್‌ಎಸ್‌ಎಸ್‌ನಲ್ಲಿ ನಾಥೂರಾಮ್ ಗೋಡ್ಸೆ ಅವರಂಥ ಅಪರಾಧಿಗಳು ಹುಟ್ಟಿಕೊಂಡರು. ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರನ್ನು ಬಿಟ್ಟು ಹೆಡಗೇವಾರ್ ಅವರನ್ನು ಮಕ್ಕಳಿಗೆ ಪರಿಚಯಿಸುವುದು ದೇಶದ್ರೋಹವೇ ಸರಿ' ಎಂದು ಅವರು ತಿರುಗೇಟು ನೀಡಿದರು.

'ಹೆಡಗೇವಾರ್ ಯಾವತ್ತಾದರೂ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ್ದಾರಾ? ದೇಶಕ್ಕಾಗಿ ಜೈಲಿಗೆ ಹೋಗಿದ್ದಾರಾ? ದೇಶಕ್ಕಾಗಿ ಜೀವವನ್ನೇ ತ್ಯಾಗ ಮಾಡಿದ ಭಗತ್‌ಸಿಂಗ್ ಬೇಕೋ, ಆರ್‌ಎಸ್‌ಎಸ್ ಕಟ್ಟಿದವರು ಬೇಕೋ? ಯಾರು ದೇಶದ್ರೋಹಿಗಳು ಎಂದು ಜನ ನಿರ್ಧರಿಸುತ್ತಾರೆ. ಸಂವಿಧಾನದ ಆಶಯಗಳನ್ನು ಮಕ್ಕಳಿಗೆ ಕಲಿಸುವುದನ್ನು ಬಿಟ್ಟು ಆರ್‌ಎಸ್‌ಎಸ್ ಹುಳಗಳನ್ನು ಬಿಡಬೇಡಿ' ಎಂದೂ ಅವರು ದೂರಿದರು.

'ದೇಶ ರಕ್ಷಣೆಗೆ ಖಾಕಿ ಚಡ್ಡಿ ತೊಟ್ಟವರು ಬೇಕಿಲ್ಲ'

ಮಂಗಳೂರು: 'ದೇಶದ ರಕ್ಷಣೆಗೆ ಪೊಲೀಸರು ಹಾಗೂ ಸೈನಿಕರಿದ್ದಾರೆ. ಅದಕ್ಕಾಗಿ ಖಾಕಿ ಚಡ್ಡಿ ಹಾಗೂ ಕರಿ ಟೋಪಿ ಧರಿಸಿದವರು ಬೇಕಾಗಿಲ್ಲ' ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸಂಪಾದಿಸಿರುವ, ವಡ್ಡರ್ಸೆ ರಘುರಾಮ ಶೆಟ್ಟಿ ಅವರ ಬರಹಗಳ ಸಂಕಲನ 'ಬೇರೆಯೇ ಮಾತು' ಬಿಡುಗಡೆಗೊಳಿಸಿ ಅವರು ಶುಕ್ರವಾರ ಮಾತನಾಡಿದರು.

'ರಾಜ್ಯದಲ್ಲಿ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ಕೆಲವು ಬೆಳವಣಿಗೆಗಳು ಭಯ ಹುಟ್ಟಿಸುತ್ತವೆ. ಧಾರ್ಮಿಕ ರಾಜಕಾರಣ ಮಾಡಿದ್ದಕ್ಕೆ ಶ್ರೀಲಂಕಾದಲ್ಲಿ ಏನಾಗಿದೆ ಎಂಬುದು ನಮ್ಮ ಕಣ್ಣ ಮುಂದಿದೆ. ಧ್ವಜ ಹಿಡಿದು 'ಭಾರತ ಮಾತಾಕಿ ಜೈ' ಎಂದು ಘೋಷಿಸುವುದೇ ದೇಶಪ್ರೇಮವಲ್ಲ' ಎಂದರು.

ಚಂದ್ರ ಆರ್ಯಗೆ ಬೆಳಗಾವಿ ನಂಟು

ಬೆಳಗಾವಿ: ಕೆನಡಾ ಸಂಸತ್ತಿನಲ್ಲಿ ಕನ್ನಡದಲ್ಲಿ ಭಾಷಣ ಮಾಡಿ ಕನ್ನಡಿಗರ ಮನ ಗೆದ್ದಿರುವ ಅಲ್ಲಿನ ಸಂಸದ ಚಂದ್ರ ಆರ್ಯ ಅವರಿಗೆ ಕುಂದಾನಗರಿ ಬೆಳಗಾವಿಯ ನಂಟಿದೆ. ಇಲ್ಲಿನ ಶ್ರೀನಗರ ಕಾಲೊನಿಯ ಗೋಪಾಲ ಗಾಯತ್ರಿ–ರಮಾ ಗಾಯತ್ರಿ ದಂಪತಿಯ ಪುತ್ರಿ ಸಂಗೀತಾ ಅವರನ್ನು ಚಂದ್ರ ವಿವಾಹವಾಗಿದ್ದಾರೆ.

ಗೋಕರ್ಣ ಮೂಲದ ಗೋಪಾಲ ಅವರು ಪ್ರಾಂಶುಪಾಲರಾಗಿ ನಿವೃತ್ತಿಯಾದ ಬಳಿಕ ಇಲ್ಲಿಗೆ ಬಂದು ವಾಸವಿದ್ದರು. ಅವರು ಕಳೆದ ಅಕ್ಟೋಬರ್‌ನಲ್ಲಿ ನಿಧನ ರಾಗಿದ್ದು, ರಮಾ ಸದ್ಯ ಇಲ್ಲಿ ವಾಸವಿದ್ದಾರೆ. ಚಂದ್ರ ಅವರು ಈ ಹಿಂದೆ ಬೆಳಗಾವಿಗೂ ಭೇಟಿ ನೀಡಿದ್ದರು.

'ಗೋಡ್ಸೆಯೂ ಪಠ್ಯಪುಸ್ತಕ ಸೇರಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಇಲಾಖೆ ಪಠ್ಯಪುಸ್ತಕ ಮರು ಪರಿಷ್ಕರಣೆ ಪ್ರಕ್ರಿಯೆ ಪೂರ್ವಗ್ರಹಪೀಡಿತವಾಗಿದೆ. ಇದೇ ಪದ್ಧತಿ ಮುಂದುವರಿದರೆ ಮುಂದೆ ಗೋಡ್ಸೆ ಕುರಿತ ಅಧ್ಯಾಯವು ಪಠ್ಯಪುಸ್ತಕಗಳಲ್ಲಿ ಸೇರಿಸುವ ದಿನಗಳು ದೂರವಿಲ್ಲ' ಎಂದು ಚಿಂತಕರು, ಶಿಕ್ಷಣ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಬಹಿರಂಗ ಪತ್ರ ಬರೆದಿರುವ ಅವರು, 'ಪಠ್ಯಪುಸ್ತಕ ರಚನೆಯಲ್ಲಿ ಯಾವುದೇ ರೀತಿಯ ಪಾರದರ್ಶಕತೆ ಕಂಡು ಬಂದಿಲ್ಲ' ಎಂದು ತಿಳಿಸಿದ್ದಾರೆ.

'ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ. ಹೆಡಗೇವಾರ್ ಅವರ ಭಾಷಣವನ್ನು ಪಠ್ಯದಲ್ಲಿ ಸೇರಿಸಿರುವುದನ್ನು ಸಮರ್ಥಿಸಿಕೊಂಡಿರುವ ಸಚಿವರು, ಜವಾಬ್ದಾರಿಯುತ ಮತ್ತು ಸಂವಿಧಾನಕ್ಕೆ ಬದ್ಧರಾಗಿ ನಡೆದುಕೊಂಡಿಲ್ಲ.ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ಉಡಾಫೆಯಿಂದ ಮಾತನಾಡಿದ್ದಾರೆ. ಹೀಗಾಗಿ, ಯಾವುದೇ ಕಾರಣಕ್ಕೂ ಪಠ್ಯಪುಸ್ತಕದಲ್ಲಿ ಬದಲಾವಣೆ ಮಾಡಬಾರದು' ಎಂದು ಆಗ್ರಹಿಸಿದ್ದಾರೆ.

'ಶಿಕ್ಷಣ ತಜ್ಞರಲ್ಲದ, ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಸಂಶೋಧನೆ ಕೈಗೊಳ್ಳದ ರೋಹಿತ್ ಚಕ್ರತೀರ್ಥ ಅವರನ್ನು ಯಾವ ಮಾನದಂಡದಲ್ಲಿ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ? ಈ ಪ್ರಶ್ನೆಗೆ ಸಂಬಂಧಪಟ್ಟವರು ಉತ್ತರ ನೀಡಿಲ್ಲ. ಈ ಸಮಿತಿ ಏಕಪಕ್ಷೀಯವಾಗಿ 10ನೇ ತರಗತಿಯ ಪಠ್ಯ ಪರಿಷ್ಕರಿಸಲಾಗಿದೆ' ಎಂದಿದ್ದಾರೆ.

'ಪಠ್ಯಪುಸ್ತಕಗಳ ರಚನೆ ಮತ್ತು ಪರಿಷ್ಕರಣೆ ಶಿಕ್ಷಣ ತಜ್ಞರ ಮೂಲಕವೇ ನಡೆಯಬೇಕು. ಚುನಾವಣಾ ಆಯೋಗದಂತೆ ಪಠ್ಯ ಪುಸ್ತಕಗಳ ರಚನೆ ಮತ್ತು ಪರಿಶೀಲನೆಗೆ ಒಂದು ಸ್ವಾಯತ್ತ ಆಯೋಗ ರಚಿಸಬೇಕು ' ಎಂದು ಸಲಹೆ ನೀಡಿದ್ದಾರೆ.

ಈ ಪತ್ರಕ್ಕೆ ಕೆ.ಮರುಳಸಿದ್ದಪ್ಪ, ವಿಜಯಾ, ರಾಜೇಂದ್ರ ಚೆನ್ನಿ, ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಟಿ.ಆರ್.ಚಂದ್ರಶೇಖರ್, ಹಿ.ಶಿ.ರಾಮಚಂದ್ರೇಗೌಡ, ವಿ.ಪಿ. ನಿರಂಜನಾರಾಧ್ಯ, ಕಾಳೇಗೌಡ ನಾಗವಾರ, ಕುಂ.ವೀರಭದ್ರಪ್ಪ, ರಹಮತ್‌ತರಿಕೆರೆ, ವಸಂತಬನ್ನಾಡಿ ಸೇರಿದಂತೆ 71 ಮಂದಿ ಒಪ್ಪಿಗೆ ಸೂಚಿಸಿದ್ದಾರೆ.

'ಜಾಮಿಯಾ ಮಸೀದಿ ವಿಡಿಯೊ ಸಮೀಕ್ಷೆಗೆ ಒತ್ತಾಯ'

ಮಂಡ್ಯ: 'ಜ್ಞಾನವಾಪಿ ಮಸೀದಿಯಲ್ಲಿ ನಡೆಸಿದಂತೆ ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯಲ್ಲೂ ವಿಡಿಯೋಗ್ರಫಿ ಸಮೀಕ್ಷೆಗೆ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್, ಬಜರಂಗದಳದ ಸದಸ್ಯರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

'ಜಾಮಿಯಾ ಮಸೀದಿ ಮೂಲತಃ ಮೂಡಲಬಾಗಿಲು ಆಂಜನೇಯನ ದೇವಾಲಯವಾಗಿತ್ತು. ಟಿಪ್ಪು ಸುಲ್ತಾನ್, ದೇವಾಲಯವನ್ನು ನಾಶ ಮಾಡಿ ಮಸೀದಿ ನಿರ್ಮಿಸಿದ್ದಾಗಿ ದಾಖಲೆಗಳಿವೆ' ಎಂದು ಮನವಿಯಲ್ಲಿ ಹೇಳಲಾಗಿದೆ.

ಪಿಎಸ್‌ಐ: ಬಂಧಿತರಿಂದ ₹ 2.46 ಕೋಟಿ ಜಪ್ತಿ

ಮಾಹಿತಿ ಪಡೆದ ಇ.ಡಿ, ಎಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿತ ಆರೋಪಿಗಳು ಮತ್ತು ಅವರ ಸ್ನೇಹಿತರಿಂದ ಈವರೆಗೆ ₹ 2.46 ಕೋಟಿ ಜಪ್ತಿ ಮಾಡಿದ್ದು, ಇದರ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ), ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಧಿಕಾರಿಗಳು ಮಾಹಿತಿ ಪಡೆದುಕೊಂಡಿದ್ದಾರೆ.

ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಆರೋಪಿಗಳ ಮನೆ ಹಾಗೂ ಇತರೆಡೆ ಮೇಲಿಂದ ಮೇಲೆ ದಾಳಿ ಮಾಡುತ್ತಿದ್ದಾರೆ. ಪೊಲೀಸ್ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಶ್ರೀಧರ್ ಬಳಿ ₹ 2.16 ಕೋಟಿ ಸಿಕ್ಕಿದೆ. ಉಳಿದಂತೆ, ಮಧ್ಯವರ್ತಿ ಕೇಶವಮೂರ್ತಿ ಮನೆಯಲ್ಲಿ ₹ 30 ಲಕ್ಷ ಜಪ್ತಿ ಮಾಡಲಾಗಿದೆ.

‘ಪಿಎಸ್‌ಐ ಹುದ್ದೆಗೆ ಅಭ್ಯರ್ಥಿಗಳನ್ನು ಅಕ್ರಮವಾಗಿ ಆಯ್ಕೆ ಮಾಡಲು ನೇಮಕಾತಿ ವಿಭಾಗದ ನೌಕರರು ಹಾಗೂ ಇತರರು, ಲಕ್ಷಾಂತರ ರೂಪಾಯಿ ಪಡೆದುಕೊಂಡಿದ್ದಾರೆ. ಬಂಧಿತ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಅವರು ಹಣದ ಬಗ್ಗೆ ಮಾಹಿತಿ ಬಾಯ್ಬಿಡುತ್ತಿದ್ದಾರೆ. ಅದರನ್ವಯ ದಾಳಿ ಮಾಡಿ, ನಗದು ಜಪ್ತಿ ಮಾಡಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಸರ್ಕಾರಿ ನೌಕರರ ಬಳಿ ಕೋಟ್ಯಂತರ ರೂಪಾಯಿ ಸಿಗುತ್ತಿರುವುದು ಹಾಗೂ ಅಕ್ರಮದಲ್ಲಿ ಹಣದ ವ್ಯವಹಾರ ನಡೆದಿರುವುದರಿಂದ, ಜಾರಿ ನಿರ್ದೇಶನಾಲಯ ಮತ್ತು ಎಸಿಬಿ ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ. ನಮ್ಮಿಂದಲೂ ಮಾಹಿತಿ ಕೋರಿದ್ದಾರೆ’ ಎಂದೂ ತಿಳಿಸಿವೆ.

ಮತ್ತಷ್ಟು ಮಂದಿ ವಿಚಾರಣೆ: ‘ಪ್ರಕರಣದ ರೂವಾರಿ ಎನ್ನಲಾದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಪೊಲೀಸ್ ಪ್ರಧಾನ ಕಚೇರಿ ಸೂಪರಿಂಟೆಂಡೆಂಟ್ ಮಂಜುನಾಥ್ ವಿಚಾರಣೆ ಮುಂದುವರಿದಿದೆ. ಅಕ್ರಮದಲ್ಲಿ ಭಾಗಿಯಾಗಿದ್ದರು ಎನ್ನಲಾದ ಕೆಲವರ ಹೆಸರುಗಳನ್ನು ಅವರು ಬಾಯ್ಬಿಟ್ಟಿದ್ದಾರೆ. ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘2011ರಿಂದಲೇ ಪಿಎಸ್‌ಐ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಮಾಹಿತಿ ಇದೆ. ಸದ್ಯ 545 ಹುದ್ದೆಗಳ ನೇಮಕಾತಿ ಅಕ್ರಮದ ಬಗ್ಗೆ ತನಿಖೆ ನಡೆದಿದೆ. ಹಿರಿಯ ಅಧಿಕಾರಿಗಳ ಸಲಹೆ ಪಡೆದು ಉಳಿದ ನೇಮಕಾತಿ ಅಕ್ರಮ ಬಗ್ಗೆಯೂ ತನಿಖೆ ಆರಂಭಿಸಲಾಗುವುದು’ ಎಂದು ತಿಳಿಸಿವೆ.

ಜಾಮೀನು ಅರ್ಜಿ ವಜಾ: ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅಭ್ಯರ್ಥಿಗಳಾದ ರಚನಾ ಹನುಮಂತ ಹಾಗೂ ಎಸ್. ಜಾಗೃತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಮತ್ತೆ ನಾಲ್ವರ ಜಾಮೀನು ಅರ್ಜಿ ತಿರಸ್ಕಾರ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮ ಪ್ರಕರಣದಲ್ಲಿ ಬಂಧಿತರಾದ ನಾಲ್ವರ ಜಾಮೀನು ಅರ್ಜಿಯನ್ನು ಇಲ್ಲಿನ ಮೂರನೇ ಜೆಎಂಎಫ್‌ಸಿ ನ್ಯಾಯಾಲಯವು ಶುಕ್ರವಾರ ತಿರಸ್ಕರಿಸಿದೆ.

ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ, ಮುಖ್ಯಶಿಕ್ಷಕ ಕಾಶಿನಾಥ ಹಣಮಂತರಾಯ ಚಿಲ್, ಪ್ರಮುಖ ಆರೋಪಿ ರುದ್ರಗೌಡ ಡಿ. ಪಾಟೀಲ ಮತ್ತು ಅಭ್ಯರ್ಥಿ ಎನ್.ವಿ. ಸುನೀಲಕುಮಾರ ಅರ್ಜಿಗಳನ್ನು, ಮೂರನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ ನೇಸರಗಿ ತಿರಸ್ಕರಿಸಿದರು.

ಸಿಐಡಿ ಪರ ಸಹಾಯಕ ಸರ್ಕಾರಿ ಅಭಿಯೋಜಕ ಶಿವಶರಣಪ್ಪ ಹೋತಪೇಟ ವಾದ ಮಂಡಿಸಿದರು. 2021ರ ಅಕ್ಟೋಬರ್ 3ರಂದು 545 ಪಿಎಸ್‌ಐ ನೇಮಕಾತಿಗಾಗಿ ಪರೀಕ್ಷೆ ನಡೆದಿತ್ತು. ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಪರೀಕ್ಷೆ ಬರೆದ 11 ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇದ್ದರು. 7 ಅಭ್ಯರ್ಥಿಗಳೂ ಸೇರಿ ಒಟ್ಟು 32 ಮಂದಿಯನ್ನು ಸಿಐಡಿ ತಂಡ ಬಂಧಿಸಿದೆ.

ಜೂನ್‌ನಿಂದ ಲಸಿಕೆ ಅಭಿಯಾನ ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಕೋವಿಡ್ ಲಸಿಕೆ ಅಭಿಯಾನವನ್ನು ಚುರುಕುಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಜೂನ್‌ನಿಂದ ಎರಡು ತಿಂಗಳ ಅವಧಿಯ ‘ಹರ್ ಘರ್ ದಸ್ತಕ್ (ಪ್ರತಿ ಮನೆಗೂ ಲಸಿಕೆ)’ ಅಭಿಯಾನವನ್ನು ನಡೆಸಲು ನಿರ್ದೇಶಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯ ಈ ಕುರಿತಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ. ಎಲ್ಲ ಅರ್ಹ ಫಲಾನುಭವಿಗಳಿಗೆ ಲಸಿಕೆ ನೀಡುವ ಮೂಲಕ ಪೂರ್ಣ ಲಸಿಕೆ ನೀಡಿದ ಗುರಿ ಸಾಧಿಸಲು ತಿಳಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳ ಜೊತೆಗೆ ನಡೆದ ಸಭೆಯಲ್ಲಿ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು, ‘ಅಭಿಯಾನದ ವೇಳೆ ಯಾವುದೇ ಹಂತದಲ್ಲಿ ಲಸಿಕೆ ಪೋಲು ಆಗದಂತೆ ಜಾಗ್ರತೆ ವಹಿಸಬೇಕು’ ಎಂದು ಸೂಚಿಸಿದರು.

ಇ–ಹರಾಜು ಪ್ರಕ್ರಿಯೆ: ನಿಯಮದಲ್ಲಿ ಸಡಿಲಿಕೆ

ಕರ್ನಾಟಕದ ಅದಿರು ರಫ್ತಿಗೆ ಸುಪ್ರೀಂ ಕೋರ್ಟ್ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಗಳಿಂದ ಹೊರತೆಗೆಯಲಾದ ಕಬ್ಬಿಣದ ಅದಿರಿನ ರಫ್ತಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

ಅದಿರು ರಫ್ತಿಗೆ ಅವಕಾಶ ಕೋರಿ ಗಣಿ ಮಾಲೀಕರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು, ಅದಿರು ರಫ್ತಿಗೆ 11 ವರ್ಷಗಳ ನಂತರ ಹಸಿರು ನಿಶಾನೆ ನೀಡಿದೆ.

ಇ–ಹರಾಜು ಮೂಲಕ ಅದಿರು ಖರೀದಿಸುವುದಕ್ಕೆ ಸಾಕಷ್ಟು ಸಮಸ್ಯೆಗಳು ಇರುವುದರಿಂದ ಮಾರಾಟ ಪ್ರಕ್ರಿಯೆ



ನೀರಸವಾಗಿತ್ತು ಎಂದು ಹೇಳಿರುವ ಪೀಠ, ಇ–ಹರಾಜಿನ ಮೂಲಕ ರಾಜ್ಯದಲ್ಲಿ ಅದಿರು ಮಾರಾಟಕ್ಕೆ ಇದ್ದ ಕೆಲವು ಕಠಿಣ ನಿಯಮಗಳನ್ನು ಸಡಿಲಗೊಳಿಸಿ ಆದೇಶ ಹೊರಡಿಸಿದೆ.

ಇದರಿಂದಾಗಿ ಉಕ್ಕು ಉತ್ಪಾದನಾ ಘಟಕಗಳು ಸ್ಥಳೀಯವಾಗಿ ಅದಿರು ಖರೀದಿಸಲು ಇದ್ದ ಕಠಿಣ ನಿಯಮಗಳಿಂದ ರಿಯಾಯಿತಿ ದೊರೆತಂತಾಗಿದೆ.

ರಾಜ್ಯದ ಗಣಿಗಳಿಂದ ಹೊರತೆಗೆಯಲಾದ ಕಬ್ಬಿಣದ ಅದಿರನ್ನು ರಫ್ತು ಮಾಡುವ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳಿಗೆ ಸೂಚಿಸಿತ್ತು.

ಇದಕ್ಕೆ ಕಳೆದ ತಿಂಗಳು ಪ್ರತಿಕ್ರಿಯೆ ನೀಡಿದ್ದ ಕರ್ನಾಟಕ ಸರ್ಕಾರ, ಅದಿರು ರಫ್ತಿನ ವಿರುದ್ಧ ತನ್ನ ನಿಲುವು ಸ್ಪಷ್ಟಪಡಿಸಿತ್ತು.

ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಮತ್ತು ಜಿಲ್ಲೆಗಳಲ್ಲಿನ ಗಣಿಗಳಿಂದ ಅದಿರು ರಫ್ತು ಮಾಡುವುದಕ್ಕೆ ಸುಪ್ರೀಂ ಕೋರ್ಟ್ 2011ರಿಂದ ನಿಷೇಧ ಹೇರಿತ್ತು.

ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಅದಿರು ರಫ್ತು ನಿಷೇಧಿಸಬೇಕು, ಅದಿರು ಮಾರಾಟದ ಮೇಲೂ ಕಠಿಣ ಕ್ರಮ ಜರುಗಿಸಿ ನಿಯಮಾವಳಿ ರೂಪಿಸಬೇಕು ಎಂದು ಕೋರಿ ಧಾರವಾಡದ ಸಮಾಜ ಪರಿವರ್ತನಾ ಸಮುದಾಯ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಹೊರ ಗುತ್ತಿಗೆ: ಶೇ 33ರಷ್ಟು ನೌಕರಿ ಮಹಿಳೆಯರಿಗೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಿ ವಲಯದ ಅಂಗ ಸಂಸ್ಥೆಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ವಿವಿಧ ಹುದ್ದೆಗಳಿಗೆ ನೌಕರರನ್ನು ನೇಮಿಸುವಾಗ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವಂತೆ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಗುರುವಾರ ಸುತ್ತೋಲೆ ಹೊರಡಿಸಿದ್ದಾರೆ.

ಡೇಟಾ ಎಂಟ್ರಿ ಆಪರೇಟರ್ ಮತ್ತು ‘ಡಿ’ ದರ್ಜೆ ನೌಕರರ ಹೊರಗುತ್ತಿಗೆ ನೇಮಕಾತಿಗೆ ಸಂಬಂಧಿಸಿದ ಟೆಂಡರ್ ಮತ್ತು ಗುತ್ತಿಗೆದಾರರ ಜತೆಗಿನ ಒಪ್ಪಂದದ ಷರತ್ತುಗಳಲ್ಲಿ ಶೇ 33ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ನೀಡಬೇಕೆಂಬ ಅಂಶ ಸೇರಿಸಬೇಕು. ಎಲ್ಲ ಇಲಾಖೆಗಳ ಕಚೇರಿಗಳು, ಸ್ವಾಯತ್ತ ಸಂಸ್ಥೆಗಳು, ಅಂಗ ಸಂಸ್ಥೆಗಳಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲೂ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂದು ಸೂಚಿಸಿದ್ದಾರೆ.

ಬಣವೆ ಬಿದ್ದು ರೈತ ಸಾವು

ಹರಿಹರ: ತಾಲ್ಲೂಕಿನ ಬನ್ನಿಕೋಡಿನಲ್ಲಿ ಮಳೆಯಿಂದ ನೆನೆದ ಹುಲ್ಲಿನ ಬಣವೆ ಮೈಮೇಲೆ ಬಿದ್ದು, ಉಸಿರುಗಟ್ಟಿ ರೈತರೊಬ್ಬರು ಮೃತಪಟ್ಟಿದ್ದಾರೆ.

ಗ್ರಾಮದ ರೈತ ರೇವಣಪ್ಪ (54) ಮೃತರು. ಜಾನುವಾರಿಗೆ ಮೇವು ತರಲು ಹೋದಾಗ ಹುಲ್ಲು ತೆಗೆಯುತ್ತಿದ್ದಾಗ ಮಳೆಯಿಂದ ನೆನೆದ ಬಣವೆ ರೇವಣಪ್ಪ ಅವರ ಮೇಲೆ ಬಿದ್ದಿದೆ. ಉಸಿರುಕಟ್ಟಿ ಅವರು ಮೃತಪಟ್ಟಿದ್ದಾರೆ. ಈ ವೇಳೆ ರಕ್ಷಿಸಲು ಸ್ಥಳದಲ್ಲಿ ಯಾರೂ ಇರಲಿಲ್ಲ. ಹೀಗಾಗಿ ಅವರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಚನಭ್ರಷ್ಟ ಬಿಜೆಪಿ ಸರ್ಕಾರ: ಆಂಜನೇಯ

ಬೆಂಗಳೂರು: ‘ವಾಲ್ಮೀಕಿ ನಾಯಕ ಸಮುದಾಯಕ್ಕೆ ನ್ಯಾಯಯುತವಾಗಿ ಮೀಸಲಾತಿ ಹೆಚ್ಚಳ ಮಾಡುವುದಾಗಿ ಮಾತು ಕೊಟ್ಟಿದ್ದ ಬಿಜೆಪಿ, ಅಧಿಕಾರಕ್ಕೆ ಬಂದ ಬಳಿಕ ಅದನ್ನು ಈಡೇರಿಸದೇ ವಚನಭ್ರಷ್ಟವಾಗಿದೆ’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ದೂರಿದರು.

ಪರಿಶಿಷ್ಟರ ಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೂರ್ತಿ ಸಮಿತಿ ಸಲ್ಲಿಸಿರುವ ವರದಿ ಜಾರಿಗೆ ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುತ್ತಿರುವ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಅವರು ಭೇಟಿಯಾಗಿ ಮಾತನಾಡಿದರು.

ದಲಿತ ಸಂಘಟನೆಗಳು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ನಗರ ಜಿಲ್ಲಾಧಿಕಾರಿ ಕಚೇರಿವರೆಗೆ ಹಮ್ಮಿಕೊಂಡಿದ್ದ ಮೆರವಣಿಗೆ ಹಾಗೂ ಬಹಿರಂಗ ಸಭೆಯಲ್ಲಿ ಭಾಗವಹಿಸಿದರು. ‘ವಾಲ್ಮೀಕಿ ಸ್ವಾಮೀಜಿ ಧರಣಿ ಆರಂಭಕ್ಕೆ ಮುಂದಾಗುತ್ತಿದ್ದಂತೆಯೇ ಅವರ ಮನವೊಲಿಸುವ ಸಣ್ಣ ಪ್ರಯತ್ನವನ್ನು ಮಾಡಲಿಲ್ಲ ಎಂದರು. ದಲಿತ ಮುಖಂಡರಾದ ಶ್ರೀಧರ್ ಕಲಿವೀರ್. ಎಂ.ವೆಂಕಟಸ್ವಾಮಿ, ಎನ್.ಮೂರ್ತಿ, ಮೋಹನ ನಾಗರಾಜ್, ಹೆಣ್ಣೂರು ಶ್ರೀನಿವಾಸ, ಮಾವಳ್ಳಿ ಶಂಕರ್ ಇದ್ದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುತ್ತಿರುವ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಶುಕ್ರವಾರ ಭೇಟಿಯಾಗಿ ಮಾತನಾಡಿದರು

ಕಾರಂತ ಬಡಾವಣೆ: 299 ಕಟ್ಟಡ ಸಕ್ರಮ

ಬೆಂಗಳೂರು: ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಸಲ್ಲಿಸಿದ ಶಿವರಾಮ ಕಾರಂತ ಬಡಾವಣೆಯ 15ನೇ ವರದಿ ಅಂಗೀಕರಿಸಿರುವ ಸುಪ್ರೀಂ ಕೋರ್ಟ್ ಮತ್ತೆ 299 ಕಟ್ಟಡಗಳನ್ನು ಸಕ್ರಮಗೊಳಿಸಿದೆ. ಈವರೆಗೆ ಒಟ್ಟು 3,124 ಕಟ್ಟಡಗಳು ಸಕ್ರಮಗೊಂಡಿವೆ.

ಈ ಬಡಾವಣೆ ವ್ಯಾಪ್ತಿಯ ಕಟ್ಟಡಗಳ ಮಾಲೀಕರಿಗೆ ಸುಧಾರಣಾ ಶುಲ್ಕ ವಿಧಿಸಿ ಸಕ್ರಮ ಪ್ರಮಾಣಪತ್ರ ವಿತರಿಸಲು ಕ್ರಮಕೈಗೊಳ್ಳುವಂತೆ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಮತ್ತು ಬಿಡಿಎಗೆ ನ್ಯಾಯಾಲಯ ಸೂಚಿಸಿದೆ. ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲೆಯಲ್ಲಿ ಸಕ್ರಮ ಪ್ರಮಾಣಪತ್ರ ವಿತರಿಸಲಾಗುತ್ತಿದ್ದು, ಫಲಾನುಭವಿಗಳು ಪ್ರಯೋಜನ ಪಡೆಯಲು ತಿಳಿಸಿಸಲಾಗಿದೆ.

ನಗರದಲ್ಲಿ ಇಂದು

ಭರತನಾಟ್ಯ ರಂಗಪ್ರವೇಶ: ಅದಿತಿ ವಿ.ರಾವ್, ಅತಿಥಿಗಳು–ಹಂಸಿನಿ ನಾಗೇಂದ್ರ, ಸೀತಾ ಕೋಟೆ, ಸುಪರ್ಣಾ ವೆಂಕಟೇಶ್, ಆಯೋಜನೆ-ಸಾಯಿ ಆರ್ಟ್ ಇಂಟರ್‌ನ್ಯಾಷನಲ್, ಸ್ಥಳ–ಶಿವರಾತ್ರೀಶ್ವರ ಕೇಂದ್ರ, ಜಯನಗರ 8ನೇ ಬ್ಲಾಕ್, ಸಂಜೆ 5.30

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ–ಸಂಪಗೋಡು ಎಸ್.ವಿಘ್ನರಾಜ, ವಾದ್ಯ ಸಹಕಾರ–ನಳಿನ ಮೋಹನ್, ನಿಕ್ಷಿತ್ ಪುತ್ತೂರು, ವ್ಯಾಸ ವಿಠ್ಠಲ, ಆಯೋಜನೆ–ಎಂ.ಎ.ನರಸಿಂಹಾಚಾರ್ ಸಂಗೀತ ಪ್ರತಿಷ್ಠಾನ, ಸ್ಥಳ–ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ, ಸಂಜೆ 5.30

‘ಕಾಮರೂಪಿಗಳ್’ ನಾಟಕ ಪ್ರದರ್ಶನ: ತಂಡ–ಸಂಚಯ, ರಂಗರೂಪ, ನಿರ್ದೇಶನ–ಗಣೇಶ್ ಮಂದಾರ್ತಿ, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7.30



ನವಭಾರತಿ ಗ್ರಾಮೀಣ ಆರೋಗ್ಯ ಮಿಷನ್ ಉದ್ಘಾಟನೆ: ಅತಿಥಿಗಳು–ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ನ್ಯಾ. ವಿ.ಗೋಪಾಲಗೌಡ, ರವಿ ಸುಬ್ರಹ್ಮಣ್ಯ, ಕೆ.ಪಿ.ನರಸಿಂಹಮೂರ್ತಿ, ತ್ರಿಲೋಕಚಂದ್ರ, ಎಚ್.ಎನ್.ದೀಪಕ್, ಆಯೋಜನೆ–ಭರವಸೆ ಚಾರಿಟಬಲ್ ಫೌಂಡೇಷನ್, ಸ್ಥಳ–ಆಚಾರ್ಯ ಪಾಠಶಾಲ ಸಭಾಂಗಣ, ಬಸವನಗುಡಿ, ಸಂಜೆ 4

ನಾಟ್ಯಾಲಯದ ವಾರ್ಷಿಕೋತ್ಸವ ಮತ್ತು ಭರತನಾಟ್ಯ ಪ್ರದರ್ಶನ: ಅತಿಥಿಗಳು–ಅನುರಾಧ ವಿಕ್ರಾಂತ್, ವೈ.ಕೆ.ಸಂಧ್ಯಾಶರ್ಮ, ಸತೀಶ್‌ಕುಮಾರ್ ಎಸ್.ಹೊಸಮನಿ, ಸಿ.ಸೋಮಶೇಖರ್, ಗುಣವಂತ ಮಂಜು, ನಿರ್ಮಲ ಶಿವಣ್ಣ, ಸ್ಥಳ–ನಗರ ಗ್ರಂಥಾಲಯ, ಆರ್‌ಪಿಸಿ ಬಡಾವಣೆ, ಸಂಜೆ 6

ಪಟಾಲಮ್ಮ ದೇವಿ ಉತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕನಪಾಳ್ಯ, ಬೈರಸಂದ್ರ, ಸಿದ್ದಾಪುರ, ಯಡಿಯೂರು, ನಾಗಸಂದ್ರದ ಗ್ರಾಮ ದೇವತೆ ಪಟಾಲಮ್ಮ ದೇವಿಯ ಮಹೋತ್ಸವ ಇತ್ತೀಚೆಗೆ ವಿಜೃಂಭಣೆಯಿಂದ ನೆರವೇರಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಟಾಲಮ್ಮ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು. ಸಚಿವ ಆರ್.ಅಶೋಕ, ಶಾಸಕ ರಾಮಲಿಂಗಾರೆಡ್ಡಿ, ಎಚ್.ಎಂ.ರೇವಣ್ಣ, ಸಿ.ಟಿ.ರವಿ, ಉದಯ್ ಬಿ.ಗರುಡಾಚಾರ್, ಕೆ.ಚಂದ್ರಶೇಖರ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಸಾವಿರಾರು ಮಹಿಳೆಯರು ತಂಬಿಟ್ಟಿನ ಆರತಿ, ವಿವಿಧ ಬಗೆಯ ಹೂವುಗಳಿಂದ ಮಾಡಿದ ಆರತಿಯೊಂದಿಗೆ ದೇವರನ್ನು ಆರಾಧಿಸಿದರು.

ತಮಟೆ, ನಗಾರಿ ಬಾರಿಸುತ್ತಿದ್ದಂತೆ ಜನ ಕುಣಿದು ಕುಪ್ಪಳಿಸಿದರು. ಚಂಡೇವಾದ್ಯ, ಮಹಿಳೆಯರಿಂದ ಮಹಿಳಾ ನಗಾರಿ, ಪೂಜಾಕುಣಿತ, ವೀರಗಾಸೆ, ಸೋಮನಕುಣಿತ, ಗೊರವನ ಕುಣಿತ, ಡೊಳ್ಳು ಸೇರಿದಂತೆ ಸುಮಾರು 60 ಕಲಾತಂಡಗಳು ವಿವಿಧ ಕಲೆಗಳನ್ನು ಪ್ರದರ್ಶಿಸಿದರು.

ಪಟಾಲಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಕೆ.ಎಂ.ನಾಗರಾಜ್,‘ಹಲವು ದಶಕಗಳ ಹಿಂದೆ ಈ ಬಡಾವಣೆಗಳು ಗ್ರಾಮೀಣ ಪ್ರದೇಶಗಳಾಗಿದ್ದವು. ಶಕ್ತಿ ದೇವತೆ ಪಟಾಲಮ್ಮ ದೇವಿಯ ಆರಾಧನೆ ಹಾಗೂ ಗ್ರಾಮೀಣ ಸಂಸ್ಕೃತಿಯ ಜಾನಪದ ಕಲೆಗಳ ಉಳಿವಿಗಾಗಿ ಪ್ರತಿ ಮೂರು ವರ್ಷಕ್ಕೊಮ್ಮೆ ಉತ್ಸವ ಆಚರಿಸಲಾಗುತ್ತಿದೆ’ ಎಂದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಟಾಲಮ್ಮ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು. ಆರ್. ಅಶೋಕ, ಉದಯ್ ಬಿ.ಗರುಡಾಚಾರ್, ಎಚ್.ಎಂ.ರೇವಣ್ಣ, ಕೆ.ಎಂ.ನಾಗರಾಜ್ ಇದ್ದಾರೆ.

ಬಿಡಿಎ: 628 ಮೂಲೆ ನಿವೇಶನ ಹರಾಜು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಮ್ಮಿಕೊಂಡಿದ್ದ 1036 ಮೂಲೆ ನಿವೇಶನಗಳ ಇ-ಹರಾಜು ಪ್ರಕ್ರಿಯೆ ಪೂರ್ಣಗೊಂಡಿದ್ದು, 628 ನಿವೇಶನಗಳು ಮಾರಾಟವಾಗಿದೆ.

ಮಾರಾಟವಾದ 628 ನಿವೇಶನಗಳ ಮೂಲ ದರ ₹391.68 ಕೋಟಿಗಳಾಗಿದ್ದು, ಹರಾಜಿನಲ್ಲಿ ಇವು ₹ 589.13 ಕೋಟಿಗೆ ಮಾರಾಟವಾಗಿವೆ. ₹197.45 ಕೋಟಿ ಅಧಿಕ ಆದಾಯ ಸಂಗ್ರಹವಾಗಲಿದೆ.

ಬನಶಂಕರಿ, ಜೆ.ಪಿ.ನಗರ, ಅರ್ಕಾವತಿ ಬಡಾವಣೆ, ರಾಜ್ ಮಹಲ್ ವಿಲಾಸ, ಕೆಂಪೇಗೌಡ ಬಡಾವಣೆ, ಅಂಜನಾಪುರ, ಬಿಟಿಎಂ, ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ಸೇರಿ ಹಲವು ಪ್ರತಿಷ್ಠಿತ ಬಡಾವಣೆಗಳಲ್ಲಿದ್ದ ಮೂಲೆ ಹಾಗೂ ಮಧ್ಯಂತರ ನಿವೇಶನಗಳನ್ನು ಹರಾಜು ಮಾಡಲಾಗಿದೆ. ಶೀಘ್ರವೇ ಮತ್ತೊಂದು ಇ-ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಅಡುಗೆ ಕೆಲಸಗಾರ ಸಾವು: ಸಿನಿಮಾ ಸಹಾಯಕ ನಿರ್ದೇಶಕ ಬಂಧನ

ಪಾದಚಾರಿಗಳಿಗೆ ಗುದ್ದಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ಶೂಟಿಂಗ್ ಮುಗಿಸಿಕೊಂಡು ಮನೆಗೆ ಹೊರಟಿದ್ದ ಸಹಾಯಕ ನಿರ್ದೇಶಕನೊಬ್ಬ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದು, ಪಾದಚಾರಿ ರುದ್ರಪ್ಪ (28) ಎಂಬುವರು ಮೃತಪಟ್ಟಿದ್ದಾರೆ. ಮೂವರು ಪಾದಚಾರಿಗಳು ತೀವ್ರವಾಗಿ ಗಾಯಗೊಂಡಿದ್ದಾರೆ.

‘ಕತ್ರಿಗುಪ್ಪೆ ಹಾಗೂ ಇಟ್ಟಮಡು ಜಂಕ್ಷನ್ ನಡುವಿನ ರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ 7.20ರ ಸುಮಾರಿಗೆ ಸರಣಿ ಅಪಘಾತ ಸಂಭವಿಸಿದೆ. ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ್ದ ಆರೋಪದಡಿ ಸಿನಿಮಾ ಸಹಾಯಕ ನಿರ್ದೇಶಕ ಮುಖೇಶ್ (27) ಎಂಬಾತನನ್ನು ಬಂಧಿಸಲಾಗಿದೆ’ ಎಂದು ಬನಶಂಕರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ನಿರ್ದೇಶಕ ಶ್ರೀನಿವಾಸ್ ತಿಮ್ಮಯ್ಯ ಬಳಿ ಮುಖೇಶ್ ಕೆಲಸ ಮಾಡುತ್ತಿದ್ದ. ಇಬ್ಬರೂ ಸೇರಿ ಗುರುವಾರ ರಾತ್ರಿಯಿಡೀ ಸಿನಿಮಾವೊಂದರ ಶೂಟಿಂಗ್ ಮಾಡಿದ್ದರು. ಶೂಟಿಂಗ್ ಮುಗಿಸಿ ಇಬ್ಬರೂ ಮನೆಗೆ ಕಾರಿನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದೂ ತಿಳಿಸಿದರು.



ಸರಣಿ ಅಪಘಾತದಲ್ಲಿ ಜಖಂಗೊಂಡ ಕಾರುಗಳು

‘ಶ್ರೀನಿವಾಸ್ ಅವರ ಕಾರನ್ನು (ಕೆಎ 51 ಎಂಕೆ 5416) ಮುಖೇಶ್ ಚಲಾಯಿಸುತ್ತಿದ್ದ. ಇಟ್ಟಮಡು ಜಂಕ್ಷನ್ ಸಮೀಪದಲ್ಲಿ ಅತೀ ವೇಗದಲ್ಲಿ ಕಾರು ಚಲಾಯಿಸಿ, ರಸ್ತೆ ಪಕ್ಕದಲ್ಲಿ ಹೊರಟಿದ್ದ ಪಾದಚಾರಿಗಳಿಗೆ ಗುದ್ದಿಸಿದ್ದ. ನಾಲ್ವರು ಪಾದಚಾರಿಗಳು ಹಾರಿ ದೂರಕ್ಕೆ ಹೋಗಿ ಬಿದ್ದಿದ್ದರು. ಅದೇ ಕಾರು, ಎರಡು ಬೈಕ್ ಹಾಗೂ ಇನ್ನೊಂದು ಕಾರಿಗೂ ಡಿಕ್ಕಿ ಹೊಡೆದಿತ್ತು. ಜಖಂಗೊಂಡ ಕಾರು, ವಿದ್ಯುತ್ ಕಂಬಕ್ಕೂ ಗುದ್ದಿತ್ತು’ ಎಂದೂ ಹೇಳಿದರು.

‘ಘಟನೆಯಲ್ಲಿ ತೀವ್ರ ಗಾಯಗೊಂಡು ರುದ್ರಪ್ಪ ಮೃತಪಟ್ಟಿದ್ದಾರೆ. ಪಾದಚಾರಿಗಳಾದ ಶಿವರಾಮ್ (23), ಸಚಿನ್ (21) ಹಾಗೂ ಶೈಲೇಂದ್ರ (21) ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ’ ಎಂದೂ ತಿಳಿಸಿದರು.

ಕೆಲಸಕ್ಕೆ ಹೊರಟಿದ್ದರು: ‘ಶಿವರಾಮ್ ಹಾಗೂ ಸಚಿನ್ ಸಹ ಕ್ಯಾಟರಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು. ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆಯ ರುದ್ರಪ್ಪ ಜೊತೆ ಸೇರಿ ಕೆಲಸಕ್ಕೆ ಹೊರಟಿದ್ದರು. ಗಾಯಾಳು ಸಚಿನ್, ಬಿಎಸ್ಸಿ ವಿದ್ಯಾರ್ಥಿ. ಹೊಸಕೆರೆಹಳ್ಳಿಯ ದ್ವಾರಕನಗರದಲ್ಲಿ ನೆಲೆಸಿದ್ದ ಅವರು, ವಾಯುವಿಹಾರ ಮಾಡುತ್ತಿದ್ದರು’ ಎಂದೂ ಪೊಲೀಸರು ಹೇಳಿದರು.

‘ಅಪಘಾತದ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾರಿನಲ್ಲಿ ಶ್ರೀನಿವಾಸ್ ತಿಮ್ಮಯ್ಯ ಸಹ ಇದ್ದರು. ಅವರಿಂದಲೂ ಹೇಳಿಕೆ ಪಡೆಯಲಾಗುವುದು’ ಎಂದೂ ತಿಳಿಸಿದರು.

ಬಿಎಂಟಿಸಿ ಬಸ್ ಅಪಘಾತ

ಮೆಜೆಸ್ಟಿಕ್ ರೈಲ್ವೆ ಕೆಳಸೇತುವೆಯಲ್ಲಿ ಬಿಎಂಟಿಸಿ ಬಸ್‌ನ ಆ್ಯಕ್ಸೆಲ್ ತುಂಡಾಗಿ ಅಪಘಾತ ಸಂಭವಿಸಿದೆ.

‘ಮೆಜೆಸ್ಟಿಕ್‌ನಿಂದ ಪೀಣ್ಯ ಕಡೆಗೆ ಹೊರಟಿದ್ದ ಬಸ್ಸಿನ (ಕೆಎ 01 ಎಫ್ 4659) ಆ್ಯಕ್ಸಿಲ್ ಏಕಾಏಕಿ ತುಂಡಾಗಿತ್ತು. ನಿಯಂತ್ರಣ ತಪ್ಪಿದ್ದ ಬಸ್, ರಸ್ತೆ ವಿಭಜಕಕ್ಕೆ ಗುದ್ದಿ ನಿಂತಿತ್ತು. ಪ್ರಯಾಣಿಕರು ಕೆಳಗೆ ಇಳಿದಿದ್ದರು. ಅಪಘಾತದಿಂದ ಕೆಲ ಹೊತ್ತು ಸ್ಥಳದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು’ ಎಂದು ಸಂಚಾರ ಪೊಲೀಸರು ಹೇಳಿದರು.

ಬೈಕ್ ಕಳ್ಳತನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಆನಂದ್ ಅಲಿಯಾಸ್ ರಾಮಾಚಾರಿಯನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರು ರಸ್ತೆಯ ಬಾಪೂಜಿನಗರ ನಿವಾಸಿ ಆನಂದ್, ಈ ಹಿಂದೆಯೂ ಅಪರಾಧ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದ. ಆತನಿಂದ ₹ 12 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದ್ವಿಚಕ್ರ ವಾಹನಗಳು ಕಳುವಾದ ಬಗ್ಗೆ ದೂರುಗಳು ಬಂದಿದ್ದವು. ಪ್ರಕರಣ ಭೇದಿಸಲು ವಿಶೇಷ ತಂಡ ರಚಿಸಲಾಗಿತ್ತು. ಮೇ 18ರಂದು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದ ಆರೋಪಿ ಆನಂದ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ’ ಎಂದೂ ತಿಳಿಸಿದರು.

‘ಬ್ಯಾಟರಾಯನಪುರ, ಜ್ಞಾನಭಾರತಿ, ಚಂದ್ರಾ ಲೇಔಟ್, ರಾಜಾಜಿನಗರ, ಪುಟ್ಟೇನಹಳ್ಳಿ, ಅಶೋಕನಗರ, ಬ್ಯಾಡರಹಳ್ಳಿ, ಜಗಜೀವನ್‌ರಾಮ್ ನಗರ, ಸಂಪಿಗೆಹಳ್ಳಿ, ಕಾಟನ್‌ಪೇಟೆ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ವಾಹನ ಕಳ್ಳತನ ಮಾಡಿದ್ದ. 20 ವಾಹನಗಳ ಪೈಕಿ 11 ವಾಹನಗಳ ಮಾಲೀಕರು ಪತ್ತೆಯಾಗಿದ್ದಾರೆ. ಇನ್ನುಳಿದ 9 ವಾಹನಗಳ ಮಾಲೀಕರನ್ನು ಹುಡುಕುತ್ತಿದ್ದೇವೆ’ ಎಂದೂ ಅವರು ಹೇಳಿದರು.

ಬಿಜೆಪಿ ಮುಖಂಡ ಆತ್ಮಹತ್ಯೆ ಪತ್ನಿ ಮೇಲೆ ಅನುಮಾನ

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣಕ್ಕೆ ಮತ್ತೊಂದು ತಿರುವು ಸಿಕ್ಕಿದ್ದು, ಅವರ ಪತ್ನಿ ಮೇಲೆಯೇ ಪೊಲೀಸರಿಗೆ ಅನುಮಾನ ಬಂದಿದೆ.

‘ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿ ಪತಿ ಅನಂತರಾಜು ಮೇ 12ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿ ಇತ್ತೀಚೆಗೆ ದೂರು ನೀಡಿದ್ದ ಪತ್ನಿ, ಅನಂತರಾಜು ಬರೆದಿದ್ದಾರೆ ಎನ್ನಲಾದ ಮರಣಪತ್ರವೊಂದನ್ನು ಪೊಲೀಸರಿಗೆ ನೀಡಿದ್ದರು. ಅದರ ಆಧಾರದಲ್ಲಿ ಇಬ್ಬರು ಯುವತಿಯರು ಸೇರಿ ಮೂವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು.

‘ಹನಿಟ್ರ್ಯಾಪ್ ಆರೋಪದಡಿ ಕೆ.ಆರ್.ಪುರದ ನಿವಾಸಿ ರೇಖಾ ಎಂಬಾಕೆಯನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಆಕೆ ಆರೋಪ ನಿರಾಕರಿಸುತ್ತಿದ್ದಾಳೆ. ಜೊತೆಗೆ, ಅನಂತರಾಜು ಪತ್ನಿ ಜೊತೆ ಮಾತನಾಡಿದ್ದ ಆಡಿಯೊವೊಂದನ್ನು ನೀಡಿದ್ದಾಳೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪತಿಗೆ ಕಿರುಕುಳ ನೀಡಿ, ನಾನೇ ಸಾಯಿಸುತ್ತೇನೆ’ ಎಂಬುದಾಗಿ ಪತ್ನಿ ಆಡಿಯೊದಲ್ಲಿ ಹೇಳಿದ್ದಾಳೆ. ಹೀಗಾಗಿ, ಅವರು ನೀಡಿರುವ ಮರಣಪತ್ರದ ಬಗ್ಗೆ ಅನುಮಾನ ಬಂದಿದೆ. ಕೈ ಬರಹ ಪರೀಕ್ಷೆಗೆಂದು ಮರಣಪತ್ರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು’ ಎಂದೂ ತಿಳಿಸಿವೆ.

ಅತ್ಯಾಚಾರ: ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ 23 ವರ್ಷದ ಯುವತಿಯ ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳು ತುರುಕಿ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ 2021ರ ಮೇ 27ರಂದು ನಡೆದಿದ್ದ ಪ್ರಕರಣದ ವಿಚಾರಣೆ ನಡೆಸಿದ್ದ 54ನೇ ಸಿಸಿಎಚ್ ನ್ಯಾಯಾಲಯ, ಅಪರಾಧಿಗಳಿಗೆ ಶಿಕ್ಷೆ ವಿಧಿಸಿ ಶುಕ್ರವಾರ ಆದೇಶ ಹೊರಡಿಸಿದೆ.

ಯುವತಿ ಮೇಲಿನ ಕ್ರೌರ್ಯದ ದೃಶ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದ ಆರೋಪಿಗಳು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಅದೇ ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದ ರಾಮಮೂರ್ತಿನಗರ ಠಾಣೆ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದರು. ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

‘ಪ್ರಮುಖ ಅಪರಾಧಿಗಳಾದ ಚಾಂದ್ ಮೀಯಾ ಅಲಿಯಾಸ್ ಸೊಬುಜ್, ಮೊಹಮ್ಮದ್ ರಿಫಕ್ಬುಲ್ ಇಸ್ಲಾಂ ಅಲಿಯಾಸ್ ಹೃದಾಯ್ ಬಾಬು, ಮೊಹಮ್ಮದ್ ಅಲಾಮಿನ್ ಹುಸೈನ್ ಅಲಿಯಾಸ್ ರಫ್ಸಾನ್ ಮಂಡಲ್, ರಾಕಿಬುಲ್ ಇಸ್ಲಾಂ ಅಲಿಯಾಸ್ ಸಾಗರ್, ಮೊಹಮ್ಮದ್ ಬಾಬು ಶೇಖ್, ಮೊಹಮ್ಮದ್ ದಲೀಂ ಹಾಗೂ ಅಜೀಮ್ ಹುಸೈನ್‌ನನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದ ತಾನೀಯಾ ಖಾನಂ ಎಂಬಾಕೆಗೆ 20 ವರ್ಷ ಹಾಗೂ ಜಮಾಲ್‌ನಿಗೆ 5 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ಇನ್ನಿಬ್ಬರು ಆರೋಪಿಗಳಾದ ನುಸ್ರತ್ ಹಾಗೂ ಕಾಜಲ್‌ಗೆ ತಲಾ 9 ತಿಂಗಳು ಜೈಲು ಶಿಕ್ಷೆ ಆಗಿದೆ’ ಎಂದು ರಾಮಮೂರ್ತಿನಗರ ಠಾಣೆ ಪೊಲೀಸರು ಹೇಳಿದರು.

ವೇಶ್ಯಾವಾಟಿಕೆಗೆ ಬಳಸಿಕೊಳ್ಳಲು ಯತ್ನ: ‘ಬಾಂಗ್ಲಾದೇಶದ ಯುವತಿ, ಸಂಬಂಧಿ ಹಾಗೂ ಪರಿಚಯಸ್ಥರ ಜೊತೆ ಭಾರತಕ್ಕೆ ಬಂದಿದ್ದರು. ಅವರನ್ನು ಬರಮಾಡಿಕೊಂಡಿದ್ದ ಆರೋಪಿಗಳು, ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೊಠಡಿಯೊಂದರಲ್ಲಿ ಇರಿಸಿದ್ದರು. ಯುವತಿಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳಲು ಪ್ರಯತ್ನಿಸಿದ್ದರು. ಆದರೆ, ಯುವತಿ ಒಪ್ಪಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಆಕ್ರೋಶಗೊಂಡ ಆರೋಪಿಗಳು, ಯುವತಿಯನ್ನು ನಗ್ನಗೊಳಿಸಿ, ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲು ಬೆರಳುಗಳನ್ನು ಹಾಕಿ ಮೃಗೀಯವಾಗಿ ವರ್ತಿಸಿ ಅತ್ಯಾಚಾರ ಎಸಗಿದ್ದರು. ತೀವ್ರ ರಕ್ತಸ್ರಾವದಿಂದ ಬಳಲುತ್ತಿದ್ದ ಯುವತಿ, ಸ್ನೇಹಿತರೊಬ್ಬರ ಸಹಾಯದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು’ ಎಂದೂ ತಿಳಿಸಿದರು.

ವಡ್ಡರಪಾಳ್ಯ: ರಾಜಕಾಲುವೆ ವಿಸ್ತರಣೆ

‘ವಿನ್ಯಾಸದ ನಕ್ಷೆ ಇನ್ನೂ ತಲುಪಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಸಂದ್ರ–ಯಲಹಂಕ ರೈಲು ಮಾರ್ಗದ ಹೊರಮಾವು ವಡ್ಡರಪಾಳ್ಯ ಬಳಿಯ ರೈಲ್ವೆ ಸೇತುವೆ ಕೆಳಗಿನ ರಾಜಕಾಲುವೆ ವಿಸ್ತರಿಸುವ ಕುರಿತು ಬಿಬಿಎಂಪಿಯಿಂದ ವಿನ್ಯಾಸದ ನಕ್ಷೆ ನೈರುತ್ಯ ರೈಲ್ವೆ ಕಚೇರಿಗೆ ಈವರೆಗೆ ತಲುಪಿಲ್ಲ ಎಂದು ನೈರುತ್ಯ ರೈಲ್ವೆ ಸ್ಪಷ್ಟಪಡಿಸಿದೆ.

ಸಾಮಾನ್ಯ ವಿನ್ಯಾಸದ ನಕ್ಷ (ಜಿಎಡಿ) ಅನುಮೋದನೆಗಾಗಿ ಮೇ 11ರಂದು ನೈರುತ್ಯ ರೈಲ್ವೆ ಕಚೇರಿಗೆ ಬಂದಿತ್ತು. ಅದಕ್ಕೆ ಮೇ 12ರಂದೇ ಅನುಮೋದನೆ ನೀಡಲಾಗಿದೆ. ಪ್ರಸ್ತಾವಿತ ಸೇತುವೆಯ ವಿನ್ಯಾಸದ ನಕ್ಷೆಯೂ ಕೈಸೇರಿಲ್ಲ ಎಂದೂ ರೈಲ್ವೆ ಇಲಾಖೆ ತಿಳಿಸಿದೆ.

ನೈರುತ್ಯ ರೈಲ್ವೆಯು ಬಿಬಿಎಂಪಿಯೊಂದಿಗೆ ನಿಕಟ ಸಂಪರ್ಕ ಹಾಗೂ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ಸೇತುವೆ ಕಾಮಗಾರಿ ಸಂಬಂಧವೂ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ ತಿಳಿಸಿದ್ದಾರೆ.

ವಡ್ಡರಪಾಳ್ಯದಲ್ಲಿ ರೈಲ್ವೆ ಸೇತುವೆ ಇರುವ ಕಡೆ ರಾಜಕಾಲುವೆ ಅಗಲ ಕಿರಿದಾಗಿರುವುದರಿಂದ ಮಳೆ ಬಂದಾಗಲೆಲ್ಲ ಈ ಪ್ರದೇಶದಲ್ಲಿ ಪ್ರವಾಹ ಸೃಷ್ಟಿಯಾಗುತ್ತಿದೆ. ಇಲ್ಲಿ ರಾಜಕಾಲುವೆ ವಿಸ್ತರಣೆ ಮಾಡಲು ರೈಲ್ವೆ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂದು ಸ್ಥಳೀಯರು ಆರೋಪಿಸಿದ್ದರು. ಇದನ್ನು ಆಧರಿಸಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಗೆ ರೈಲ್ವೆ ಇಲಾಖೆ ಸ್ಪಷ್ಟನೆ ನೀಡಿದೆ.

₹ 29 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ ಆರೋಪದಡಿ ಅನ್ಸರ್ ಪಾಷಾ ಅಲಿಯಾಸ್ ಪಟ್ಟೆಯನ್ನು (38) ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶಾಮಣ್ಣ ಗಾರ್ಡನ್ ನಿವಾಸಿ ಅನ್ಸರ್, ಈ ಹಿಂದೆಯೂ ಅಪರಾಧ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದ. ಈತನಿಂದ ₹ 29 ಲಕ್ಷ ಮೌಲ್ಯದ 583 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮೇ 11ರಂದು ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಮಹಿಳೆಯೊಬ್ಬರು ಸ್ನಾನಕ್ಕೆ ಹೋಗಿದ್ದ ವೇಳೆ ಆರೋಪಿ, ಚಿನ್ನದ ಸರವನ್ನು ಕದ್ದಿದ್ದ. ಈ ಬಗ್ಗೆ ಮಹಿಳೆಯ ಮಗ ದೂರು ನೀಡಿದ್ದರು. ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯ 10 ಮನೆಗಳಲ್ಲಿ ಆರೋಪಿ ಕೃತ್ಯ ಎಸಗಿರುವುದು ಪತ್ತೆಯಾಗಿದೆ’ ಎಂದರು.

ಪ್ರತ್ಯೇಕ ದಾಳಿ: ₹ 17 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಜೀವನ್‌ಭಿಮಾನಗರ ಹಾಗೂ ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿದ್ದು, ₹ 17 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

‘ಡ್ರಗ್ಸ್ ಮಾರಾಟದ ಬಗ್ಗೆ ಸಿಕ್ಕ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಲಾಗಿದ್ದು, ಅವರ ಬಳಿ ಗಾಂಜಾ ಎಂಡಿಎಂಎ ಡ್ರಗ್ಸ್ ಪತ್ತೆಯಾಗಿವೆ’ ಎಂದು ಪೊಲೀಸರು ಹೇಳಿದರು.

ಮೈದಾನ ಬಳಿ ಮಾರಾಟ: ‘ಜೀವನ್‌ಭಿಮಾನಗರ ಬಳಿಯ ಮೈದಾನವೊಂದರಲ್ಲಿ ಪೆಡ್ಲರ್, ಗಾಂಜಾ ಮಾರುತ್ತಿದ್ದ. ಆತನಿಂದ ಕೆಲ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು ಗಾಂಜಾ ಖರೀದಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ತಾಂಜೇನಿಯಾ ಪ್ರಜೆ ಬಂಧನ: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ತಾಂಜೇನಿಯಾ ಪ್ರಜೆ ಬರಾಕಾ ಸಾಲೇಮಾನಿ ಚಾವುನನ್ನು ಬಂಧಿಸಿ, ₹ 15 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಮಹಿಳೆಯರು ಸೇರಿ ಐವರ ಬಂಧನ • ವಿದ್ಯಾರಣ್ಯಪುರ ಪೊಲೀಸರ ತನಿಖೆ

ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ನಿವೇಶನಗಳ ಮೇಲೆ ಕಣ್ಣಿಟ್ಟು ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರಿಗೆ ಮಾರಾಟ ಮಾಡಿ ವಂಚಿಸುತ್ತಿದ್ದ ಜಾಲವನ್ನು ವಿದ್ಯಾರಣ್ಯಪುರ ಪೊಲೀಸರು ಭೇದಿಸಿದ್ದು, ಮಹಿಳೆಯರು ಸೇರಿ ಐವರನ್ನು ಬಂಧಿಸಿದ್ದಾರೆ.

‘ಆರ್.ಟಿ.ನಗರ ಎಲ್.ಆರ್. ಬಂಡೆ ನಿವಾಸಿ ಫೈಜ್ ಸುಲ್ತಾನ್ ಅಲಿಯಾಸ್ ಷರ್ಲಿ ಜೋಸ್ (33), ಪೂಜಾ ಅಲಿಯಾಸ್ ವೈಶಾಲಿ (26), ಜಯಮ್ಮ ಅಲಿಯಾಸ್ ಎಂ. ಕಲ್ಪನಾ (50), ಸಹಕಾರ ನಗರದ ಕಬೀರ್ ಅಲಿ ಅಲಿಯಾಸ್ ಬಾಬು (34) ಹಾಗೂ ಜಗದೀಶ್ ಅಲಿಯಾಸ್ ಯೋಗೇಶ್ (40) ಬಂಧಿತರು. ಇವರಿಂದ 102 ಗ್ರಾಂ ಚಿನ್ನಾಭರಣ, ₹ 2.97 ಲಕ್ಷ ನಗದು, ಕಾರು, ಆಧಾರ್, ಪ್ಯಾನ್ ಕಾರ್ಡ್, ಬ್ಯಾಂಕ್ ಖಾತಾ ಪುಸ್ತಕ, ಕೆಲ ನಕಲಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಹೇಳಿದರು.

‘ನರಸೀಪುರ ಗ್ರಾಮದ ಎಚ್‌ಎಂಟಿ ಬಡಾವಣೆಯಲ್ಲಿರುವ ನಿವೇಶನವನ್ನು (ನಂ. 815) ಡಿ. ಸುವರ್ಣಮ್ಮ ಎಂಬುವರಿಗೆ ಹಂಚಿಕೆ ಮಾಡಲಾಗಿತ್ತು. ನಿವೇಶನ ಖಾಲಿ ಇರುವುದನ್ನು ಗಮನಿಸಿದ್ದ ಆರೋಪಿಗಳು, ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಾಗವನ್ನು ಮಾರಾಟ ಮಾಡಿದ್ದರು. ಇದು ಗೊತ್ತಾಗುತ್ತಿದ್ದಂತೆ ಸುವರ್ಣಮ್ಮ ಅವರು ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

‘ಫೈಜ್ ಸುಲ್ತಾನ್ ಎಂಬಾಕೆ, ಸ್ನೇಹಿತ ಕಬೀರ್ ಅಲಿ ಜೊತೆ ಸೇರಿ ಕೃತ್ಯ ಎಸಗಿದ್ದಳು. ಆಕೆಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡಳು. ಆಕೆ ನೀಡಿದ್ದ ಮಾಹಿತಿಯಂತೆ ಉಳಿದ ಆರೋಪಿಗಳನ್ನೂ ಸೆರೆ ಹಿಡಿಯಲಾಯಿತು’ ಎಂದೂ ವಿವರಿಸಿದರು.

ಖಾಲಿ ನಿವೇಶನ ಹುಡುಕಾಡಿ ಕೃತ್ಯ: ‘ಆರೋಪಿ ಕಬೀರ್ ಅಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ. ಖಾಲಿ ನಿವೇಶನಗಳನ್ನು ಹುಡುಕಾಡುತ್ತಿದ್ದ. ಅಕ್ಕ–ಪಕ್ಕದ ಜನರಲ್ಲಿ ವಿಚಾರಿಸಿ, ಮಾಲೀಕರ ಹೆಸರು ಹಾಗೂ ವಿಳಾಸ ತಿಳಿದುಕೊಳ್ಳುತ್ತಿದ್ದ’ ಎಂದು ಡಿಸಿಪಿ ಅನೂಪ್ ಹೇಳಿದರು.

‘ಉಪ ನೋಂದಣಾಧಿಕಾರಿ ಕಚೇರಿ ಸಿಬ್ಬಂದಿ ಜೊತೆ ಒಡನಾಟವಿಟ್ಟುಕೊಂಡಿದ್ದ ಆರೋಪಿ, ಅವರ ಮೂಲಕ ನಿವೇಶನಗಳ ದಾಖಲೆಗಳನ್ನು ಪಡೆಯುತ್ತಿದ್ದ. ಅದೇ ದಾಖಲೆಗಳನ್ನು ಬಳಸಿಕೊಂಡು ನಕಲಿ ದಾಖಲೆ ಸೃಷ್ಟಿಸುತ್ತಿದ್ದ. ಇತರೆ ಆರೋಪಿಗಳನ್ನೇ ಮಾಲೀಕರಂತೆ ಬಿಂಬಿಸುತ್ತಿದ್ದ. ಗ್ರಾಹಕರನ್ನು ಹುಡುಕಿ ತಂದು ಅವರಿಗೆ ಜಾಗ ಮಾರುತ್ತಿದ್ದ. ನಂತರ, ಅಸಲಿ ಮಾಲೀಕರು ಹಾಗೂ ನಕಲಿ ಮಾಲೀಕರ ನಡುವೆ ವ್ಯಾಜ್ಯವಾಗುತ್ತಿತ್ತು. ಆರೋಪಿ ಕಬೀರ್, ಹಣ ಪಡೆದು ನಾಪತ್ತೆಯಾಗುತ್ತಿದ್ದ’ ಎಂದೂ ತಿಳಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮತ್ತು ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್ಎಸ್ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡಲು ಬಯಸಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.fincc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕಗಳನ್ನು ಖರೀದಿಸಿದೆ



ಧಾರವಾಡದ ಲಿಂಗಾಯತ ಶಿಕ್ಷಣ ಸಂಸ್ಥೆಯಲ್ಲಿ ಕಲಾ ವಿಭಾಗದಲ್ಲಿ ಪ್ರವೇಶ ಪಡೆದಿದ್ದೇನೆ. ನನ್ನ ಪಠ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಲು 'ಪ್ರಜಾವಾಣಿ' ನೀಡಿದ ಸ್ಕಾಲರ್‌ಶಿಪ್ ಅನುಕೂಲವಾಯಿತು. ಬಸ್ ಪಾಸ್ ಕೂಡ ಪಡೆದುಕೊಂಡಿದ್ದೇನೆ. ಪತ್ರಿಕೆಗೆ ತುಂಬಾ ಧನ್ಯವಾದಗಳು.

ಪದ್ಮಾ ದಾಸನವರ, ಧಾರವಾಡ

ಕಾಲೇಜು ಶುಲ್ಕ ಕಟ್ಟಿದೆ



ಹುಬ್ಬಳ್ಳಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದು, 'ಪ್ರಜಾವಾಣಿ' ನೀಡಿದ ನೆರವಿನಿಂದ ಕಾಲೇಜಿನ ಶುಲ್ಕ ಕಟ್ಟಿದ್ದೇನೆ. ಹಲವು ಪುಸ್ತಕಗಳನ್ನು ಖರೀದಿಸಿ ತಂದೆಯ ಮೇಲೆ ಆಗುತ್ತಿದ್ದ ಹೊರೆ ತಪ್ಪಿಸಿದ್ದೇನೆ. ಪತ್ರಿಕೆಯ ನೆರವು ಎಂದಿಗೂ ಮರೆಯುವುದಿಲ್ಲ.

ಜ್ಯೋತಿ ಉಳ್ಳಾಗಡ್ಡಿ, ಹುಬ್ಬಳ್ಳಿ



ಮಲೇಬೆನ್ನೂರು ಸಮೀಪದ ದೇವರಬೆಳಕೆರೆ ಪಿಕ್‌ಅಪ್ ಡ್ಯಾಂ ಭರ್ತಿಯಾಗಿ ಶುಕ್ರವಾರ ಭೋರ್ಗರೆಯುತ್ತ ನೀರು ಹೊರಕ್ಕೆ ಹೋಗುತ್ತಿದೆ –ಪ್ರಜಾವಾಣಿ ಚಿತ್ರ

ಮಳೆ: ಜಲಾಶಯಗಳು ಭರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಮತ್ತು ಮಧ್ಯ ಕರ್ನಾಟಕ ಹಾಗೂ ಮಲೆನಾಡು ಭಾಗದಲ್ಲಿ ಶುಕ್ರವಾರವೂ ವರುಣ ಅಬ್ಬರ ಮುಂದುವರಿದಿದ್ದು, ಹಲವೆಡೆ ಜಲಾಶಯಗಳು ಜಲಾವೃತವಾಗಿವೆ. ಕೆಲವೆಡೆ ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಸಂಕಷ್ಟ ಎದುರಿಸಿದ್ದಾರೆ. ಬೆಳೆ ಹಾನಿಯಿಂದ ರೈತರಿಗೆ ನಷ್ಟವಾಗಿದೆ.

ಗುರುವಾರ ರಾತ್ರಿಯಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ರಾಜ್ಯದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ತೀರ್ಥಹಳ್ಳಿಯಲ್ಲಿ ಗದ್ದೆ ನೋಡಿಕೊಂಡು ಬರಲು ತೆರಳಿದ್ದ ಶಂಕರಪ್ಪ (52) ಎಂಬುವವರು ಕಾಲು ಜಾರಿ ಹಳ್ಳಕ್ಕೆ ಬಿದ್ದು ಅಸುನೀಗಿದ್ದಾರೆ. ಗದಗದ ಮುಂಡರಗಿ ತಾಲ್ಲೂಕಿನ ಯಕ್ಲಾಸಪುರ ಗ್ರಾಮದಲ್ಲಿ ತುಂಬಿ ಹರಿಯುತ್ತಿದ್ದ ಹಳ್ಳ ದಾಟುವ ವೇಳೆ ಗ್ರಾಮದ ಯುವಕ ಟಿಪ್ಪುಸುಲ್ತಾನ್ (26) ಬೈಕ್ ಸಹಿತ ಕೊಚ್ಚಿಕೊಂಡು ಹೋಗಿದ್ದರು. ಶುಕ್ರವಾರ ಅವರ ಮೃತದೇಹ ಪತ್ತೆಯಾಗಿದೆ.

ಧಾರವಾಡ ಜಿಲ್ಲೆಯಲ್ಲಿ 97, ಗದಗದಲ್ಲಿ 119, ಶಿವಮೊಗ್ಗದಲ್ಲಿ 56, ವಿಜಯಪುರದಲ್ಲಿ 24, ಹಾವೇರಿ ಜಿಲ್ಲೆಯಲ್ಲಿ 87 ಮನೆಗಳು ಮಳೆಯಿಂದ ಹಾನಿಗೊಂಡಿವೆ. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕನಕಪ್ಪನ ಗುಡ್ಡದ ಹಿರೇಹಳ್ಳದ ಬಳಿ ಹಲವು ವರ್ಷಗಳಿಂದ ವಾಸವಾಗಿದ್ದ 30 ಕುಟುಂಬಗಳ ಗುಡಿಸಲುಗಳು ಶುಕ್ರವಾರ ಬೆಳಿಗ್ಗೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.

ಶಾಲೆಗಳಿಗೆ ರಜೆ: ಜೋರು ಮಳೆಯ ಕಾರಣ ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ, ಗದಗ ಹಾವೇರಿ ಜಿಲ್ಲೆಗಳಲ್ಲಿ ಶುಕ್ರವಾರವೂ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಹುಬ್ಬಳ್ಳಿ-ಧಾರವಾಡ, ಹಾವೇರಿಯಲ್ಲಿ ಶನಿವಾರವೂ ರಜೆ ಘೋಷಿಸಲಾಗಿದೆ.

ಮಳೆ: ಎಲ್ಲಿ ಎಷ್ಟು

ಉಡುಪಿ	
ಶಿರೂರು	21.1 ಸೆಂ.ಮೀ.
ದಕ್ಷಿಣ ಕನ್ನಡ	
ನಾರಾವಿ	17.8 ಸೆಂ.ಮೀ.
ಚಿಕ್ಕಮಗಳೂರು	
ಹಿರೇಕೊಡಿಗೆ	9.5 ಸೆಂ.ಮೀ.

ಬೆಳಗಾವಿ ಜಿಲ್ಲೆಯಲ್ಲಿ ಸರಾಸರಿ 10 ಸೆಂ.ಮೀ ಮಳೆಯಾಗಿದೆ. ಘಟಪ್ರಭಾ ನದಿ ನೀರಿನ ಮಟ್ಟ ಹೆಚ್ಚಾಗಿದ್ದು ಮೂಡಲಗಿ-ಸುಣಧೋಳಿ ಸಂಪರ್ಕ ಸೇತುವೆ ಮುಳುಗಡೆಯಾಗಿದೆ. ಮಲಪ್ರಭಾ ಜಲಾಶಯಕ್ಕೆ 946 ಕ್ಯುಸೆಕ್ ಒಳಹರಿವು ಆರಂಭವಾಗಿದೆ.

ಶಿವಮೊಗ್ಗದ ಗಾಜನೂರು ತುಂಗಾ ಜಲಾನಯನ ಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಬಾರಿ ಏರಿಕೆ ಕಂಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ತುಂಗಾ ಜಲಾಶಯದ ಎರಡು ಗೇಟುಗಳನ್ನು ತೆರೆದು ನದಿಗೆ 12 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗಿದೆ.

ದಾವಣಗೆರೆ ಜಿಲ್ಲೆಯ ಸೂಳೆಕೆರೆ ಹಳ್ಳ ಭರ್ತಿಯಾಗಿ ಎರಡು ದಂಡೆ ಒಂದಾಗಿ ಪ್ರವಾಹ ಬಂದಿದೆ. ಹರಿಹರದಲ್ಲಿ ತುಂಗಭದ್ರಾ ನದಿ ನೀರಿನ ಮಟ್ಟ ಹೆಚ್ಚಳವಾಗಿದೆ. ಜಗಳೂರು ತಾಲ್ಲೂಕಿನಲ್ಲಿ ನಿರಂತರ ಮಳೆಯಿಂದಾಗಿ ತುಪ್ಪದಹಳ್ಳಿ ಕೆರೆ 5 ದಶಕಗಳ ನಂತರ ಭರ್ತಿಯಾಗಿ ಕೋಡಿ ಬಿದ್ದಿದೆ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಜಲಾಶಯ ಭರ್ತಿಯಾಗಿದ್ದು, ಐದು ಕ್ರಸ್ಟ್ ಗೇಟ್‌ಗಳ ಮೂಲಕ 500 ಕ್ಯುಸೆಕ್ ನೀರನ್ನು ಶುಕ್ರವಾರ ನದಿಗೆ ಬಿಡಲಾಯಿತು. ರಾಯಚೂರು ಜಿಲ್ಲೆಯ ಮಸ್ಕಿ ಜಲಾಶಯ ಭರ್ತಿಯಾಗಿದ್ದು, 500 ಕ್ಯುಸೆಕ್ ನೀರನ್ನು ಹಿರೇಹಳ್ಳಕ್ಕೆ ಬಿಡಲಾಗುತ್ತಿದೆ.

ವಿಶೇಷ ಸೌಲಭ್ಯ ತ್ಯಜಿಸಿದ ಸಿಇಸಿ, ಇಸಿ

ನವದೆಹಲಿ (ಪಿಟಿಐ): ಸಾರ್ವಜನಿಕ ವೆಚ್ಚ ತಗ್ಗಿಸಲು ಚುನಾವಣಾ ಆಯೋಗದ ಮುಖ್ಯ ಆಯುಕ್ತ (ಸಿಇಸಿ) ರಾಜೀವ್ ಕುಮಾರ್ ಹಾಗೂ ಚುನಾವಣಾ ಆಯುಕ್ತ (ಇಸಿ) ಅನೂಪ್ ಚಂದ್ರ ಪಾಂಡೆ ಅವರು ತಮಗಿರುವ ವಿಶೇಷ ಸೌಲಭ್ಯಗಳನ್ನು ಸ್ವಯಂ ಪ್ರೇರಣೆಯಿಂದ ಬಿಟ್ಟುಕೊಡಲು ನಿರ್ಧರಿಸಿದ್ದಾರೆ.

ಈ ಇಬ್ಬರು ಅತಿಥ್ಯ ಭತ್ಯೆ ಮೇಲಿನ ಆದಾಯ ತೆರಿಗೆ ವಿನಾಯಿತಿ ಪಡೆಯದಿರಲು ಮತ್ತು ಪ್ರತಿ ವರ್ಷ ಕುಟುಂಬ ಸದಸ್ಯರೊಂದಿಗೆ ಕೈಗೊಳ್ಳಲು ತಮಗಿರುವ ರಿಯಾಯಿತಿ ಪ್ರಯಾಣದ ಮೂರು ರಜೆಗಳ ಪೈಕಿ, ಎರಡು ರಜೆಗಳನ್ನು ಸರ್ಕಾರಕ್ಕೆ ಹಿಂತಿರುಗಿಸಲು ನಿರ್ಧರಿಸಿದ್ದಾರೆ.

ಕಳೆದ ವಾರವಷ್ಟೇ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ್ದ ರಾಜೀವ್ ಕುಮಾರ್, ಚುನಾವಣಾ ಆಯುಕ್ತ ಪಾಂಡೆ ಅವರ ಜತೆ ಶುಕ್ರವಾರ ಮೊದಲ ಸಭೆ ನಡೆಸಿದರು. ಸಿಇಸಿ ಮತ್ತು ಇಸಿಗಳ ಅತಿಥ್ಯ ಭತ್ಯೆ ಮೇಲಿನ ಆದಾಯ ತೆರಿಗೆ ವಿನಾಯಿತಿ ಸೇರಿ ಇತರ ವಿಶೇಷ ಸವಲತ್ತುಗಳು ಮತ್ತು ಸೌಲಭ್ಯಗಳ ಬಗ್ಗೆ ಚರ್ಚಿಸಿದರು.

ಸಿಇಸಿ ಮತ್ತು ಇಸಿಗಳು ಯಾವುದೇ ವಿಶೇಷ ಸೌಲಭ್ಯಗಳನ್ನು ಪಡೆಯುವುದರಿಂದ ಸರ್ವಾನುಮತದ ತೀರ್ಮಾನವನ್ನು ಚುನಾವಣಾ ಆಯೋಗ ಕೈಗೊಂಡಿದ್ದು, ಈ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ನಿರ್ಧರಿಸಲಾಗಿದೆ.

ಸಿಇಸಿ ಮತ್ತು ಇಸಿಗಳಿಗೆ ಚುನಾವಣಾ ಆಯೋಗದ ಕಾಯ್ದೆ-1991ರ ಸೆಕ್ಷನ್ 3ರ ಅಡಿ ವೇತನ ಮತ್ತು ಇತರ ಸವಲತ್ತುಗಳ ಜತೆಗೆ, ತಿಂಗಳಿಗೆ ₹34 ಸಾವಿರ ಅತಿಥ್ಯ ಭತ್ಯೆ ಇದೆ. ಈ ಭತ್ಯೆಗೆ ತೆರಿಗೆ ವಿನಾಯಿತಿಯೂ ಇದೆ.

ನಾಳೆ ದಾವೋಸ್‌ಗೆ ಬೊಮ್ಮಾಯಿ ಪಯಣ

ಬೆಂಗಳೂರು: ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಮಾವೇಶದಲ್ಲಿ ಭಾಗ ವಹಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 22ರ ಭಾನುವಾರ ಬೆಳಿಗ್ಗೆ ಪ್ರಯಾಣ ಬೆಳೆಸಲಿದ್ದಾರೆ.

ಇದೇ 23 ಮತ್ತು 24 ರಂದು ಆರ್ಥಿಕ ಸಮಾವೇಶ ನಡೆಯಲಿದ್ದು, ಬೊಮ್ಮಾಯಿ ಅದರಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ 26 ರಂದು ವಾಪಸ್ ಆಗಲಿದ್ದಾರೆ.

ರಾಜ್ಯದಲ್ಲಿ ವಿವಿಧ ರೀತಿಯ ಕೈಗಾರಿಕೆಗಳ ಹೂಡಿಕೆಗಳಿಗೆ ಇರುವ ವಿಪುಲ ಅವಕಾಶಗಳ ಬಗ್ಗೆ ವಿಶ್ವದ ಹೂಡಿಕೆದಾರರಿಗೆ ಮನವರಿಕೆ ಮಾಡಿ ರಾಜ್ಯಕ್ಕೆ ಹೂಡಿಕೆದಾರರನ್ನು ಸೆಳೆಯಲು ಮುಖ್ಯಮಂತ್ರಿ ಮತ್ತು ಅವರ ತಂಡ ಪ್ರಯತ್ನಿಸಬೇಕಾಗಿದೆ.

ಅತಿ ವಿರಳ 'ಉದ್ದ ಕಣ್ಣಿನ ಏಡಿ' ಪತ್ತೆ

ಪ್ರಜಾವಾಣಿ ವಾರ್ತೆ

ಕಾರವಾರ: ದೇಶದ ಪಶ್ಚಿಮ ಕರಾವಳಿಯಲ್ಲಿ ಅತ್ಯಂತ ವಿರಳವಾಗಿ ಕಾಣಸಿಗುವ 'ಉದ್ದ ಕಣ್ಣಿನ ಏಡಿ'ಯೊಂದು (ಸ್ಯೂಡೊಪೊತಾಲಾಸ್ ವಿಜಿಲ್) ತಾಲ್ಲೂಕಿನ ಮಾಜಾಳಿಯಲ್ಲಿ ಮೀನುಗಾರರ ಬಲೆಗೆ ಬಿದ್ದಿದೆ.

ಈ ಏಡಿಗೆ ತನ್ನ ದೇಹದಷ್ಟೇ ಉದ್ದವಿರುವ ಕಡ್ಡಿಯಂಥ ರಚನೆಯ ತುದಿಯಲ್ಲಿ ಕಣ್ಣುಗಳಿರುತ್ತವೆ. ಹವಾಯಿ ದ್ವೀಪ, ಕೆಂಪು ಸಮುದ್ರ, ಜಪಾನ್,



'ಉದ್ದ ಕಣ್ಣಿನ ಏಡಿ'

ಆಸ್ಟ್ರೇಲಿಯಾ ಮತ್ತು ದಕ್ಷಿಣ ಏಷ್ಯಾ ದ್ವೀಪ ರಾಷ್ಟ್ರಗಳ ಕಡಲಿನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ವಾಸಿಸುತ್ತವೆ. ಇದಕ್ಕೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆಯಿದೆ.

'ದೇಶದ ಪೂರ್ವ ಕರಾವಳಿಯಲ್ಲಿ ಬಾಂಗ್ಲಾದೇಶದವರೆಗೂ ಈ ಪ್ರಭೇದದ ಏಡಿಗಳ ವಾಸ್ತವ್ಯವಿದೆ. ಪಶ್ಚಿಮ ಕರಾವಳಿಯ ಅರಬ್ಬಿ ಸಮುದ್ರದಲ್ಲಿ ಬಹಳ ವಿರಳವಾಗಿ ಸಿಕ್ಕಿರುವ ಉದಾ ಹರಣೆಗಳಿವೆ. ಸಮುದ್ರದ ಮರಳಿನಲ್ಲಿ ಹೊಂಚು ಹಾಕಿ ಕುಳಿತುಕೊಳ್ಳುವ ಈ ಏಡಿಗೆ ಬೇಟೆಯಾಡಲು ದುರ್ಬೀನಿನಂಥ ಕಣ್ಣುಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ' ಎಂದು ಕಾರವಾರದ ಕಡಲ ಜೀವವಿಜ್ಞಾನ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ ಹರಗಿ ಮಾಹಿತಿ ನೀಡಿದರು.

'ನಾರಾಯಣ ಗುರುಗಳ ಪಠ್ಯ ಕೈಬಿಟ್ಟಿಲ್ಲ'

ಬೆಂಗಳೂರು: 'ಸಮಾಜ ಸುಧಾರಕ ಬ್ರಹ್ಮಶ್ರೀ ನಾರಾಯಣ ಗುರು ಸಂದೇಶವನ್ನು ಹೊಂದಿರುವ ಪಠ್ಯವನ್ನು ಶಾಲಾ ಪಠ್ಯಪುಸ್ತಕದಿಂದ ಕೈಬಿಡುವ ಪ್ರಶ್ನೆಯೇ ಇಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಎಂದು ಶುಕ್ರವಾರ ಹೇಳಿದರು.

'ಕೃಷ್ಣಾ'ದಲ್ಲಿ ಮಾತನಾಡಿದ ಅವರು, 'ಈ ಕುರಿತು ಮುಖ್ಯಮಂತ್ರಿ ಬೊಮ್ಮಾಯಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಜತೆ ಮಾತುಕತೆ ನಡೆಸಿದ್ದೇನೆ. ಅವರು ಈ ವಿಷಯ ಸ್ಪಷ್ಟಪಡಿಸಿದ್ದಾರೆ. ಪಠ್ಯ ಕೈಬಿಡಲಾಗಿದೆ ಎಂಬ ವದಂತಿಗೆ ಈಡಿಗರು, ಬಿಲ್ಲವರು ಮತ್ತು ನಾರಾಯಣ ಗುರುಗಳ ಅನುಯಾಯಿಗಳು ಕಿವಿಗೊಡಬಾರದು' ಎಂದೂ ಮನವಿ ಮಾಡಿದರು.

ಮಸ್ಕಿ ತಾ.ಪಂ.ಗೆ 30ಗಳಲ್ಲಿ 4 ಇಒ

ಮಸ್ಕಿ (ರಾಯಚೂರು): ತಾಲ್ಲೂಕು ಕೇಂದ್ರವಾದ ನಂತರ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ತಾಲ್ಲೂಕು ಪಂಚಾಯಿತಿಗೆ ಮೇ ತಿಂಗಳೊಂದರಲ್ಲೇ ನಾಲ್ವರು ಕಾರ್ಯನಿರ್ವಾಹಕ ಅಧಿಕಾರಿಗಳು ವರ್ಗವಾಗಿ ಬಂದು ಹೋಗಿದ್ದಾರೆ.

ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕಾರ್ಯನಿರ್ವಾಹಕ ಅಧಿಕಾರಿ ಬಾಬು ರಾಠೋಡ ಅವರನ್ನು ವರ್ಗಾಯಿಸಿದ ಸರ್ಕಾರ, ಅವರ ಜಾಗಕ್ಕೆ ಅಮರೇಶ ಮೊಡಲದಿನ್ನಿ ಅವರನ್ನು ವರ್ಗಾಯಿಸಿತು. ಅಮರೇಶ ಅವರು ಅಧಿಕಾರ ವಹಿಸಿಕೊಂಡ 15 ದಿನಗಳಲ್ಲಿ ಅವರನ್ನು ಲಿಂಗಸೂಗೂರಿಗೆ ವರ್ಗಾವಣೆ ಮಾಡಿ ಅವರ ಸ್ಥಾನಕ್ಕೆ ರಾಯಚೂರಿನ ಮೈಬೂಬ್ ಜಿಲಾನಿ ಎಂಬುವರನ್ನು ವರ್ಗಾಯಿಸಿ ಆದೇಶಿಸಿತು.

ಜಿಲಾನಿ ಅವರು ಅಧಿಕಾರ ಸ್ವೀಕರಿಸಿದ 2 ದಿನಗಳಲ್ಲೇ ಅವರನ್ನು ವರ್ಗಾಯಿಸಿ ಅವರ ಜಾಗಕ್ಕೆ ಪವನಕುಮಾರ ಎಂಬುವರನ್ನು ನಿಯೋಜಿಸಿದೆ.

ಅಂಚೆ ಮೂಲಕ ಮಾವು ಸೇವೆ ● ಕಾರ್ಯಕ್ರಮಕ್ಕೆ ಸಚಿವ ಮುನಿರತ್ನ ಚಾಲನೆ

‘ಉದ್ಯಾನಗಳಲ್ಲಿ ಮಾವು ಮೇಳ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾವು ನಿಗಮವು ನಗರದ ಉದ್ಯಾನಗಳಲ್ಲಿ ಮಾವು ಮೇಳ ಆಯೋಜಿಸಲು ಮುಂದೆ ಬಂದರೆ, ತೋಟಗಾರಿಕೆ ಇಲಾಖೆ ಅಗತ್ಯ ಸಹಕಾರ ನೀಡಲಿದೆ’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು (ಕೆಎಸ್ಎಂಡಿಎಂಸಿ) ಅಂಚೆ ಇಲಾಖೆ ಸಹಯೋಗದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಮಾವು ತಲುಪಿಸುವ ಸೇವೆ ಮೂರನೇ ವರ್ಷವೂ ಮುಂದುವರಿದಿದೆ. ಈ ವರ್ಷದ ಸೇವೆಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಸಚಿವರು, ‘ಅಂಚೆ ಇಲಾಖೆ ಇನ್ನು ರುಚಿಕರವಾದ ಮಾವನ್ನು ಗ್ರಾಹಕರಿಗೆ ತಲುಪಿಸಲಿದೆ. ಇದರಿಂದ ಮಾವು ಬೆಳೆಗಾರರಿಗೂ ಅನುಕೂಲವಾಗುತ್ತಿದೆ. ರೈತ ಸಮುದಾಯಕ್ಕೆ ವರವಾಗುವ ನಿಟ್ಟಿನಲ್ಲಿ ಮಾವು ನಿಗಮದ ಜತೆ ಅಂಚೆ ಇಲಾಖೆ ಕೈಜೋಡಿಸಿರುವುದು ದೇಶಕ್ಕೆ ಮಾದರಿ. ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜು, ‘ನಿಗಮವು ಸುಮಾರು 45 ಸಾವಿರ ಗ್ರಾಹಕರನ್ನು ಹೊಂದಿದೆ. ಮಾವು ಬೆಳೆಗಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಅಂಚೆ ಇಲಾಖೆ ಸಹಯೋಗದಲ್ಲಿ ಆನ್‌ಲೈನ್ ಸೇವೆ ಆರಂಭಿಸಲಾಯಿತು. ರೈತರು ಬೆಳೆದ ಮಾವು ನೇರವಾಗಿ ಗ್ರಾಹಕರ ಕೈಸೇರುತ್ತಿದೆ. ಸೇವೆ ಮೂರನೇ ವರ್ಷಕ್ಕೆ ಕಾಲಿಟ್ಟಿದೆ’ ಎಂದರು.



ಅಂಚೆ ಮೂಲಕ ಮಾವು ತಲುಪಿಸುವ ಸೇವೆಗೆ ತೋಟಗಾರಿಕೆ ಸಚಿವ ಮುನಿರತ್ನ ಶುಕ್ರವಾರ ಚಾಲನೆ ನೀಡಿದರು. ಅಂಚೆ ಸಿಬ್ಬಂದಿ ಇದ್ದಾರೆ

‘ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ಮಾವು ಬೆಳೆಗೆ ಭಾರಿ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ಆದರೂ ಉತ್ತಮ ಗುಣಮಟ್ಟದ ಮಾವನ್ನು ಗ್ರಾಹಕರಿಗೆ ತಲುಪಿಸಲಾಗುವುದು. ತಾಜಾ ಸ್ಥಿತಿಯಲ್ಲಿರುವ ಹಣ್ಣುಗಳನ್ನು ಪೂರೈಸಲು ರೈತರಿಗೂ ಸೂಚಿಸಲಾಗಿದೆ’ ಎಂದರು.

ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್,‘ಅಂಚೆ ಇಲಾಖೆ ಹಲವು ಜನೋಪಯೋಗಿ ಸೇವೆಗಳನ್ನು ನೀಡುತ್ತಿದೆ’ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ.ನಾಗರಾಜು, ಬೆಂಗಳೂರು ವಿಭಾಗದ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ಡಾಶ್ ಹಾಗೂ ಇತರರು ಇದ್ದರು.

ಗ್ರಾಹಕರು https://www.karsirimangoes.karnataka.gov.in/ ಮೂಲಕ ಮಾವು ಖರೀದಿಸಬಹುದು.

ಮೆಟ್ರೊ: ಐದು ದಿನದ ಪಾಸ್ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಮತ್ತು ಮೂರು ದಿನದ ಪಾಸ್ ಪರಿಚಯಿಸಿದ್ದ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್), ಈಗ ಐದು ದಿನಗಳ ಪಾಸ್ ಪರಿಚಯಿಸಿದೆ.

ಐದು ದಿನಗಳ ಪಾಸ್‌ಗೆ ₹550 ದರ ನಿಗದಿ ಮಾಡಲಾಗಿದೆ. ಮರು ಪಾವತಿಸಬಹುದಾದ ಸ್ಮಾರ್ಟ್‌ಕಾರ್ಡ್ ಭದ್ರತಾ ಠೇವಣಿಯನ್ನೂ (₹50) ಇದು ಒಳಗೊಂಡಿದೆ. ಯಾವುದೇ ಮೆಟ್ರೊ ರೈಲು ನಿಲ್ದಾಣದಲ್ಲಾದರೂ ಪಾಸ್ ಖರೀದಿಸಿ, ಐದು ದಿನಗಳ ಅವಧಿಯಲ್ಲಿ ಅನಿಯಮಿತವಾಗಿ ಪ್ರಯಾಣಿಸಬಹುದು. ಸ್ಮಾರ್ಟ್‌ಕಾರ್ಡ್ ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಂಡು ಯಾವುದೇ ಮೆಟ್ರೊ ನಿಲ್ದಾಣದ ಗ್ರಾಹಕ ಸೇವಾ ಕೇಂದ್ರದಲ್ಲಿ ಮರಳಿಸಿ ₹50 ಹಿಂಪಡೆಯಬಹುದು ಎಂದು ಬಿಎಂಆರ್‌ಸಿಎಲ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಭಾವನ ಹೆಸರಲ್ಲಿ ಹುಸಿ ಬಾಂಬ್ ಕರೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಕರೆ ಮಾಡಿದ್ದ ವ್ಯಕ್ತಿಯನ್ನು ಈಶಾನ್ಯ ವಿಭಾಗ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ನಗರದ ಐಟಿ ಸಿಟಿಯ ಸುಭಾಷ್ ಗುಪ್ತ ಬಂಧಿತ. ತನ್ನ ತಂಗಿ ಗಂಡನೊಂದಿಗೆ ಸುಭಾಷ್‌ಗೆ ವೈಷಮ್ಯವಿತ್ತು. ಆತನನ್ನು ಪೊಲೀಸರಿಗೆ ಹಿಡಿದುಕೊಡಬೇಕೆಂಬ ಉದ್ದೇಶದಿಂದ ಭಾವನ ಹೆಸರಿನಲ್ಲೇ ಕರೆ ಮಾಡಿ ಬಾಂಬ್ ಇಟ್ಟಿರುವುದಾಗಿ ಹೇಳಿದ್ದ. ಸುಭಾಷ್ ಈ ಹಿಂದೆ ವಿಮಾನ ನಿಲ್ದಾಣದ ಕಾರ್ಗೊದಲ್ಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ಮುಂಜಾನೆ ಪೊಲೀಸ್ ಕಂಟ್ರೋಲ್ ರೂಂಗೆ ಅಪರಿಚಿತನಿಂದ ಬೆದರಿಕೆ ಕರೆ ಬಂದಿತ್ತು. ಬೆದರಿಕೆ ಕರೆಯಿಂದ ಏರ್‌ಪೋರ್ಟ್‌ನಲ್ಲಿ ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಏರ್‌ಪೋರ್ಟ್ ಟರ್ಮಿನಲ್‌ನಲ್ಲಿ ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ನೇತೃತ್ವದಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ, ರಾಜ್ಯ ಪೊಲೀಸ್, ಕೇಂದ್ರ ಕೈಗಾರಿಕಾ ಮೀಸಲು ಪಡೆಯ ಭದ್ರತಾ ಸಿಬ್ಬಂದಿ ಎರಡು ಗಂಟೆಗೂ ಅಧಿಕ ಕಾಲ ತಪಾಸಣೆ ನಡೆಸಿದರು. ನಂತರ ಇದೊಂದು ಹುಸಿ ಬಾಂಬ್ ಕರೆ ಎಂದು ತಿಳಿದುಬಂದಿದೆ.

ಅಪರಿಚಿತನ ಬಾಂಬ್ ಬೆದರಿಕೆ ಕಾಲ್‌ನಿಂದ ಏರ್ ಪೋರ್ಟ್‌ನಲ್ಲಿ ಆತಂಕ ಹಾಗೂ ಭಯದ ವಾತಾವರಣ ನಿರ್ಮಾಣವಾಗಿತ್ತು. ಇದರಿಂದ ಪ್ರಯಾಣಿಕರು ಆತಂಕಕ್ಕೆ ಒಳಗಾಗಿದ್ದರು. ಬಳಿಕ ಇದು ಹುಸಿ ಬಾಂಬ್ ಕರೆ ಅಂತ ಗೊತ್ತಾಗುತ್ತಿದ್ದಂತೆ ವಾತಾವರಣ ತಿಳಿಯಾಯಿತು.

ಎಸ್ಸೆಸ್ಸೆಲ್ಸಿ: ಸೌಂದರ್ಯ ಶಾಲೆಯ ಇಬ್ಬರಿಗೆ 625 ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು:ನಗರದ ಟಿ. ದಾಸರಹಳ್ಳಿಯ ಹಾವನೂರು ಬಡಾವಣೆಯ ಸೌಂದರ್ಯಶಾಲೆಗೆ ಶೇ 100ರಷ್ಟು ಫಲಿತಾಂಶ ದೊರೆತಿದೆ. ಇಬ್ಬರು ವಿದ್ಯಾರ್ಥಿಗಳು 625 ಅಂಕಗಳಿಸಿದ್ದಾರೆ.

ಒಟ್ಟು 143 ವಿದ್ಯಾರ್ಥಿಗಳಲ್ಲಿ 110 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ. 33 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಶಾಲೆಯ ಪ್ರೇರಣಾ ಎಂ. ಸಾಳುಂಕೆ (625 ಅಂಕಗಳು), ಹೇಮಂತ್‌ಗೌಡ್ (625), ಜಿ. ಹಿತೈಷಿ (624), ಎಸ್.ಎಚ್. ನಮ್ರತಾ (624), ಎಸ್. ನಿಖಿಲ್ 9624), ಟಿ.ಆರ್. ಅನಘಾ (623), ವಿ. ಪ್ರೇಕ್ಷಾ (623), ಎನ್. ಶಿಲ್ಪನಾ (623), ವಿ. ವಿದ್ವತ್ (623), ಎಸ್. ಧನುಷ್ (623), ಎಂ. ಜ್ಯೋತಿ (622), ಎಸ್.ಆರ್. ಸ್ನೇಹ(622), ಕೆ. ಮಾನ್ಯ (622), ಆರ್. ಧನ್ಯತಾ (621), ಸಿ. ಗಂಗಾಧರ್ (621), ಎಂ.ಕೆ. ಗುರುಲಕ್ಷ್ಮಿ(621), ಜೆ. ಸಾನಿಕಾ (621), ವಿವೇಕ್ ಭಾನು ಯು (621), ಜೀವಿಕಾ ವಿ. (620), ಪರೀಕ್ಷಿತ್ ವಿ (620) ಉತ್ತಮ ಅಂಕಗಳನ್ನು ಪಡೆದಿದ್ದಾರೆ.

ಲಿಟ್ಲ್ ಲಿಲ್ಲಿಸ್ ಶಾಲೆ:

ಲಿಟ್ಲ್ ಲಿಲ್ಲಿಸ್ ಇಂಗ್ಲಿಷ್ ಸ್ಕೂಲ್‌ಗೂ ಉತ್ತಮ ಫಲಿತಾಂಶ ದೊರೆತಿದೆ. ಒಟ್ಟು 105 ವಿದ್ಯಾರ್ಥಿಗಳಲ್ಲಿ 50 ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. 60 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಮುಖ್ಯಸ್ಥರು ತಿಳಿಸಿದ್ದಾರೆ.

ಶಾಲೆಯ ಮಂಜುನಾಥ್ ಬಿ 625 ಅಂಕಗಳನ್ನು ಪಡೆದಿದ್ದಾರೆ ಎಂದು ಅವರು ತಿಳಿಸಿದ್ದಾರೆ.



ಪ್ರೇರಣಾ ಎಂ. (625 ಅಂಕಗಳು) ಸೌಂದರ್ಯ ಶಾಲೆ



ಹೇಮಂತ್‌ಗೌಡ (625 ಅಂಕಗಳು) ಸೌಂದರ್ಯ ಶಾಲೆ



ಎಂ. ಹರ್ಷಿತ (625 ಅಂಕಗಳು) ಕಾರ್ಡಿಯಲ್ ಪ್ರೌಢಶಾಲೆ



ಮಂಜುನಾಥ್ (625 ಅಂಕಗಳು) ಲಿಟ್ಲ್ ಲಿಲ್ಲೀಸ್ ಇಂಗ್ಲಿಷ್ ಸ್ಕೂಲ್



ಎಸ್. ನಿಖಿಲ್ (624 ಅಂಕಗಳು) ಸೌಂದರ್ಯ ಶಾಲೆ



ಜಿ. ಹಿತೈಷಿ (624 ಅಂಕಗಳು) ಸೌಂದರ್ಯ ಶಾಲೆ



ನಮ್ರತಾ (624 ಅಂಕಗಳು) ಸೌಂದರ್ಯ ಶಾಲೆ



ರಿಷಿತ್ (624 ಅಂಕಗಳು) ಲಿಟ್ಲ್ ಲಿಲ್ಲಿಸ್ ಇಂಗ್ಲಿಷ್ ಸ್ಕೂಲ್



ಡಿ.ವಿ. ಅಭಿಷೇಕ್ (624 ಅಂಕಗಳು) ಸೆಂಟ್ ಫಿಲೋಮಿನಾ ಇಂಗ್ಲಿಷ್ ಸ್ಕೂಲ್



ಅನಘಾ (623 ಅಂಕಗಳು) ಸೌಂದರ್ಯ ಶಾಲೆ



ಎನ್. ಶಿಲ್ಪನಾ (623 ಅಂಕಗಳು) ಸೌಂದರ್ಯ ಶಾಲೆ



ಧನುಷ್ (623 ಅಂಕಗಳು) ಸೌಂದರ್ಯ ಶಾಲೆ



ವಿದ್ವತ್ ವಿ. (623 ಅಂಕಗಳು) ಸೌಂದರ್ಯ ಶಾಲೆ



ಪ್ರೇಕ್ಷಾ ವಿ (623 ಅಂಕಗಳು) ಸೌಂದರ್ಯ ಶಾಲೆ



ಜೆ. ಐಶ್ವರ್ಯಾ (621 ಅಂಕಗಳು) ಕಾರ್ಮೆಲ್ ಕಾನ್ವೆಂಟ್

‘ಬಿಬಿಎಂಪಿ ಚುನಾವಣೆ ನಡೆಸಿ’

ಒಂದನೇ ಪುಟದಿಂದ

ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ರಾಜ್ಯ ಸರ್ಕಾರ ಮೇಲ್ಮನವಿಯಲ್ಲಿ ಹೇಳಿತ್ತು. ಅಲ್ಲದೆ, ಹೊಸದಾಗಿ ಜಾರಿಗೊಳಿಸಲಾದ ಕಾಯ್ದೆಯನ್ನು ರಿಟ್ ಅರ್ಜಿಯ ಮೂಲಕ ಪ್ರಶ್ನಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ ಎಂದೂ ಸರ್ಕಾರ ದೂರಿತ್ತು.

ಬಿಬಿಎಂಪಿ: 243 ವಾರ್ಡ್ ಮರುವಿಂಗಡಣೆ

ಅಂತಿಮ ಸ್ಪರ್ಶ ನೀಡುತ್ತಿರುವ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಗೆ ಚುನಾವಣೆ ಆಯೋಜಿಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಚುನಾವಣಾ ಆಯೋಗಕ್ಕೆ ಶುಕ್ರವಾರ ಸೂಚನೆ ನೀಡಿದ ಬೆನ್ನಲ್ಲೇ ಪಾಲಿಕೆಯ ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆಗೆ ಅಂತಿಮ ಸ್ಪರ್ಶ ನೀಡಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧ್ಯಕ್ಷತೆಯ ಸಮಿತಿ ಸಿದ್ಧತೆ ನಡೆಸಿದೆ.

ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು 2020ರ ಅ. 14ರಂದು ಮೊದಲ ಸಲ ಅಧಿಸೂಚನೆಯನ್ನೂ ಹೊರಡಿಸಿತ್ತು. ಈ ಕುರಿತು ವರದಿ ನೀಡಲು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅದೇ ಸಂದರ್ಭದಲ್ಲಿ ಸಮಿತಿಯನ್ನೂ ರಚಿಸಿತ್ತು. ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಆಯುಕ್ತರು, ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತರು ಸಮಿತಿಯ ಸದಸ್ಯರಾಗಿದ್ದರು.

2020ರ ಬಿಬಿಎಂಪಿ ಕಾಯ್ದೆ ಜಾರಿಯಾದ ಬಳಿಕ ಇದೇ ಸಮಿತಿಯನ್ನು ಉಳಿಸಿಕೊಂಡ ಸರ್ಕಾರ 2021ರ ಜ. 29ರಂದು ಈ ಕುರಿತು ಪರಿಷ್ಕೃತ ಆದೇಶ ಪ್ರಕಟಿಸಿತು. ಈ ಸಮಿತಿ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ನಡೆಸಿತ್ತಾದರೂ ಇನ್ನೂ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ.

‘ವಾರ್ಡ್‌ಗಳ ಮರುವಿಂಗಡಣೆ ಕಾರ್ಯ ಬಹುತೇಕ ಅಂತಿಮ ಹಂತದಲ್ಲಿದ್ದು, ಶೀಘ್ರವೇ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

‘ವಾರ್ಡ್‌ಗಳ ಮರುವಿಂಗಡಣೆ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲು ಆಗಿಲ್ಲ. ತಕ್ಷಣವೇ ಸಮಿತಿ ಸಭೆ ಕರೆದು ಚರ್ಚೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ. ಬಿಬಿಎಂಪಿ ವ್ಯಾಪ್ತಿಯನ್ನು ವಿಸ್ತರಿಸುವುದಿಲ್ಲ. ಈಗಿನ ವ್ಯಾಪ್ತಿಯನ್ನು ಉಳಿಸಿಕೊಂಡೇ ಮರುವಿಂಗಡಣೆ ಮಾಡಲಾಗುವುದು’ ಎಂದರು.

‘2011ರ ಜನಗಣತಿಯನ್ನು ಆಧರಿಸಿ ವಾರ್ಡ್‌ಗಳ ಮರುವಿಂಗಡಣೆ ನಡೆಸಿದ್ದೇವೆ. ಪ್ರತಿ ವಾರ್ಡ್‌ನಲ್ಲಿ 35 ಸಾವಿರ ಜನಸಂಖ್ಯೆ ಇರುವಂತೆ ನೋಡಿಕೊಂಡು 243 ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಲಾಗಿದೆ. ಒಂದೇ ವಾರ್ಡ್ ಎರಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹಂಚಿ ಹೋಗದಂತೆ ಎಚ್ಚರವಹಿಸಿದೆ. ರಾಜಕಾಲುವೆ ರಸ್ತೆಗಳಂತಹ ಭೌಗೋಳಿಕ ಮೇರೆಗಳನ್ನೂ ಪರಿಗಣಿಸಿ ನಿರ್ಧಾರಕ್ಕೆ ಬಂದಿದ್ದೇವೆ’ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಪಾಂಗಾಂಗ್ ಸೇತುವೆ ನಿರ್ಮಾಣ ಅಕ್ರಮ’

ನವದೆಹಲಿ(ಪಿಟಿಐ): ಪಾಂಗಾಂಗ್ ಸರೋವರಕ್ಕೆ ಚೀನಾ ನಿರ್ಮಿಸುತ್ತಿರುವ ಎರಡನೇ ಸೇತುವೆ 1960ರಿಂದಲೂ ಆ ದೇಶ ಅಕ್ರಮವಾಗಿ ವಶಪಡಿಸಿಕೊಂಡಿರುವ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಭಾರತ ಶುಕ್ರವಾರ ಹೇಳಿದೆ.

ಅಂಥ ಅತಿಕ್ರಮಣವನ್ನು ಭಾರತ ಎಂದಿಗೂ ಒಪ್ಪುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಹೇಳಿದ್ದಾರೆ.

ಮಾಧ್ಯಮ ವರದಿಗಳಿಗೆ ಪ್ರತಿಕ್ರಿಯಿಸಿದ ಅವರು, ‘ಪಾಂಗಾಂಗ್ ಸರೋವರಕ್ಕೆ ಚೀನಾ ಈ ಮೊದಲಿನ ಸೇತುವೆ ಬಳಿ ಮತ್ತೊಂದು ಸೇತುವೆ ನಿರ್ಮಿಸುತ್ತಿರುವ ಬಗ್ಗೆ ವರದಿಗಳನ್ನು ನೋಡಿದ್ದೇವೆ. ಈ ಎರಡೂ ಸೇತುವೆಗಳು ಅಕ್ರಮ. 1960ರಿಂದಲೂ ಚೀನಾ ಅತಿಕ್ರಮಿಸಿರುವ ಪ್ರದೇಶದಲ್ಲೇ ಬರುತ್ತದೆ’ ಎಂದು ಅವರು ಹೇಳಿದ್ದಾರೆ.

ಬೇಯಿಸದೇ ತಿನ್ನುವ ಇಡ್ಲಿ!

ಮೈಸೂರು: ಇಲ್ಲಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ನಡೆಯುತ್ತಿರುವ ಮೂರನೇ ಆವೃತ್ತಿಯ ‘ಟೆಕ್ ಭಾರತ್–2022’ ತಂತ್ರಜ್ಞಾನ ವಸ್ತುಪ್ರದರ್ಶನ ಮತ್ತು ಸಮಾವೇಶದಲ್ಲಿ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ‘ಬೇಯಿಸದೇ ತಿನ್ನುವ ಇಡ್ಲಿ’ಯನ್ನು ಬಿಡುಗಡೆ ಮಾಡಿದರು.

ಇದುವರೆಗೂ ರುಬ್ಬಿದ ಹಿಟ್ಟು ದೊರೆಯುತ್ತಿತ್ತು. ಅದನ್ನು ಬೇಯಿಸಿ ಇಡ್ಲಿ ಮಾಡಬೇಕಿತ್ತು.ಆದರೆ, ಸಿಎಫ್‌ಟಿಆರ್‌ಐ ತಯಾರಿಸಿರುವ ‘ಇಡ್ಲಿಗೊ’ ಎಂಬ ಉತ್ಪನ್ನ ಬೇಯಿಸದೇ ಇಡ್ಲಿ ತಿನ್ನುವಂತಹ ಅವಕಾಶ ನೀಡಿದೆ. ಈ ಉತ್ಪನ್ನಕ್ಕೆ ಕೇವಲ ಬಿಸಿನೀರು ಹಾಕಿದರೆ ಸಾಕು, 4ರಿಂದ 5 ನಿಮಿಷಗಳಲ್ಲಿ ಇಡ್ಲಿ ತಿನ್ನಲು ರೆಡಿಯಾಗುತ್ತದೆ. ಸಿಎಫ್‌ಟಿಆರ್‌ಐನ ಮತ್ತೊಂದು ನೂತನ ಉತ್ಪನ್ನ ‘ತಂಪು ಕಾಫಿ’ಯು ಪೌಷ್ಟಿಕಾಂಶವುಳ್ಳದ್ದಾಗಿದ್ದು, ವಿವಿಧ ಫ್ಲೇವರ್‌ಗಳಲ್ಲಿ ಲಭ್ಯವಿದೆ. ಕತ್ತರಿಸಿದ ಹಣ್ಣುಗಳಿರುವ ‘ಫ್ರೆಶೊ’ ಎಂಬ ಉತ್ಪನ್ನವೂ ಬಿಡುಗಡೆಗೊಂಡಿತು.

ಪ್ರಜಾವಾಣಿ ಶನಿವಾರ, 21 ಮೇ 2022

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಕೋವಿಡ್ ನಂತರದಲ್ಲಿ ಪ್ರತಿಯೊಬ್ಬರೂ ಪೌಷ್ಟಿಕ ಆಹಾರದ ಬಗ್ಗೆ ಮಾತನಾಡುತ್ತಿದ್ದಾರೆ. ಶಾಲೆಯಲ್ಲಿ, ಮನೆಯಲ್ಲಿ, ಮಕ್ಕಳ ಮಾತಲ್ಲಿ ಎಲ್ಲವೂ ಪೌಷ್ಟಿಕ ಆಹಾರದ್ದೇ ವಿಷಯ. ಮಳೆಗಾಲದ ಮುನ್ಸೂಚನೆ, ಸಾಂಕ್ರಾಮಿಕ ರೋಗಗಳು ಹಾಗೂ ಕೋವಿಡ್ ಮರುಕಳಿಸುವ ಭೀತಿಯ ನಡುವೆ ಮಕ್ಕಳ ಊಟದ ಡಬ್ಬಿಯ ಬಗ್ಗೆ ಗಮನಹರಿಸುವ ಅಗತ್ಯ ಪೋಷಕರದ್ದು.



ಶುರುವಾಯ್ತು ಶಾಲಾ ಪರ್ವ...

ಊಟದ ಡಬ್ಬಿಯಲ್ಲಿ ಪೌಷ್ಟಿಕ ಆಹಾರವಿರಲಿ

ಮಂಜುಶ್ರೀ ಎಂ. ಕಡಕೋಳ

‘ಅಮ್ಮಾ, ಇವತ್ತು ಸ್ನ್ಯಾಕ್ಸ್‌ಗೆ ಸಿಟ್ರಸ್ ಫ್ರೂಟ್ಸ್ ಹಾಕಮ್ಮ. ಅದರಲ್ಲಿ ಸಿ ವಿಟಮಿನ್ ಇರುತ್ತದೆ. ದೇಹದ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದಂತೆ. ನಮ್ಮ ಮ್ಯಾಮ್ ಹೇಳಿದರು’ ಎಂದು ಅಂಗಳದಿಂದಲೇ ಕೂಗಿ ಹೇಳಿದಳು ಒಂಬತ್ತನೇ ತರಗತಿ ಓದುತ್ತಿರುವ ರಚನಾ. ಅಕ್ಕನ ಮಾತಿಗೆ ದನಿಗೂಡಿಸಿದ ರಾಘು ಕೂಡ ಶಾಲೆಯಲ್ಲಿ ಹೇಳಿದ ಸೂಚನೆಯನ್ನು ಅಮ್ಮನಿಗೆ ರವಾನಿಸಿದ..!

‘ಕೋವಿಡ್’ ನಂತರದಲ್ಲಿ ಹೀಗೆ ಮಕ್ಕಳೇ ತಮ್ಮ ಡಬ್ಬಿಯ ಆಹಾರ ಬದಲಿಸಲು ಅಮ್ಮನಿಗೆ ಹೇಳುತ್ತಿದ್ದಾರೆ. ಮಳೆಗಾಲದ ಮುನ್ಸೂಚನೆ, ಸಾಂಕ್ರಾಮಿಕ ರೋಗಗಳು ಹಾಗೂ ಕೋವಿಡ್ ಮರುಕಳಿಸುವ ಭೀತಿಯಿಂದಾಗಿ ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ತುಸು ಹೆಚ್ಚೇ ಕಾಳಜಿ ವಹಿಸುತ್ತಿದ್ದಾರೆ. ಮತ್ತೊಂದೆಡೆ ಹಲವು ಶಾಲೆಗಳು ಮಕ್ಕಳಿಗೆ ಬೇಕರಿ ತಿನಿಸು, ಜಂಕ್ ಫುಡ್‌ನಂತಹ ಆಹಾರ ಕೊಟ್ಟು ಕಳಿಸಬೇಡಿ ಎಂದು ಪೋಷಕರಿಗೆ ಸೂಚನೆ ನೀಡಿವೆ. ಹೀಗಾಗಿ ನಿತ್ಯ ಡಬ್ಬಿಗೆ ಯಾವ ರೀತಿ ಆಹಾರ ಒದಗಿಸುವುದೆಂದು ಅಮ್ಮಂದಿರು ಚಿಂತಿಸುತ್ತಿದ್ದಾರೆ.





ಡಾ.ದೀಪ್ತಿ ಲೋಕೇಶಪ್ಪ

ಸಮತೋಲಿತ ಆಹಾರ ಸೂತ್ರ

‘ಮಕ್ಕಳ ಡಬ್ಬಿಯಲ್ಲಿ ಏನೇನು ಆಹಾರವಿರಬೇಕೆಂದು ತುಂಬಾ ಯೋಚಿಸಬೇಡಿ. ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ ಸಮತೋಲಿತ ಆಹಾರ ಸೂತ್ರವೇ ಪರಿಹಾರ’ ಎನ್ನುತ್ತಾರೆ ಮದರ್‌ಹುಡ್ ಆಸ್ಪತ್ರೆಯ ಪೌಷ್ಟಿಕಾಂಶ ತಜ್ಞೆ ಡಾ. ದೀಪ್ತಿ ಲೋಕೇಶಪ್ಪ.

ನೂಡಲ್ಸ್, ಪಿಜ್ಜಾ, ಬರ್ಗರ್, ಅತಿಯಾಗಿ ಕರಿದಿರುವ ಆಹಾರಗಳ ಸೇವನೆಯನ್ನು ಪ್ರಜ್ಞಾಪೂರ್ವಕವಾಗಿ ನಿಲ್ಲಿಸಿಬಿಡಿ. ಮನೆಯಲ್ಲಿ ತಯಾರಿಸುವ ಆಹಾರವನ್ನೇ ಸೇವಿಸಿ. ಜೊತೆಗೆ ಹೆಚ್ಚು ಪೌಷ್ಟಿಕಾಂಶವಿರುವ ಸೊಪ್ಪು–ತರಕಾರಿ, ಮಾಂಸ, ಮೊಟ್ಟೆಗಳನ್ನು ಅಗತ್ಯವಾಗಿ ತಿನ್ನಿ. ಅದರಲ್ಲೂ ಅರಿಸಿನ, ಮೊಸರು, ಹಾಲು ಆಹಾರದ ಪಟ್ಟಿಯಲ್ಲಿ ಕಡ್ಡಾಯವಾಗಿರಲಿ ಎಂಬುದು ಅವರ ಸಲಹೆ.

‘ತಮ್ಮ ಮಕ್ಕಳು ತರಕಾರಿ ತಿನ್ನುವುದಿಲ್ಲ’ ಎಂಬುದು ಪೋಷಕರ ಆರೋಪ. ಆದರೆ, ಎಷ್ಟು ಮಂದಿ ಪೋಷಕರು ಮಕ್ಕಳೊಂದಿಗೆ ಕುಳಿತು ಹಣ್ಣು–ತರಕಾರಿ ಸೇವಿಸುತ್ತಾರೆ?. ಆದ್ದರಿಂದ, ಮಕ್ಕಳಿಗೆ ಬಾಲ್ಯದಿಂದಲೇ ಪೌಷ್ಟಿಕ ಆಹಾರ ಸೇವನೆ ಅಭ್ಯಾಸ ಮಾಡಿಸಬೇಕು. ಸ್ನ್ಯಾಕ್ಸ್(ಉಪಾಹಾರ)ಗಾಗಿ ಆಯಾ ಋತುವಿನಲ್ಲಿ ದೊರೆಯುವ ಹಣ್ಣುಗಳ ಜತೆಗೆ ಒಣ ಹಣ್ಣುಗಳನ್ನು ಕೊಡಬೇಕು. ತರಕಾರಿ ಇಷ್ಟಪಟ್ಟು ತಿನ್ನುವ ಮಕ್ಕಳಿಗೆ ಸೌತೆಕಾಯಿ, ಕ್ಯಾರೆಟ್ ಜತೆಗೆ ಮೊಳಕೆ ಬರಿಸಿದ ಕಾಳುಗಳನ್ನೂ ಕಳುಹಿಸುವ ಅಭ್ಯಾಸ ಮಾಡಿ’ ಎನ್ನುತ್ತಾರೆ ದೀಪ್ತಿ.

ಮಧ್ಯಾಹ್ನದ ಊಟಕ್ಕಾಗಿ ಪ್ರತ್ಯೇಕ ಅಡುಗೆ ಮಾಡಲು ಸಾಧ್ಯವಾಗದವರು ಬೆಳಗಿನ ತಿಂಡಿಯನ್ನೇ ಡಬ್ಬಿಗೆ ಹಾಕಿಕೊಡಿ, ತಪ್ಪೇನಿಲ್ಲ. ತರಕಾರಿ ಉಪ್ಪಿಟ್ಟು, ಚಿತ್ರಾನ್ನ, ಅವಲಕ್ಕಿ, ಪಲಾವ್, ಇಡ್ಲಿ, ದೋಸೆಯನ್ನೂ ಕಳುಹಿಸಬಹುದು. ಮಕ್ಕಳಿಗೆ ಕೊಡುವ ಆಹಾರ ತಾಜಾ ಹಾಗೂ ವೈವಿಧ್ಯಮಯವಾಗಿರಬೇಕು. ಅದರಲ್ಲಿ ಹೆಚ್ಚು ತರಕಾರಿ, ಬೇಳೆ ಕಾಳುಗಳಿರಬೇಕು.

ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ

ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಗೆ ವಿಟಮಿನ್, ಕ್ಯಾಲ್ಸಿಯಂ, ಪ್ರೊಟೀನ್ ಒಳಗೊಂಡ ಆಹಾರ ಅಗತ್ಯ. ಅದಕ್ಕಾಗಿ ಪೋಷಕರು ಹೆಚ್ಚಿನ ಮುತುವರ್ಜಿ ವಹಿಸಬೇಕಿಲ್ಲ. ನಿತ್ಯ ಲಭ್ಯವಾಗುವ ಹಣ್ಣು–ತರಕಾರಿಗಳನ್ನೇ ಉಪಾಹಾರ–ಊಟದಲ್ಲಿ ಬಳಸಿದರೆ ಸಾಕು ಎನ್ನುವುದು ಪೌಷ್ಟಿಕಾಂಶ ತಜ್ಞರ ಸಲಹೆ.


ವಿಟಮಿನ್ ಸಿ, ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಹಾಗಾಗಿ, ನಿತ್ಯದ ಆಹಾರದಲ್ಲಿ ಸಿಟ್ರಸ್ ಜಾತಿಗೆ ಸೇರಿದ ನಿಂಬೆಯನ್ನು ಹೆಚ್ಚಾಗಿ ಬಳಸಿ. ಕಿತ್ತಳೆಯಂಥ ಹಣ್ಣುಗಳನ್ನು ತಿನ್ನಲು ಕೊಡಿ. ಇದರ ಜತೆಗೆ ದೊಣ್ಣೆ ಮೆಣಸಿನಕಾಯಿ (ಕ್ಯಾಪ್ಸಿಕಂ), ಬ್ರೊಕೋಲಿ, ಮೀನು, ಹಸಿರು ಸೊಪ್ಪುಗಳು, ಅರಿಸಿನ, ಹಾಲು, ಮೊಟ್ಟೆ, ಚಿಕನ್, ಕಾಳುಗಳು ಇರಲಿ. ಹಾಲಿಗೆ ಅರಿಸಿನ ಹಾಕಿ ಕೊಡುವುದು, ನಿತ್ಯದ ಅಡುಗೆಯಲ್ಲಿ ಅರಿಸಿನ ಬಳಕೆ ಮಾಡುವುದು, ಕ್ಯಾಪ್ಸಿಕಂ ಬಳಸಿ ಪಲಾವ್ ಮಾಡುವುದು, ಬೆಳಗಿನ ಉಪಾಹಾರಕ್ಕೆ ಬೇಯಿಸಿದ ಮೊಟ್ಟೆಯ ಜತೆಗೆ ಸದ್ಯ ಮಾರುಕಟ್ಟೆಯಲ್ಲಿ ಸಿಗುವ ಪಪ್ಪಾಯ, ಕಿತ್ತಳೆ, ಮಾವು.. ಇಂಥ ಯಾವುದಾದರೂ ಹಣ್ಣನ್ನು ಕೊಡಬಹುದು. ಇವುಗಳನ್ನು ಕೊಡಲು ಸಾಧ್ಯವಾಗದಿದ್ದರೆ ಟೊಮೆಟೊ ಹಣ್ಣನ್ನಾದರೂ ಕೊಡಬಹುದು ಎನ್ನುತ್ತಾರೆ ಪೌಷ್ಟಿಕಾಂಶ ತಜ್ಞರು.

ಹಣ್ಣು, ತರಕಾರಿ ಪರಿಚಯಿಸಿ

ಗೆಳತಿಯ ಸಂಬಂಧಿಕರ ಹುಡುಗನೊಬ್ಬನಿಗೆ ಸಪೋಟ ಹಣ್ಣನ್ನು ತಿನ್ನಲು ಕೊಟ್ಟರೆ, ‘ಇದು ತಿನ್ನುವುದಾ’ ಎಂದು ಕೇಳಿದನಂತೆ. ಅವರು ‘ಹೂಂ ತಿನ್ನು’ ಎಂದರೆ, ‘ಇದು ಜ್ಯೂಸ್ ಮಾಡುವುದಲ್ಲವಾ’ ಎಂದು ಪುನಃ ಕೇಳಿದನಂತೆ. ಇದು ಮಕ್ಕಳಲ್ಲಿ ಹಣ್ಣು–ತರಕಾರಿಗಳ ಪರಿಚಯದ ಕೊರತೆ ಇದೆ ಎನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ. ಈ ಹಿನ್ನೆಲೆಯಲ್ಲಿ ಪೋಷಕರು ಮಕ್ಕಳಿಗೆ ತರಕಾರಿ– ಹಣ್ಣುಗಳನ್ನು ಪರಿಚಯಿಸಿ. ಬಣ್ಣ, ಗಾತ್ರ ಅವುಗಳ ವಿಶೇಷ ಗುಣ ಮಕ್ಕಳಿಗೆ ತಿಳಿಸಿ. ತರಕಾರಿಗಳನ್ನು ತೊಳೆದುಕೊಡುವುದು, ಹಣ್ಣು ಹೆಚ್ಚಿಕೊಡುವಂಥ ಕೆಲಸವನ್ನು ಅವರಿಗೇ ವಹಿಸಿ. ಆದರೆ, ಒಂದೇ ಸಲಕ್ಕೆ ಇಂಥ ತರಕಾರಿ, ಹಣ್ಣು ತಿನ್ನಬೇಕೆಂಬ ಫರ್ಮಾನು ಹೊರಡಿಸಬೇಡಿ. ಹಾಗೆ ಮಾಡಿದರೆ ಹಟಕ್ಕೆ ಬಿದ್ದು ‘ನಾನ್ ತಿನ್ನೋದಿಲ್ಲ, ಏನೀವಾಗ’ ಎಂದು ಹಟ ಮಾಡುತ್ತಾರೆ. ಹಾಗಾಗಿ ಹಣ್ಣು–ತರಕಾರಿಗಳ ತಿನ್ನುವ ಅಭ್ಯಾಸ ಹಂತಹಂತವಾಗಿ ಇರಲಿ. ಮಕ್ಕಳೊಂದಿಗೆ ಪೋಷಕರು ಹಣ್ಣು–ತರಕಾರಿ ತಿನ್ನುವುದನ್ನು ಅಭ್ಯಾಸ ಮಾಡಬೇಕು. ಇಂಥ ಪ್ರಾಥಮಿಕ ಪ್ರಯೋಗಗಳು ಮಕ್ಕಳ ಮನಸನ್ನು ಹಣ್ಣು–ತರಕಾರಿಗಳತ್ತ ಆಕರ್ಷಿತರಾಗುವಂತೆ ಮಾಡುತ್ತವೆ. ಆಗ ಸಹಜವಾಗಿ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ.

ಇತ್ತೀಚಿನ ದಿನಗಳಲ್ಲಿ ದೊಡ್ಡವರೂ ಸೇರಿದಂತೆ ಮಕ್ಕಳಲ್ಲಿ ವಿಟಮಿನ್ ‘ಡಿ’ ಕೊರತೆ ಹೆಚ್ಚಾಗಿದೆ. ಈಗ ಶಾಲೆಗಳು ಆರಂಭವಾಗಿರುವುದರಿಂದ ಮಕ್ಕಳು ಬಿಸಿಲಿನ ಸಂಪರ್ಕಕ್ಕೆ ಬಂದರೆ ಆ ನ್ಯೂನತೆ ನಿವಾರಣೆ ಸಾಧ್ಯ. ಇದರ ಜತೆಗೆ ಹಸುವಿನ ಹಾಲು ಮತ್ತು ಮೊಟ್ಟೆಯ ಹಳದಿ ಭಾಗ, ಸಾಲ್ಮನ್ ಮೀನಿನಲ್ಲೂ ವಿಟಮಿನ್ ಡಿ ಹೇರಳವಾಗಿರುತ್ತದೆ. ❖

ಆತಂಕ ಬೇಡ, ಎಚ್ಚರದಿಂದಿರಿ



ಶಾಲೆಗಳಲ್ಲಿ ಪರಸ್ಪರ ಅಂತರ ಪಾಲನೆಯಾಗದಿದ್ದರೂ ಮಕ್ಕಳಿಂದಲೇ ಕೋವಿಡ್ ಹರಡಿದ ಪ್ರಕರಣ ಈವರೆಗೆ ಎಲ್ಲೂ ವರದಿಯಾಗಿಲ್ಲ. ಮುಖ್ಯವಾಗಿ ಮಕ್ಕಳಲ್ಲಿ ಕೋವಿಡ್ ಎದುರಿಸುವ ರೋಗನಿರೋಧಕ ಶಕ್ತಿ ಚೆನ್ನಾಗಿಯೇ ಇರುತ್ತದೆ. ಕೆಲ ಮಕ್ಕಳಲ್ಲಿ ಈಗಾಗಲೇ ಗೊತ್ತಿಲ್ಲದಂತೆ ಕೋವಿಡ್ ಬಂದು ಹೋಗಿ ದೇಹದಲ್ಲಿ ಆ್ಯಂಟಿಬಾಡಿ ಬೆಳೆದಿರಬಹುದು. ಹಾಗಾಗಿ, ಪೋಷಕರು ಕೋವಿಡ್ ಬಗ್ಗೆ ಭಯಪಡುವ ಅಗತ್ಯವಿಲ್ಲ‘ ಎನ್ನುತ್ತಾರೆ ಬೆಂಗಳೂರಿನ ರಾಧಾಕೃಷ್ಣ ಆಸ್ಪತ್ರೆಯ ಮಕ್ಕಳತಜ್ಞ ಡಾ.ಬಿ.ಕೆ. ವಿಶ್ವನಾಥ್ ಭಟ್.

ಆದರೆ, ವಿವಿಧೆಡೆ ದಿಢೀರ್ ಹವಾಮಾನ ಬದಲಾವಣೆ ಹಾಗೂ ಮಳೆಗಾಲದ ಆರಂಭವಾಗಿರುವುದರಿಂದ ನೀರಿನಿಂದ ಬರುವ ಕಾಯಿಲೆಗಳ ಬಗ್ಗೆ ಎಚ್ಚರ ವಹಿಸುವುದು ಅತ್ಯಗತ್ಯ. ಸಾಧ್ಯವಾದಷ್ಟೂ ಮನೆಯಲ್ಲೇ ತಯಾರಿಸಿದ ಆಹಾರ ಸೇವಿಸಿ. ಶಾಲೆಯಿಂದ ಬಂದ ತಕ್ಷಣವೇ ಮಕ್ಕಳು ಕೈಕಾಲು ಮುಖ ತೊಳೆಯುವುದು, ಇಲ್ಲವೇ ಸ್ನಾನ ಮಾಡುವುದು, ಸಮವಸ್ತ್ರ ಬದಲಾಯಿಸುವಂತಹ ಕ್ರಮಗಳನ್ನು ತಪ್ಪದೇ ಪಾಲಿಸಬೇಕು ಎನ್ನುವುದು ಅವರ ಸಲಹೆ.

ಉಗುರು ಕಚ್ಚುವ ಗೀಳು ತಪ್ಪಿಸುವುದು ಹೇಗೆ?

ಆರ್.ಬಿ.ಗುರುಬಸವರಾಜ

ಹನ್ನೊಂದು ವರ್ಷದ ಸೌಮ್ಯ ಪದೇ ಪದೇ ಉಗುರು ಕಚ್ಚುತ್ತಲೇ ಇರುತ್ತಾಳೆ. ತಂದೆ ತಾಯಿ ಅದೆಷ್ಟೇ ಬಾರಿ ಹೇಳಿದರೂ ಈ ಅಭ್ಯಾಸ ಬಿಡುತ್ತಿಲ್ಲ. ಇದರಿಂದಾಗಿ ಉಗುರಿನ ಬುಡದಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಊಟ ಮಾಡುವಾಗ ಬೆರಳು ಉರಿಯುತ್ತಿವೆ ಎಂದು ಕೈಯಿಂದ ಊಟಮಾಡದೇ ಚಮಚ ಬಳಸುತ್ತಾಳೆ. ಪೋಷಕರಿಗೆ ಇದೊಂದು ದೊಡ್ಡ ತಲೆನೋವಾಗಿದೆ.

ಸೌಮ್ಯಳಷ್ಟೇ ಅಲ್ಲ, ಹಲವು ಮಕ್ಕಳಲ್ಲಿ ಈ ಗೀಳು ಇದೆ. ಇದು ವಯಸ್ಕರಲ್ಲೂ ಇದೆ. ಉಗುರು ಕಚ್ಚುವಿಕೆಯನ್ನು ಮನೋವಿಜ್ಞಾನದಲ್ಲಿ ‘ಒನಿಕೊಫೇಜಿಯಾ’ ಎನ್ನುತ್ತಾರೆ. ಇದು ತಾತ್ಕಾಲಿಕ ಹಾಗೂ ಅನಪೇಕ್ಷಿತ ನಡವಳಿಕೆ. ವೃತ್ತಿಪರ ಆರೋಗ್ಯ ಕಾರ್ಯಕರ್ತರ ಮಾರ್ಗಸೂಚಿಗಳ ಪ್ರಕಾರ ಇದೊಂದು ಮಾನಸಿಕ ಗೀಳು.

ಯಾವ ಕಾರಣಕ್ಕೆ ಈ ಗೀಳು

- ಒತ್ತಡ ಮತ್ತು ಆತಂಕ ಉಂಟಾಗುವ ಸಮಯದಲ್ಲಿ, ಆ ಸನ್ನಿವೇಶದಿಂದ ಪಾರಾಗಲು ಉಗುರು ಕಚ್ಚುತ್ತಿರುತ್ತಾರೆ. ಬಾಲ್ಯದಲ್ಲಿ ಬೆರಳು ಚೀಪುವ ಅಭ್ಯಾಸ ಕ್ರಮೇಣವಾಗಿ, ಉಗುರು ಕಚ್ಚುವ ಚಟವಾಗಿ ಮಾರ್ಪಾಡಾಗಿರುತ್ತದೆ.
- ಕೆಲವರು ಏಕತಾನತೆಯಿಂದ ಹೊರಬರಲು ಈ ಗೀಳು ಅಂಟಿಸಿಕೊಂಡಿರುತ್ತಾರೆ. ಮನೆಯಲ್ಲಿ ಜಗಳದ ವಾತಾವರಣ, ತಮ್ಮೊಳಗಿನ ನೋವನ್ನು ಮರೆ ಮಾಚಲೂ ಈ ಅಭ್ಯಾಸ ಮಾಡಿಕೊಂಡಿರುತ್ತಾರೆ.
- ಈ ಗೀಳು ಒಂದಷ್ಟು ಮಂದಿಗೆ ಹಿತವಾದ ಭಾವ ನೀಡುತ್ತದೆ. ಇನ್ನೂ ಕೆಲವರು ಬೇರೆಯವರನ್ನು ಅನುಕರಿಸುತ್ತಾ ಅಭ್ಯಾಸ ಮಾಡಿಕೊಂಡಿರುತ್ತಾರೆ.


ಇವಿಷ್ಟೇ ಅಲ್ಲ. ಇನ್ನೂ ಅನೇಕ ಕಾರಣಗಳಿವೆ. ಅವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತವೆ.

ಪರಿಣಾಮಗಳು

ಉಗುರು ಕಚ್ಚುವಿಕೆಯಿಂದ ಭೌತಿಕ ಪರಿಣಾಮಗಳ ಜೊತೆಗೆ ಮಾನಸಿಕ ಪರಿಣಾಮಗಳೂ ಉಂಟಾಗುತ್ತದೆ ಎನ್ನುತ್ತಾರೆ ಮನೋರೋಗ ತಜ್ಞರು. ಉಗುರು ಕಚ್ಚವಿಕೆಯು ತೀವ್ರವಾಗಿದ್ದಾಗ ಬೆರಳಿನ ತುದಿಗಳ ಅಂಗಾಂಶಕ್ಕೆ ಹಾನಿಯಾಗಿ ರಕ್ತಸ್ರಾವ ಆಗುತ್ತದೆ. ಇದರಿಂದ ಅಂಗಿಯ ಬಟನ್ ಹಾಕಿಕೊಳ್ಳುವುದು, ಊಟ ಮಾಡುವುದು ಸೇರಿದಂತೆ ಬೆರಳು ಬಳಸಿ ಮಾಡುವ ಚಿಕ್ಕ ಚಿಕ್ಕ ಕೆಲಸಗಳಿಗೂ ತೊಂದರೆಯಾಗುತ್ತದೆ. ಮಾತ್ರವಲ್ಲ, ದಂತ ಮತ್ತು ದಂತಕವಚಕ್ಕೆ ಹಾನಿಯಾಗುತ್ತದೆ. ಈ ಗೀಳು ಅತಿಯಾದರೆ ಮಾನಸಿಕ ಹಿಂಸೆಯು ಪ್ರತೀಕಾರವಾಗಿ ಹೊರಹೊಮ್ಮಬಹುದು ಎನ್ನುತ್ತಾರೆ ಮನಃಶಾಸ್ತ್ರಜ್ಞರು.

ಪರಿಹಾರವೇನು

ಈ ಗೀಳನ್ನು ನಿವಾರಿಸಲು ನಿಗದಿತ ಔಷಧಗಳಿಲ್ಲ. ಈ ಅಭ್ಯಾಸದ ಹಿಂದಿನ ಕಾರಣ ಪತ್ತೆ ಮಾಡಿ, ಅದಕ್ಕೆ ಪರಿಹಾರ ಕಂಡು ಹಿಡಿಯುವುದೊಂದೇ ಇರುವ ದಾರಿ ಎಂಬುದು ಮನಃಶಾಸ್ತ್ರಜ್ಞರ ಅಭಿಪ್ರಾಯ. ಈ ಗೀಳು ಹೆಚ್ಚಾಗಿ ಕಾಣವುದು ಮಕ್ಕಳಲ್ಲಿ (ಕೆಲವರಲ್ಲಿ ದೊಡ್ಡವರಾದ ಮೇಲೂ ಇದು ಮುಂದುವರಿದಿರುತ್ತದೆ). ಆದ್ದರಿಂದ ಈ ಚಟವನ್ನು ‘ಚಿಗುರಿ’ ನಲ್ಲೇ ಚಿವುಟಿ ಹಾಕಬೇಕು. ಈ ವಿಷಯದಲ್ಲಿ ಪೋಷಕರು ಮತ್ತು ಶಿಕ್ಷಕರು ಹೆಚ್ಚು ಮುತುವರ್ಜಿ ವಹಿಸಬೇಕು. ಮೊದಲಿಗೆ ಗೀಳಿಗೆ ಕಾರಣಗಳನ್ನು ಅರ್ಥ ಮಾಡಿಕೊಳ್ಳಬೇಕು. ಇದು ಪರಿಹಾರದ ಮೊದಲ ಹೆಜ್ಜೆ.



> “ಆತಂಕ ಮನೋವೇದನೆಯ ಸಾಮಾನ್ಯ ಲಕ್ಷಣವಾದ ಈ ಗೀಳನ್ನು ಹೋಗಲಾಡಿಸಲು ಯಾವುದೇ ಸಿದ್ಧ ಔಷಧಗಳಿಲ್ಲ. ಆತಂಕ ನಿವಾರಿಸುವ ತಂತ್ರಗಳಿಂದ ಮಾತ್ರ ಇದನ್ನು ಹೋಗಲಾಡಿಸಲು ಸಾಧ್ಯವಿದೆ.”
>
> **ಡಾ. ಅರುಣಾ ಯಡಿಯಾಳ್**, ಮನೋವೈದ್ಯೆ, ಮಂಗಳೂರು

ಪೋಷಕರು ಏನು ಮಾಡಬಹುದು?

- ಆಗಾಗ್ಗೆ ಮಕ್ಕಳ ಉಗುರುಗಳನ್ನು ಕತ್ತರಿಸಿ.
- ಯಾವ ಸಂದರ್ಭದಲ್ಲಿ ಮಕ್ಕಳು ಉಗುರು ಕಚ್ಚುತ್ತಾರೆಂದು ಗಮನಿಸಿ, ಆ ಸಮಯದಲ್ಲಿ ಅವರ ಮನಸ್ಸನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸಿ. ‘ಇದೊಂದು ದುರಾಭ್ಯಾಸ. ಇದರಿಂದ ಮನಸ್ಸು–ದೇಹ ಎರಡೂ ಹಾಳಾಗುತ್ತದೆ‘ ಎಂದು ಮಕ್ಕಳಲ್ಲಿ ಅರಿವು ಮೂಡಿಸಬೇಕು.
- ಬೆರಳು ಚೀಪುವ ಅಭ್ಯಾಸವಿರುವ ಮಕ್ಕಳ ಉಗುರುಗಳಿಗೆ ಕಹಿ ರುಚಿಯ ಉತ್ಪನ್ನಗಳನ್ನು ಲೇಪಿಸಿ, ಈ ಅಭ್ಯಾಸ ತಪ್ಪಿಸಬಹುದು. ಚಿಕ್ಕ ಮಕ್ಕಳಿಗಾದರೆ ಕೈಗವಸುಗಳನ್ನು ಹಾಕಬೇಕು.
- ಉಗುರಿನ ಕೆಳಗೆ ಕೊಳೆ, ಬ್ಯಾಕ್ಟೀರಿಯಾಗಳು ಸೇರದಂತೆ ಎಚ್ಚರಿಕೆ ವಹಿಸುವುದು. ಆಗಾಗ ಬಿಸಿ ನೀರಿನಿಂದ ಬೆರಳುಗಳನ್ನು ಸ್ವಚ್ಛವಾಗಿಸಬೇಕು.

ಶಿಕ್ಷಕರ ಪಾತ್ರವೂ ಮುಖ್ಯ

- ಶಾಲೆಗಳಲ್ಲಿ ಶಿಕ್ಷಕರು ಇಂಥ ಗೀಳು ಬೆಳೆಸಿಕೊಂಡಿರುವ ಮಕ್ಕಳನ್ನು ಗುರುತಿಸಬೇಕು. ಅವರು ಯಾವ ಸಂದರ್ಭದಲ್ಲಿ ಹೀಗೆ ನಡೆದುಕೊಳ್ಳುತ್ತಾರೆಂದು ಪತ್ತೆ ಮಾಡಿ, ಅದಕ್ಕೆ ತಕ್ಕಂತೆ ಪರಿಹಾರ ಸೂಚಿಸಬೇಕು.
- ಪರೀಕ್ಷೆ ಭಯ, ಏಕತಾನತೆಯ ಬೇಸರ ಇಂಥವುಗಳಿಂದ ಹೊರಬರಲು ಮಕ್ಕಳು ಉಗುರು ಕಚ್ಚುವ ಅಭ್ಯಾಸ ಬೆಳೆಸಿಕೊಂಡಿರುತ್ತಾರೆ. ಅಂಥ ಮಕ್ಕಳನ್ನು ಎಲ್ಲರೊಂದಿಗೆ ಬೆರೆಯುವಂತೆ ಮಾಡಬೇಕು. ಅದಕ್ಕಾಗಿ ಪಠ್ಯದ ಜೊತೆಗೆ ಹೆಚ್ಚು ಪಠ್ಯೇತರ ಚಟುವಟಿಕೆ(ಮಕ್ಕಳಿಗೆ ಇಷ್ಟವಾದದ್ದು)ಗಳಲ್ಲಿ ಭಾಗವಹಿಸುವಂತೆ ಅವರನ್ನು ಉತ್ತೇಜಿಸಬೇಕು.
- ಉಗುರು ಕಚ್ಚುವುದನ್ನು ಕಂಡಾಕ್ಷಣ ಸ್ನೇಹಿತರು ಎಚ್ಚರಿಸುವಂತೆ ಹೇಳುವುದು ಒಂದು ಸೂಕ್ತ ವಿಧಾನ. ❖



ನಳಪಾಕ

ಮಳೆಗಾಲಕ್ಕೆ ಫಿಷ್, ಮಟನ್ ಸೂಪ್

ಮನಸ್ವಿ

ಫಿಷ್ ಸೂಪ್

ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 1 ಸಣ್ಣದು, ಬೆಳ್ಳುಳ್ಳಿ – 1 ಎಸಳು, ಖಾರದಪುಡಿ – 1 ಟೇಬಲ್ ಚಮಚ, ಚಿಕನ್ ಬ್ರಾಥ್ – 1/2 ಕಪ್, ಜೀರಿಗೆ – 1 ಟೀ ಚಮಚ, ಟೊಮೆಟೊ ರಸ – ಒಂದೂವರೆ ಕಪ್, ದೊಣ್ಣೆ ಮೆಣಸು – ಅರ್ಧ ಕಪ್, ಒಂದೆರಡು ಬಗೆಯ ಮೀನಿನ ತುಂಡು – 1/2 ಕಪ್ (ಮುಳ್ಳು ರಹಿತ ಮೀನಿನ ಮಾಂಸ).

ತಯಾರಿಸುವ ವಿಧಾನ: ದಪ್ಪ ತಳದ ಪಾತ್ರೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ ಸೇರಿಸಿ ಬಣ್ಣ ಬದಲಾಗುವವರೆಗೂ ಹುರಿದುಕೊಳ್ಳಿ. ಅದಕ್ಕೆ ಬೆಳ್ಳುಳ್ಳಿ ಹಾಗೂ ಖಾರದಪುಡಿ ಸೇರಿಸಿ 2 ನಿಮಿಷ ಹುರಿಯಿರಿ. ಅದಕ್ಕೆ ಚಿಕನ್ ಬ್ರಾಥ್, ಕಾಳುಮೆಣಸು, ಜೀರಿಗೆ ಸೇರಿಸಿ ಕೈಯಾಡಿಸಿ. ಇದನ್ನು ದೊಡ್ಡ ಉರಿಯಲ್ಲಿ ಚೆನ್ನಾಗಿ ಕುದಿಸಿ. ನಂತರ ಉರಿ ಸಣ್ಣ ಮಾಡಿ 20 ನಿಮಿಷ ಕುದಿಸಿ. ಅದಕ್ಕೆ ಟೊಮೆಟೊ, ದೊಣ್ಣೆಮೆಣಸು ಹಾಗೂ ಮೀನಿನ ತುಂಡುಗಳನ್ನು ಸೇರಿಸಿ. ಮಧ್ಯಮ ಉರಿಯಲ್ಲಿ ಕುದಿಸಿ. ಪುನಃ ಮುಚ್ಚಳ ಮುಚ್ಚಿ 5 ನಿಮಿಷ ಕುದಿಸಿ. ಈಗ ನಿಮ್ಮ ಮುಂದೆ ಸ್ಪೆಷಲ್ ಫಿಷ್ ಸೂಪ್ ಸವಿಯಲು ಸಿದ್ಧ.

ಮಟನ್ ಸೂಪ್

ಬೇಕಾಗುವ ಸಾಮಗ್ರಿಗಳು: ಮೂಳೆ ಸಹಿತ ಮಟನ್ – 250 ಗ್ರಾಂ, ಈರುಳ್ಳಿ – 1, ಟೊಮೆಟೊ – 1, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಅರಿಸಿನ ಪುಡಿ – ಕಾಲು ಚಮಚ, ಖಾರದಪುಡಿ – ಅರ್ಧ ಚಮಚ, ಕಾಳುಮೆಣಸಿನ ಪುಡಿ – ಅರ್ಧ ಚಮಚ, ಎಣ್ಣೆ – 1 ಚಮಚ, ದಾಲ್ಚಿನ್ನಿ ಎಲೆ – 1, ಚಕ್ಕೆ – 1, ಲವಂಗ – 4, ಉಪ್ಪು – ರುಚಿಗೆ, ಕರಿಬೇವು ಹಾಗೂ ಕೊತ್ತಂಬರಿ ಸೊಪ್ಪು – ಸ್ವಲ್ಪ

ತಯಾರಿಸುವ ವಿಧಾನ: ಮಟನ್ ತುಂಡುಗಳನ್ನು ಚೆನ್ನಾಗಿ ತೊಳೆದು ಸ್ವಚ್ಛ ಮಾಡಿ ಕುಕ್ಕರ್‌ನಲ್ಲಿ ಹಾಕಿ. ಅದಕ್ಕೆ ಈರುಳ್ಳಿ, ಟೊಮೆಟೊ, ಕರಿಬೇವು ಹಾಗೂ ಕೊತ್ತಂಬರಿ ಸೊಪ್ಪು ಸೇರಿಸಿ. ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ. ಅದಕ್ಕೆ ಅರಿಸಿನ ಪುಡಿ, ಖಾರದಪುಡಿ ಹಾಗೂ ಉಪ್ಪು ಸೇರಿಸಿ. 5 ಗ್ಲಾಸ್ ನೀರು ಸೇರಿಸಿ. ದೊಡ್ಡ ಉರಿಯಲ್ಲಿ 4 ವಿಶಲ್ ಕೂಗಿಸಿ. ಈಗ ಉರಿ ಕಡಿಮೆ ಮಾಡಿ, ಪುನಃ 10 ರಿಂದ 12 ನಿಮಿಷ ಕುದಿಸಿ. ನಂತರ ಗ್ಯಾಸ್ ಆಫ್ ಮಾಡಿ ತಣ್ಣದಾಗ ಮೇಲೆ ಈ ಎಲ್ಲವನ್ನೂ ಸ್ಮ್ಯಾಶ್ ಮಾಡಿ (ನುಣ್ಣಗೆ ಮಾಡಬಾರದು).

ಪ್ಯಾನ್‌ವೊಂದನ್ನು ಬಿಸಿ ಮಾಡಿ ಅದಕ್ಕೆ ಚಕ್ಕೆ, ಲವಂಗ, ದಾಲ್ಚಿನ್ನಿ ಎಲೆ ಹಾಗೂ ಕರಿಬೇವು ಹಾಕಿ ಎಲ್ಲವನ್ನು ಹುರಿಯಿರಿ. ಅದಕ್ಕೆ ಮೊದಲೇ ಬೇಯಿಸಿಟ್ಟುಕೊಂಡ ಸೂಪ್ ಸೇರಿಸಿ. ಕಾಳುಮೆಣಸಿನ ಪುಡಿ ಸೇರಿಸಿ ಸ್ಟೌ ಆಫ್ ಮಾಡಿ. ಬಡಿಸುವ ಮೊದಲು ಹೆಚ್ಚಿದ ಕೊತ್ತಂಬರಿ ಸೊಪ್ಪು ಸೇರಿಸಿ ಕುಡಿಯಲು ಕೊಡಿ.



35 ವಯಸ್ಸಿನ ನಂತರ ಮಕ್ಕಳಾಗುವುದಿಲ್ಲವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 36 ವರ್ಷ, ನನ್ನ ಪತಿಗೆ 42 ವರ್ಷ. ಮದುವೆ ಆಗಿ ನಾಲ್ಕು ವರ್ಷ ಆಗಿದೆ. ಇನ್ನೂ ಮಕ್ಕಳಾಗಿಲ್ಲ. ನಾವು ಎಲ್ಲಾ ತರಹದ ಚಿಕಿತ್ಸೆ ತೆಗೆದುಕೊಂಡಿದ್ದೀವಿ. ಐಯುಐ ಕೂಡ ಒಂದು ಸಲ ಆಗಿತ್ತು. ನಾನು ತಿಂಗಳು ಸರಿಯಾಗಿ ಮುಟ್ಟು ಆಗ್ತೀನಿ. ನನ್ನ ಪತಿಯ ವೀರ್ಯಾಣುಗಳ ಚಲನಶೀಲತೆ ಕಡಿಮೆ ಅಂತೆ. ನನ್ನ ಅಂಡಾಣುಗಳ ಗುಣಮಟ್ಟ ಕಡಿಮೆ ಇದ್ದು, ನಾನು ಇನ್ನು ಯಾವ ತರಹದ ಚಿಕಿತ್ಸೆ ತೆಗೆದುಕೊಳ್ಳಬಹುದು. ದಯವಿಟ್ಟು ಸಲಹೆ ಕೊಡಿ.**

ಹೆಸರು, ಊರು ಬೇಡ

ನಿಮಗೆ ಈಗಾಗಲೇ 36 ವರ್ಷಗಳಾಗಿದ್ದು ವಯೋಸಹಜವಾಗಿ ಅಂಡಾಣು ಬಿಡುಗಡೆಯಾಗುವ ಪ್ರಕ್ರಿಯೆ ಹಾಗೂ ಗುಣಮಟ್ಟ ಕಡಿಮೆಯಾಗುತ್ತಾ ಬರುತ್ತದೆ. ನೀವು ಫೋಲಿಕ್ ಆಸಿಡ್ ಮಾತ್ರೆಗಳನ್ನು ನಿರಂತರವಾಗಿ ತೆಗೆದುಕೊಳ್ಳುತ್ತಿರಿ. ನಿಮ್ಮ ತೂಕ ಕಾಯ್ದುಕೊಳ್ಳಲು ಪ್ರಯತ್ನಿಸಿ. ನಿಮ್ಮ ಪತಿಯೂ ಕೂಡ ವೀರ್ಯಾಣುಗಳ ಚಲನಶೀಲತೆ ಹೆಚ್ಚಿಸುವ ಮಾತ್ರೆಗಳನ್ನು ವೈದ್ಯರ ಸಲಹೆಯಮೇರೆಗೆ ಕನಿಷ್ಠ 3 ರಿಂದ 6 ತಿಂಗಳು ತೆಗೆದುಕೊಳ್ಳಲಿ. ಬಂಜೆತನ ಚಿಕಿತ್ಸಾ ತಜ್ಞರ ಸಲಹೆಯ ಮೇರೆಗೆ ಸ್ವಲ್ಪ ದಿನ ಕಾದು ನೋಡಿ. ನಂತರ ಐವಿಎಫ್‌ಗೆ (ಪ್ರನಾಳಶಿಶು)ಮೊರೆಹೋಗುವುದು ಉತ್ತಮ ಎನಿಸುತ್ತದೆ.

- **ನನಗೆ 25 ವರ್ಷ. ಮೊದಲ ಮಗು ಸಿ-ಸೆಕ್ಷನ್ ಡೆಲಿವರಿ ಆಗಿತ್ತು. ಎರಡನೇ ಮಗು ಕೂಡ ಸಿ-ಸೆಕ್ಷನ್ ಡೆಲಿವರಿ ಆಗುತ್ತದೆಯೋ ಅಥವಾ ನಾರ್ಮಲ್ ಆಗುತ್ತದೆಯೇ? ನಾರ್ಮಲ್ ಹೆರಿಗೆ ಸಂಭವ ಎಷ್ಟು?**

ಹೆಸರು ತಿಳಿಸಿಲ್ಲ, ಬೆಂಗಳೂರು

ಸಿಜೇರಿಯನ್ ಹೆರಿಗೆ ಅತಿಸಾಮಾನ್ಯವಾಗಿಬಿಟ್ಟಿದೆ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಒಟ್ಟಾರೆ ಉದ್ದೇಶ ತಾಯಿ ಹಾಗೂ ಮಗು ಇಬ್ಬರೂ ಸುರಕ್ಷಿತವಾಗಿರಬೇಕು ಎನ್ನುವುದು ಮಾತ್ರ. ಮಗು ತುಂಬಾ ದೊಡ್ಡದಿದ್ದರೆ ಇಲ್ಲವೇ ತೀರಾ ಸಣ್ಣದಾಗಿ ಬೆಳವಣಿಗೆ ಕುಂಠಿತವಾಗಿದ್ದರೆ, ಹೆರಿಗೆಯ ಸಮಯದಲ್ಲಿ ಮಗು ಉಸಿರುಗಟ್ಟಿ ಸುಸ್ತಾಗಿದ್ದರೆ, ಮಗು ಕಾಲು ಮುಂದಾಗಿರುವ ಭಂಗಿಯಲ್ಲಿದ್ದರೆ ಅಥವಾ ಅಡ್ಡವಾಗಿದ್ದರೆ, ತಲೆ ಹಿಂದಿದ್ದರೆ ಇತ್ಯಾದಿ ಕಾರಣದಿಂದಾಗಿ ಸಿಜೇರಿಯನ್ ಆಗಬಹುದು. 35ಕ್ಕೂ ಅಧಿಕ ವಯಸ್ಸಿನ ಮಹಿಳೆ ಗರ್ಭಿಣಿಯಾಗಿದ್ದರೆ, ಗರ್ಭಿಣಿಯರಲ್ಲಿ ಮಧುಮೇಹ, ರಕ್ತದೊತ್ತಡ ಇತ್ಯಾದಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು ತೊಂದರೆ ಉಂಟಾದರೆ, ಈ ಮೊದಲು ಒಂದೆರಡು ಸಿಜೇರಿಯನ್ ಹೆರಿಗೆ ಆಗಿದ್ದರೆ.. ಇಂಥ ಹಲವು ಕಾರಣಗಳಿಂದ ಸಿಜೇರಿಯನ್ ಹೆರಿಗೆಯಾಗುತ್ತದೆ.

ಇತ್ತೀಚಿನ ಆಧುನಿಕ ಜೀವನಶೈಲಿಯಲ್ಲಿ ಹೆರಿಗೆ ನೋವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಭಯಪಡುವ ಗರ್ಭಿಣಿಯರ ಸಂಖ್ಯೆ ಹೆಚ್ಚಾಗಿದೆ. ಅದೇ ರೀತಿ ಅವರ ಕುಟುಂಬದವರಲ್ಲೂ ತಾಳ್ಮೆ, ಸಹನೆ, ನೋವು ಸಹಿಸಿಕೊಳ್ಳುವುದು ಕಡಿಮೆ ಆಗುತ್ತಿದೆ. ಜೊತೆಗೆ ವೈದ್ಯರು ದಾದಿಯರೂ ಇವರೆಲ್ಲರೂ ಮನುಷ್ಯರೇ ಆಗಿರುವುದರಿಂದ ಅವರಲ್ಲೂ ಮನುಷ್ಯ ಸಹಜ ಗುಣವಾದ ತಾಳ್ಮೆ, ಸಹನೆ ಕಡಿಮೆಯಾಗಿರುವುದರಿಂದ ಸಿಜೇರಿಯನ್ ಹೆಚ್ಚಾಗುತ್ತಿರಬಹುದೇ ಹೊರತು ಕೇವಲ ವೈದ್ಯರ ಹಣ ದಾಹ ಕಾರಣವಲ್ಲ. ಈ ಬಗ್ಗೆ ಪ್ರತಿಯೊಬ್ಬರೂ ಆತ್ಮಾವಲೋಕನ ನಡೆಸಬೇಕಿದೆ.

ನಿಮಗೆ ಈಗಾಗಲೇ ಒಂದು ಸಿಜೇರಿಯನ್ ಆಗಿರುವುದರಿಂದ, ಅದು ಯಾವ ಕಾರಣಕ್ಕಾಗಿ ಆಗಿತ್ತು ಎಂಬುದು ನಿಮಗೆ ಗೊತ್ತಿರಬೇಕಲ್ಲವೇ? ನಿಮಗೆ ಸಹಜ ಹೆರಿಗೆಯಾಗಬೇಕಾದರೆ ಸಿಜೇರಿಯನ್ ಹೆರಿಗೆಯಾಗಿ ಕನಿಷ್ಠ 2 ರಿಂದ 3 ವರ್ಷ ಅಂತರವಿದ್ದು ಮಗು ಬರುವ ಜಾಗ (ಪೆಲ್ವಿಸ್) ಸುಗಮವಾಗಿರಬೇಕು ಹಾಗೂ ಹೊಟ್ಟೆಯಲ್ಲಿ ಒಂದೇ ಮಗುವಿದ್ದು, ತಲೆಕೆಳಗಾಗಿದ್ದು, ಸಾಧಾರಣ ತೂಕವಿದ್ದರೆ ಹಾಗೂ ಗರ್ಭಿಣಿಯರಲ್ಲಿ ಮಧುಮೇಹ, ಏರುರಕ್ತದೊತ್ತಡ, ಇನ್ನಿತರ ಸಮಸ್ಯೆಗಳಿಲ್ಲದೆ ಇದ್ದರೆ ಸಹಜ ಹೆರಿಗೆಗೆ ಪ್ರಯತ್ನಿಸಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ನಿಮಗೆ ನಂಬಿಕೆಯಿರುವ ತಜ್ಞವೈದ್ಯರನ್ನು ಆರಿಸಿಕೊಂಡು ಸುಸಜ್ಜಿತ ಸೌಲಭ್ಯವಿದ್ದ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸಿಕೊಳ್ಳಬೇಕು. ‘ಈ ಬಾರಿ ನನ್ನ ಹೆರಿಗೆ ನೈಸರ್ಗಿಕವಾಗಿಯೇ ಆಗಲಿ. ಅದನ್ನು ನಾನು ಎದುರಿಸಲು ಸಜ್ಜಾಗಿದ್ದೇನೆ’ ಎಂಬ ಮಾತನ್ನು ಧೈರ್ಯವಾಗಿ ಹೇಳಿ ವೈದ್ಯರೊಂದಿಗೆ ಮುಕ್ತ ಸಂವಾದ ನಡೆಸಿ ಚರ್ಚಿಸಿದ ನಂತರ ಎರಡನೇ ಬಾರಿ ನೀವು ಸಹಜ ಹೆರಿಗೆಗೆ ಪ್ರಯತ್ನಿಸಬಹುದು.

- **ನಾನು ಇನ್ನೂ ಮದುವೆ ಆಗಿಲ್ಲ, ಮದುವೆ ನಿಶ್ಚಿತಾರ್ಥವಾಗಿರುವ ಹುಡುಗನ ಜೊತೆಗೆ ಸೇರಿ ಮಾಡಿದ ತಪ್ಪಿಂದ, 45 ದಿನದ ಪ್ರೆಗ್ನೆಂಟ್ ಆಗಿದ್ದೆ. ಆಗ ಅವರು ನನಗೆ ಮಾತ್ರೆಗಳನ್ನು ತಂದುಕೊಟ್ಟಿದ್ದರು. ಇದರಿಂದ ಗರ್ಭಪಾತವಾಯಿತು. ಆದರೆ ನನಗೀಗ ಮುಖದಲ್ಲಿ ಭಂಗು ಬಂದಿದೆ. ಅದು ಹೋಗುತ್ತಲೇ ಇಲ್ಲ, ಏನು ಮಾಡೋದು ತಿಳಿಸಿಕೊಡಿ.**

ಪಲ್ಲವಿ, ಊರು ತಿಳಿಸಿಲ್ಲ

ಮದುವೆಯಾಗದೇ ಲೈಂಗಿಕ ಸಂಪರ್ಕ ಮಾಡಿ ಗರ್ಭಪಾತ ಮಾಡಿಸಿಕೊಂಡಿದ್ದು ತಪ್ಪು. ಇಂತಹ ತಪ್ಪು ಮರುಕಳಿಸದಿರಲಿ. ಸೂರ್ಯನ ಬೆಳಕು ಮುಖಕ್ಕೆ ನೇರವಾಗಿ ಬಿದ್ದರೆ, ಮಾನಸಿಕ ಒತ್ತಡ, ಥೈರಾಯಿಡ್ ಹಾಗೂ ಯಕೃತ್ ತೊಂದರೆಗಳಿದ್ದರೆ, ಗರ್ಭನಿರೋಧಕ ಮಾತ್ರೆಗಳಿಂದ, ಗರ್ಭಧಾರಣೆಯಿಂದ ಹಾರ್ಮೋನು ಅಸಮತೋಲನ ಉಂಟಾದಾಗ ಈ ಭಂಗು ಹೆಚ್ಚಾಗಿ ಕಾಣಿಸುತ್ತದೆ. ಚರ್ಮದ ಕೆಳಗಿರುವ ಮೆಲನೋಸೈಟ್‌ಗಳು ಹೆಚ್ಚು ಮೆಲನೋಸೈಟನ್ನು ಉತ್ಪಾದನೆ ಮಾಡುವುದರಿಂದ ಭಂಗು ಉಂಟಾಗುತ್ತದೆ. ಲೋಳೆಸರ ಹಾಗೂ ಅರಿಸಿನ ಮಿಶ್ರಣ ಮಾಡಿ ನಿಯಮಿತವಾಗಿ ಹಚ್ಚುವುದರಿಂದ ಇದು ಕಡಿಮೆಯಾಗುತ್ತದೆ. ಜಿಂಕ್ ಹಾಗೂ ವಿಟಮಿನ್ ಬಿ 12, ವಿಟಮಿನ್ ಸಿ ಕೊರತೆಯಿಂದಲೂ ಭಂಗು ಉಂಟಾಗುತ್ತದೆ. ಹಾಗಾಗಿ ಈ ಅಂಶಗಳು ಹೆಚ್ಚಿರುವ ಕಡಿದ ಮಜ್ಜಿಗೆ, ಪಾಲಕ್ ಸೊಪ್ಪು, ಕ್ಯಾರೆಟ್, ನೆಲ್ಲಿಕಾಯಿ, ನಿಂಬೆಹಣ್ಣು, ಒಣಹಣ್ಣುಗಳನ್ನು ಹೆಚ್ಚಾಗಿ ಆಹಾರದೊಂದಿಗೆ ಸೇವಿಸಿ. ಪ್ರತಿದಿನ ಮೂರೂವರೆ ಲೀಟರ್ ನೀರನ್ನಾದರೂ ಕುಡಿಯಿರಿ. ಸೂರ್ಯನ ಬೆಳಕು ನೇರವಾಗಿ ಮುಖಕ್ಕೆ ಬೀಳದಂತೆ ನೋಡಿಕೊಳ್ಳಿ. ಇಷ್ಟಕ್ಕೂ ಕಡಿಮೆ ಆಗದಿದ್ದಲ್ಲಿ ಚರ್ಮ ರೋಗ ತಜ್ಞರನ್ನು ಸಂಪರ್ಕಿಸಿ, ಸೂಕ್ತ ಚಿಕಿತ್ಸೆ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomi@prajavani.co.in ಗೆ ಕಳಿಸಬಹುದು.

ಜೈರಾಂ, ರಾಜೀವ್ ಗೌಡ, ಮುದ್ದಹನುಮೇಗೌಡ ಪ್ರಯತ್ನ

ರಾಜ್ಯಸಭೆ: ಕಾಂಗ್ರೆಸ್‌ನಲ್ಲಿ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳಲ್ಲಿ ಟಿಕೆಟ್‌ಗಿಟ್ಟಿಸಲು ಕಾಂಗ್ರೆಸ್ ಪಕ್ಷದಲ್ಲಿ ತೀವ್ರ ಪೈಪೋಟಿ ನಡೆಯುತ್ತಿದೆ. ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸುವುದಕ್ಕಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಶನಿವಾರ ದೆಹಲಿಗೆ ಬರುವಂತೆ ವರಿಷ್ಠರಿಂದ ಕರೆಬಂದಿದೆ. ಆಕಾಂಕ್ಷಿಗಳು ರಾಷ್ಟ್ರ ರಾಜಧಾನಿಯತ್ತ ಹೊರಟಿದ್ದಾರೆ.

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ರಾಜ್ಯ ವಿಧಾನಸಭೆಯಿಂದ ಚುನಾವಣೆ ನಡೆಯುತ್ತಿದೆ. ಅದರಲ್ಲಿ ಒಂದು ಸ್ಥಾನವನ್ನು ಕಾಂಗ್ರೆಸ್ ನಿರಾಯಾಸವಾಗಿ ಪಡೆಯಲಿದೆ. ಹಾಲಿ ಸದಸ್ಯ ಜೈರಾಂ ರಮೇಶ್ ಪುನರಾಯ್ಕೆಯಾಗಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಅವರನ್ನು ಮತ್ತೊಮ್ಮೆ ರಾಜ್ಯಸಭೆಗೆ ಕಳುಹಿಸದಂತೆ ರಾಜ್ಯ ಕಾಂಗ್ರೆಸ್‌ನ ಹಲವರು ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರುತ್ತಿದ್ದಾರೆ.

ರಾಜ್ಯಸಭೆಯ ಮಾಜಿ ಸದಸ್ಯ ಪ್ರೊ. ಎಂ.ವಿ.ರಾಜೀವ್ ಗೌಡ ಎಐಸಿಸಿ ಮಟ್ಟದಲ್ಲಿ ಸಂಪರ್ಕವುಳ್ಳವರ ಮೂಲಕ ಪ್ರಯತ್ನಿಸುತ್ತಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಕೂಡಾ ರಾಜ್ಯಸಭೆಗೆ ಟಿಕೆಟ್ ನೀಡುವಂತೆ ವರಿಷ್ಠರ ಎದುರು ಬೇಡಿಕೆ ಇಟ್ಟಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹತ್ತಾರು ಆಕಾಂಕ್ಷಿಗಳು: ಜೂನ್ 14ಕ್ಕೆ ತೆರವಾಗಲಿರುವ ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ಜೂನ್ 3ರಂದು ಚುನಾವಣೆ ನಡೆಯಲಿದೆ. ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಈ ಚುನಾವಣೆಯಲ್ಲಿ ಎರಡು ಸ್ಥಾನ ಕಾಂಗ್ರೆಸ್‌ಗೆ ಸಿಗಲಿದ್ದು, ಹತ್ತಾರು ಆಕಾಂಕ್ಷಿಗಳಿದ್ದಾರೆ.

ಅಲ್ಲಂ ವೀರಭದ್ರಪ್ಪ, ಆರ್. ಬಿ.ತಿಮ್ಮಾಪೂರ ಮತ್ತು ವೀಣಾ ಅಚ್ಚಯ್ಯ ನಿವೃತ್ತಿಯಾಗುತ್ತಿರುವ ಕಾಂಗ್ರೆಸ್ ಸದಸ್ಯರು. ಅವರಲ್ಲಿ ಅಲ್ಲಂ ವೀರಭದ್ರಪ್ಪ ಮತ್ತು ಆರ್.ಬಿ.ತಿಮ್ಮಾಪೂರ ಮತ್ತೊಂದು ಅವಕಾಶ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಟಿಕೆಟ್ ಕೈತಪ್ಪಿದ್ದ ಹಿರಿಯ ಮುಖಂಡ ಎಸ್.ಆರ್.ಪಾಟೀಲ ಈಗ ಮೇಲ್ಮನೆ ಪ್ರವೇಶಿಸಲು ಪಟ್ಟು ಹಿಡಿದಿದ್ದಾರೆ. ಟಿಕೆಟ್ ನಿರಾಕರಿಸಿದಾಗ ವರಿಷ್ಠರು ನೀಡಿದ್ದ ಭರವಸೆಯನ್ನೇ ಈಗ ನೆನಪಿಸಿ ಟಿಕೆಟ್‌ಗಾಗಿ ಆಗ್ರಹಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪರಿಷತ್‌ನ ಮಾಜಿ ಸದಸ್ಯ ಐವನ್ ಡಿಸೋಜ, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ಸೂರಜ್ ಹೆಗ್ಡೆ ಸೇರಿದಂತೆ ಹಲವರು ಟಿಕೆಟ್‌ಗಾಗಿ ವರಿಷ್ಠರ ಮನವೊಲಿಕೆಯಲ್ಲಿ ನಿರತರಾಗಿದ್ದಾರೆ.

ಇಂದೇ ನಿರ್ಧಾರ ಸಾಧ್ಯತೆ

ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಶನಿವಾರ ಬೆಳಿಗ್ಗೆ ದೆಹಲಿಗೆ ತೆರಳಲಿದ್ದಾರೆ. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೊಂದಿಗೆ ಮಧ್ಯಾಹ್ನ ಮಾತುಕತೆ ನಡೆಯಲಿದೆ. ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅವರೊಂದಿಗೂ ಚರ್ಚಿಸಿರುವ ಸೋನಿಯಾ, ಅಭ್ಯರ್ಥಿಗಳ ಆಯ್ಕೆ ಕುರಿತು ಅಭಿಪ್ರಾಯ ಪಡೆದಿದ್ದಾರೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಜೊತೆಗೆ ಚರ್ಚಿಸಿದ ಬಳಿಕ ಶನಿವಾರವೇ ಪಟ್ಟಿ ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

100 ದಿನ ಪೂರ್ಣಗೊಂಡ ವಾಲ್ಮೀಕಿ ಶ್ರೀ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರು ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಧರಣಿ ಶುಕ್ರವಾರ ನೂರು ದಿನಗಳನ್ನು ಪೂರೈಸಿದೆ.

ಎಸ್ಸಿ, ಎಸ್ಟಿ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ನೀಡುವ ಮೀಸಲಾತಿ ಪ್ರಮಾಣ ಹೆಚ್ಚಿಸಲು ಒತ್ತಾಯಿಸಿ ಫೆ.10ರಿಂದ ಧರಣಿ ನಡೆಸುತ್ತಿರುವ ಶ್ರೀಗಳು, ಬೇಡಿಕೆ ಈಡೇರುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ.



ಪ್ರಸನ್ನಾನಂದ ಸ್ವಾಮೀಜಿ

'ಧರಣಿ ಮುಂದುವರಿಯಲಿದೆ. ಸರ್ಕಾರ ಆದೇಶದ ಪ್ರತಿಯನ್ನು ಹಿಡಿದು ಬರುವವರೆಗೂ ನಾವು ಹಿಂದೆ ಸರಿಯುವುದಿಲ್ಲ. ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ನು ಅನುಷ್ಠಾನಗೊಳಿಸುವಂತೆ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರ ಸ್ಪಂದಿಸದೆ, ವಿಳಂಬ ಮಾಡುತ್ತಿದೆ. ಯಡಿಯೂರಪ್ಪ ಅವರು ಸಿ.ಎಂ ಆಗಿದ್ದಾಗ 'ನಾಗಮೋಹನ್ ದಾಸ್ ವರದಿ ನೀಡಿದ ಕೂಡಲೇ ಅನುಷ್ಠಾನಗೊಳಿಸುತ್ತೇನೆ' ಎಂದಿದ್ದರು. ವರದಿ ನೀಡಿ ಒಂದು ವರ್ಷ ಹತ್ತು ತಿಂಗಳು ಕಳೆದರೂ, ಅನುಷ್ಠಾನಗೊಂಡಿಲ್ಲ. ಈಗಿನ ಸಿಎಂ ಬೊಮ್ಮಾಯಿ ಅವರಾದರೂ ಬೇಡಿಕೆಗೆ ಸ್ಪಂದಿಸಲಿ' ಎಂದು ಒತ್ತಾಯಿಸಿದ್ದಾರೆ.



ಸುಭಾಷಿತ

ನಿಮಗೆ ತೊಂದರೆ ಉಂಟುಮಾಡುವ ಸಂಗತಿಯೆಂದರೆ, ನಿಮಗೆ ಸಮಯ ಇದೆ ಎಂದು ನೀವು ತಿಳಿದುಕೊಳ್ಳುವುದು.
–ಗೌತಮ ಬುದ್ಧ

ಬೆಂಗಳೂರಿನಲ್ಲಿ 'ಪ್ರವಾಹ': ಪರಿಹಾರ ಗೊತ್ತಿದೆ, ಪರಿಹರಿಸುವ ಮನಸ್ಸಿಲ್ಲ

ರಾಜ್ಯದ ಆರ್ಥಿಕ ಚಟುವಟಿಕೆಗಳ ಶಕ್ತಿಕೇಂದ್ರವಾಗಿರುವ ಬೆಂಗಳೂರಿನಲ್ಲಿ ಸರ್ಕಾರದ ಆಡಳಿತಯಂತ್ರ ಹೇಗೆ ಕೆಲಸ ನಿರ್ವಹಿಸುತ್ತಿದೆ ಎಂಬುದನ್ನು ಈ ವಾರ ಸುರಿದ ಮಳೆ ಬಟಾಬಯಲು ಮಾಡಿದೆ. ಹೊರವಲಯದ ವಿಸ್ತರಿತ ಪ್ರದೇಶದಂತಹ ಕೆಲವು ಬಡಾವಣೆಗಳಲ್ಲಿ ಮಳೆನೀರು ಮನೆಗಳಿಗೆ ನುಗ್ಗಿದೆ. ಮೂರು ದಿನ ಕಳೆದರೂ ನೀರಿನ ಮಟ್ಟ ಇಳಿದಿಲ್ಲ. ಜನರು ಮನೆಯನ್ನೇ ತೊರೆದು ಬೇರೆಡೆ ವಾಸ ಮಾಡಬೇಕಾದ ದುಃಸ್ಥಿತಿ ಇದೆ. ಹೆಚ್ಚು ಮಳೆಯಾದಾಗಲೆಲ್ಲ ಬೆಂಗಳೂರಿನಲ್ಲಿ ಪ್ರವಾಹ ಸೃಷ್ಟಿಯಾಗುತ್ತದೆ ಎಂಬುದು ಗೊತ್ತಿರದ ವಿಚಾರವೇನಲ್ಲ. ಧಾರಾಕಾರವಾಗಿ ಮಳೆಯಾದಾಗಲೂ ನೀರು ಸರಾಗವಾಗಿ ಹರಿದುಹೋಗುವಂತೆ ರಾಜಕಾಲುವೆಗಳನ್ನು ಬಲಪಡಿಸುವುದು ಆಡಳಿತ ಯಂತ್ರದ ಆದ್ಯ ಕರ್ತವ್ಯ. ಜೋರು ಮಳೆಯಾದಾಗಲೆಲ್ಲ ಕೆಲವು ಬಡಾವಣೆಗಳಲ್ಲಿ ಪ್ರವಾಹ ಸೃಷ್ಟಿಯಾಗುವುದಕ್ಕೆ ಖಚಿತ ಕಾರಣಗಳು ಏನೆಂಬುದು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿದಿದೆ. ಮಳೆ ಸಂತ್ರಸ್ತ ಪ್ರದೇಶಗಳಿಗೆ ಮುಖ್ಯಮಂತ್ರಿ, ಸಚಿವರು ಹಾಗೂ ಅಧಿಕಾರಿಗಳ ದಂಡು ಭೇಟಿ ನೀಡಿ ಸಾಂತ್ವನ ಹೇಳುವ ಪ್ರಹಸನಗಳು ಮರುಕಳಿಸುತ್ತಿವೆಯೇ ವಿನಾ ಮಳೆ ಹಾನಿ ತಡೆಯುವ ಶಾಶ್ವತ ಕಾರ್ಯಕ್ರಮಗಳು ಜಾರಿಯಾಗುತ್ತಿಲ್ಲ. ಯಲಹಂಕ ಹಾಗೂ ಕೆ.ಆರ್.ಪುರ ಪ್ರದೇಶಗಳಲ್ಲಿ ಕಳೆದ ನವೆಂಬರ್‌ನಲ್ಲಿ ಭಾರಿ ಮಳೆಯಾದಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದರು. ತುರ್ತಾಗಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ತಕ್ಷಣವೇ ಕ್ರಿಯಾಯೋಜನೆ ರೂಪಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸೂಚನೆ ನೀಡಿದ್ದರು. ಮಳೆ ಹಾನಿ ತಡೆಯಲು 157 ಕಿ.ಮೀ. ಉದ್ದದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಬೇಕು, ಒಟ್ಟು 292 ಕಾಮಗಾರಿಗಳ ಅನುಷ್ಠಾನಕ್ಕೆ ₹1,479 ಕೋಟಿ ಅನುದಾನ ಬೇಕು ಎಂದು ಬಿಬಿಎಂಪಿಯು ಕಳೆದ ಡಿಸೆಂಬರ್‌ನಲ್ಲೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ತುರ್ತು ಕಾಮಗಾರಿ ಕೈಗೊಳ್ಳಲು ₹ 411 ಕೋಟಿ ಮಂಜೂರು ಮಾಡುವುದಾಗಿಯೂ ಹೇಳಿತ್ತು. ಆದರೆ, ತುರ್ತು ಕಾಮಗಾರಿಗಳ ಕ್ರಿಯಾಯೋಜನೆಗೆ ಇನ್ನೂ ಅನುಮೋದನೆ ಸಿಕ್ಕಿಲ್ಲ. ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ಕಳೆದ ತಿಂಗಳು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಮತ್ತೊಮ್ಮೆ ಪತ್ರ ಬರೆದರೂ ಸ್ಪಂದನೆ ಸಿಕ್ಕಿರಲಿಲ್ಲ. ಪ್ರವಾಹ ಸಂತ್ರಸ್ತ ಪ್ರದೇಶಗಳಿಗೆ ಭೇಟಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಂತಹ ಪ್ರಹಸನಗಳು ಈಗ ಮರುಕಳಿಸಿವೆ. ಇದು ಬಿಟ್ಟರೆ ವ್ಯವಸ್ಥೆ ಸುಧಾರಣೆಯ ದಿಸೆಯಲ್ಲಿ ಭರವಸೆ ಮೂಡಿಸುವ ಯಾವ ಪ್ರಯತ್ನವೂ ಕಾಣಿಸುತ್ತಿಲ್ಲ.



ಮಳೆನೀರು ಮನೆಗಳಿಗೆ ನುಗ್ಗುತ್ತಿರುವುದರಿಂದ ನಿವಾಸಿಗಳಿಗೆ ಆಗುತ್ತಿರುವ ಬವಣೆ ಪದಗಳಿಗೆ ನಿಲುಕದು. ಇದರಿಂದ ಬೆಂಗಳೂರಿನ ಬ್ರ್ಯಾಂಡ್ ಮೌಲ್ಯಕ್ಕೂ ಧಕ್ಕೆ ಆಗುತ್ತಿದೆ

ನೀರಿನ ಸಹಜ ಹರಿವಿಗೆ ಇರುವ ಅಡೆತಡೆಗಳನ್ನು ನಿವಾರಿಸಿ ರಾಜಕಾಲುವೆಗಳ ನಿರ್ವಹಣೆ ಮಾಡಲೆಂದೇ ಪ್ರತಿವರ್ಷ ₹ 50 ಕೋಟಿ ಅನುದಾನ ಕಾಯ್ದಿರಿಸಲಾಗುತ್ತದೆ. ಮಳೆಗಾಲಕ್ಕೆ ಮುನ್ನವೇ ರಾಜಕಾಲುವೆ ಹಾಗೂ ಮಳೆನೀರು ಚರಂಡಿಗಳ ಹೂಳೆತ್ತುವ ಕೆಲಸ ಸಮಯಕ್ಕೆ ಸರಿಯಾಗಿ ನಡೆದರೆ, ಅನಾಹುತಗಳನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸಬಹುದು. ಮುಂಗಾರುಪೂರ್ವ ಮಳೆಯು ಸೃಷ್ಟಿಸಿದ ಅವಾಂತರಗಳು ರಾಜಕಾಲುವೆಗಳ ನಿರ್ವಹಣೆ ನಿಜಕ್ಕೂ ನಡೆಯುತ್ತಿದೆಯೇ ಎಂಬ ಅನುಮಾನ ಮೂಡಿಸಿವೆ. ಬಿಬಿಎಂಪಿಯ ರಾಜಕಾಲುವೆ ವಿಭಾಗದಲ್ಲಿ 25ಕ್ಕೂ ಅಧಿಕ ಎಂಜಿನಿಯರ್‌ಗಳನ್ನು ಇಟ್ಟುಕೊಂಡು ಇಂತಹ ದೈನಂದಿನ ಕೆಲಸಗಳನ್ನೂ ಸರಿಯಾಗಿ ನಿಭಾಯಿಸದಿದ್ದರೆ ಪರಿಸ್ಥಿತಿ ಸುಧಾರಿಸುವುದಾದರೂ ಹೇಗೆ? ಕೆರೆ ಹಾಗೂ ರಾಜಕಾಲುವೆಗಳ ಒತ್ತುವರಿ ಮತ್ತು ರಾಜಕಾಲುವೆಗಳ ದಿಕ್ಕು ಬದಲಾವಣೆಯೂ ಅನೇಕ ಕಡೆ ಸಮಸ್ಯೆ ಉಲ್ಬಣಿಸಲು ಕಾರಣವಾಗುತ್ತಿವೆ. 2016ರಲ್ಲಿ ನಗರದಲ್ಲಿ ಭಾರಿ ಮಳೆಯಾದಾಗ ರಾಜಕಾಲುವೆ ಒತ್ತುವರಿ ತೆರವು ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಯಿತು. ಆದರೆ, ಪ್ರಭಾವಿಗಳು ಮಾಡಿಕೊಂಡಿದ್ದ ಒತ್ತುವರಿ ತೆರವುಗೊಳಿಸಬೇಕಾಗಿ ಬಂದಾಗ ಜಾಣ ಮರೆವು ಪ್ರದರ್ಶಿಸಲಾಯಿತು. ಅನೇಕ ಕಡೆ ಈಗಲೂ ಒತ್ತುವರಿ ಹಾಗೆಯೇ ಇದೆ. ಒತ್ತುವರಿ ತೆರವಿಗೆ ಈಗಲೂ ಪ್ರಭಾವಿ ವ್ಯಕ್ತಿಗಳೇ ಅಡ್ಡಿಯಾಗಿದ್ದಾರೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನೀರು ಹರಿವಿನ ನೈಸರ್ಗಿಕ ಮಾರ್ಗಗಳೂ ಮೂಲ ದಾಖಲೆಗಳಲ್ಲೇ ಬದಲಾಗುವಷ್ಟರ ಮಟ್ಟಿಗೆ ಇವರ ಪ್ರಭಾವ ಕೆಲಸ ಮಾಡುತ್ತದೆ. ಕೆರೆ, ರಾಜಕಾಲುವೆಗಳಿಗೆ ಸೇರಿದ ಪ್ರದೇಶದಲ್ಲಿ ಕಟ್ಟಡ ಅಥವಾ ಬಡಾವಣೆಗಳನ್ನು ನಿರ್ಮಿಸಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಇದು ಬಾಯಿಮಾತಿಗೆ ಸೀಮಿತವಾಗದೆ ಅನುಷ್ಠಾನಕ್ಕೆ ಬಂದರೆ ಮಾತ್ರ ಭವಿಷ್ಯದಲ್ಲಿ ಮಳೆಯಿಂದ ಗೋಳು ಎದುರಾಗುವುದನ್ನು ತಪ್ಪಿಸಬಹುದು.

ಪ್ರವಾಹದಿಂದ ನಗರದ ನಿವಾಸಿಗಳು ಬವಣೆ ಪಡುತ್ತಿರುವುದು ಒಂದೆಡೆಯಾದರೆ, ಇಲ್ಲಿ ಹೂಡಿಕೆ ಮಾಡಿದ ಸಂಸ್ಥೆಗಳೂ ಭಾರಿ ನಷ್ಟ ಎದುರಿಸುವಂತಹ ಸ್ಥಿತಿ ಇದೆ. ಪದೇಪದೇ ಉಂಟಾಗುವ ಪ್ರವಾಹಗಳು ಬೆಂಗಳೂರಿನ ಬ್ರ್ಯಾಂಡ್ ಮೌಲ್ಯದ ಮೇಲೂ ಪರಿಣಾಮವನ್ನು ಉಂಟು ಮಾಡುತ್ತವೆ. ಇಲ್ಲಿ ಹೂಡಿಕೆ ಮಾಡಲು ಕಂಪನಿಗಳು ಹಿಂದೇಟು ಹಾಕಬಹುದು. ಈ ಬಗ್ಗೆ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು ಗಮನ ಸೆಳೆದಿದ್ದಾರೆ. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಬಿಬಿಎಂಪಿ ಸಲ್ಲಿಸಿರುವ ಪರಿಷ್ಕೃತ ಕ್ರಿಯಾಯೋಜನೆ ಪ್ರಕಾರ, ಮಳೆ ಹಾನಿ ತಡೆಯಲು 60.59 ಕಿ.ಮೀ. ಉದ್ದದ ಪ್ರಥಮ ಹಂತದ ರಾಜಕಾಲುವೆ ಹಾಗೂ 102.87 ಕಿ.ಮೀ. ಉದ್ದದ ದ್ವಿತೀಯ ಹಂತದ ರಾಜಕಾಲುವೆಯನ್ನು 306 ಕಡೆ ದುರಸ್ತಿ ಮಾಡಬೇಕಿದೆ. ಇವುಗಳಲ್ಲಿ ಒಟ್ಟು 51.76 ಕಿ.ಮೀ. ಉದ್ದದ ರಾಜಕಾಲುವೆಗಳನ್ನು ದುರಸ್ತಿಪಡಿಸುವ 123 ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು. ಈ ತುರ್ತು ಕಾಮಗಾರಿಗಳನ್ನು ಸರ್ಕಾರ ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಬೇಕು.

ದಿನದ ಟ್ವೀಟ್

ಸ್ವಾಗತಾರ್ಹ ನಿರ್ಧಾರ



ಜಿಎಸ್‌ಟಿಗೆ ಸಂಬಂಧಿಸಿದಂತೆ ಶಾಸನ ರೂಪಿಸಲು ಕೇಂದ್ರ ಮತ್ತು ರಾಜ್ಯಗಳು ಸಮಾನ ಅಧಿಕಾರ ಹೊಂದಿವೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಸಹಕಾರ ಒಕ್ಕೂಟ ವ್ಯವಸ್ಥೆಯ ಪ್ರಾಮುಖ್ಯವನ್ನು ಪ್ರತಿಪಾದಿಸುವ ಇದು ಒಂದು ಸ್ವಾಗತಾರ್ಹ ನಿರ್ಧಾರ. ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಸಮಾನ ನೆಲೆಯಲ್ಲಿ ಕೆಲಸ ಮಾಡಿದಾಗ ಮಾತ್ರ ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ.

ಡಾ. ಶಮಾ ಮೊಹಮ್ಮದ್, ದಂತವೈದ್ಯೆ, ಕಾಂಗ್ರೆಸ್ ರಾಷ್ಟ್ರೀಯ ವಕ್ತಾರೆ

ಕಿಡಿನುಡಿ



ರಾಜಕೀಯ ಪಕ್ಷಗಳು ಪ್ರಶಾಂತ್ ಕಿಶೋರ್ ಅವರ ಹಿಂದೆ ಬಿದ್ದು, ತಮ್ಮೊಂದಿಗೆ ಸೇರುವಂತೆ ಅವರ ಮನವೊಲಿಸುತ್ತಿರುವುದು ಮೂರ್ಖತನದ ನಡೆ. ಬದಲಾಗಿ, ನಿಮ್ಮ ಕಾರ್ಯಕರ್ತರ ಪಡೆಯಲ್ಲಿ ವಿಶ್ವಾಸವಿಡಿ, ಜನ ಏಕೆ ತಿರಸ್ಕರಿಸುತ್ತಿದ್ದಾರೆ ಎಂಬುದನ್ನು ವಿಶ್ಲೇಷಿಸಿ, ಸಮಸ್ಯೆಗಳಿಗೆ ಬೆನ್ನು ತೋರಿಸದೆ, ಅವನ್ನು ಒಪ್ಪಿಕೊಳ್ಳಿ ಮತ್ತು ಪರಿಹರಿಸಲು ಮುಂದಾಗಿ. ಪ್ರಶಾಂತ್ ಕಿಶೋರ್ ಅವರು ಕ್ಷಣಾರ್ಧದಲ್ಲಿ ಎಲ್ಲವನ್ನೂ ಬದಲಿಸಿಬಿಡುವ ಜಾದೂಗಾರ ಅಲ್ಲ. ಮತ ಹಾಕುವವರು ನಾವು ಎಂಬುದು ನಿಮಗೆ ನೆನಪಿರಲಿ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ
ಬುಧವಾರ, 21-5-1997

- **ವಿದೇಶಿ ಹಣ: ತನಿಖೆ ಬಳಿಕ ಗೌಡರ ನೇತೃತ್ವದ ಸರ್ಕಾರಕ್ಕೆ ಬೆಂಬಲ ವಾಪಸ್ ಪಡೆದ ಕಾಂಗ್ರೆಸ್**

ನವದೆಹಲಿ, ಮೇ 20 (ಪಿಟಿಐ)– 'ವಿದೇಶಿ ಕಂಪನಿಗಳಿಂದ ಕಾಂಗ್ರೆಸ್ ಪಕ್ಷವು 3.75 ಕೋಟಿ ರೂಪಾಯಿ ಹಣ ಪಡೆದದ್ದಕ್ಕಾಗಿ ಪಕ್ಷದ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರ ಗೃಹ ಸಚಿವ ಇಂದ್ರಜಿತ್ ಗುಪ್ತಾ ಅವರು ಮಾರ್ಚ್ 27ರಂದು ಅನುಮತಿ ನೀಡಿದರು. ಇದಾದ ಮೂರು ದಿನಗಳ ಬಳಿಕ ಕಾಂಗ್ರೆಸ್ ಪಕ್ಷವು ದೇವೇಗೌಡರ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿತು' ಎಂದು ದೆಹಲಿಯ ಹೈಕೋರ್ಟಿಗೆ ಇಂದು ಕೇಂದ್ರ ಸರ್ಕಾರ ತಿಳಿಸಿತು.

ಸರ್ಕಾರದ ಪರವಾಗಿ ಇಂದು ನ್ಯಾಯಾಲಯದಲ್ಲಿ ಹಾಜರಾದ ಅಡಿಷನಲ್ ಸಾಲಿಸಿಟರ್ ಜನರಲ್ ಡಾ. ಅಭಿಷೇಕ್ ಮನು ಸಿಂಘ್ವಿ ಈ ವಿಷಯವನ್ನು ತಿಳಿಸಿದರು. 'ಗೃಹ ಸಚಿವರ ಅನುಮತಿ ಬಳಿಕ ಮಾರ್ಚ್ 29ರಂದು ಈ ವಿದೇಶಿ ದೇಣಿಗೆಯ ಬಗ್ಗೆ ಫೆರಾ ಅಧಿಕಾರಿಗಳು ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸಿದ್ದರು. 30ರಂದು ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳಲಾಯಿತು' ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ
ಭಾನುವಾರ, 21-5-1972

- **ಈ ತಿಂಗಳಲ್ಲಿ ರಾಜ್ಯದ ಮುಖ್ಯ ಸಮಸ್ಯೆಗಳಿಗೆ ಕೇಂದ್ರದ ಪರಿಹಾರ**

ಬೆಂಗಳೂರು, ಮೇ 20– 70 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್ ಮರುಪಾವತಿ, ಅದರ ಸುಮಾರು ಅರ್ಧದಷ್ಟಿರುವ ಬಜೆಟ್ ಕೊರತೆಯಂತಹ ರಾಜ್ಯದ ಕೆಲವು ಮುಖ್ಯ ಆರ್ಥಿಕ ಸಮಸ್ಯೆಗಳಿಗೆ ಈ ತಿಂಗಳಲ್ಲಿ ಕೇಂದ್ರದಿಂದ ಪರಿಹಾರ ದೊರೆಯಲಿದೆ.

ಈ ದೊಡ್ಡ ಸುದ್ದಿಯನ್ನು ಇಂದು ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಿದ ರಾಜ್ಯ ಅರ್ಥ ಮಂತ್ರಿ ಶ್ರೀ ಎಂ.ವೈ.ಘೋರ್ಪಡೆ ಅವರು ಸಮಸ್ಯೆ ಪರಿಹಾರ ಮತ್ತು ನೆರವಿನ ಒಪ್ಪಂದಗಳನ್ನು ಕೇಂದ್ರದೊಡನೆ ಮಾಡಿಕೊಳ್ಳುವ ನಿರೀಕ್ಷೆಯಲ್ಲಿದ್ದಾರೆ. ಕಳೆದ ಕೆಲವು ವರ್ಷಗಳಿಂದ ರಾಜ್ಯದ ಅಧಿಕಾರ ವ್ಯವಸ್ಥೆಯನ್ನು ಪೀಡಿಸುತ್ತಿರುವ ಹಲವು ವ್ಯಾಧಿಗಳ ಬಗ್ಗೆ ಕೇಂದ್ರ ಅರ್ಥ ಮಂತ್ರಿ ಮತ್ತು ಯೋಜನಾ ಮಂತ್ರಿಗಳೊಡನೆ ಅವರು ಚರ್ಚೆ ನಡೆಸಿದ್ದಾರೆ.

'ಕುಟುಂಬ'ದ ನಿಯಂತ್ರಣದಲ್ಲಿದ್ದಾಗ ವಸ್ತುಸಂಗ್ರಹಾಲಯದ ನಿರ್ವಹಣೆ ಕಳಪೆಯಾಗಿತ್ತು

ಕಲ್ಪನಾ ದಾರಿದ್ರ್ಯದಿಂದ ಮುಕ್ತಿ



ಸೂರ್ಯ–ನಮಸ್ಕಾರ

ಎ.ಸೂರ್ಯ ಪ್ರಕಾಶ್

ತೀನ್ ಮೂರ್ತಿ ಸಂಕೀರ್ಣದಲ್ಲಿ ಇರುವ, ದೇಶದ ಅತ್ಯಂತ ಆಧುನಿಕ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿರುವ ಪ್ರಧಾನಮಂತ್ರಿ ಸಂಗ್ರಹಾಲಯವು (ಪಿಎಂಎಸ್) ಈಗ ಸಾರ್ವಜನಿಕರಿಗೆ ಮುಕ್ತವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್‌ನಲ್ಲಿ ಉದ್ಘಾಟಿಸಿರುವ ಈ ವಸ್ತುಸಂಗ್ರಹಾಲಯವು ಹಿಂದಿನ ಎಲ್ಲ ಪ್ರಧಾನಿಗಳು ನೀಡಿರುವ ನಾಯಕತ್ವಕ್ಕೆ, ರಾಷ್ಟ್ರ ನಿರ್ಮಾಣಕ್ಕೆ ಅವರು ಕೊಟ್ಟ ಕೊಡುಗೆಗೆ ಗೌರವ ಸಮರ್ಪಣೆಯಂತೆ ಇದೆ.

ವಸ್ತುಸಂಗ್ರಹಾಲಯದ ಚಿಂತನೆ ಹಾಗೂ ಅಲ್ಲಿರುವ ವಸ್ತುಗಳನ್ನು ಗಮನಿಸಿದರೆ, ಇದು ಹಿಂದಿನ ಆಡಳಿತ ವ್ಯವಸ್ಥೆಗಳು ಶಾಶ್ವತಗೊಳಿಸಿದ್ದ 'ಹೊರಹಾಕುವಿಕೆ'ಯನ್ನು ಒಂದೇ ಏಟಿಗೆ ಕೊನೆಗೊಳಿಸಿದೆ. ಎಲ್ಲರನ್ನೂ ಒಳಗೊಳ್ಳುವ ಪ್ರಜಾತಾಂತ್ರಿಕ ಮೌಲ್ಯಕ್ಕೆ ಇಂಬು ಕೊಟ್ಟಿದೆ. ಆದರೆ, ಇದನ್ನು ಪ್ರಶಂಸಿಸುವ ಬದಲು ಕೆಲವರು ದೂರು ಹೇಳಲು ಆರಂಭಿಸಿದ್ದಾರೆ. ಪ್ರಧಾನಿಯಾಗಿದ್ದ ಎಲ್ಲರಿಗೂ ಇಲ್ಲಿ ಗೌರವ ಸಲ್ಲಿಸಲಾಗಿದೆ ಎಂಬ ಕಾರಣಕ್ಕೆ ಅವರು ಅಸಂತುಷ್ಟರಾಗಿದ್ದಾರೆ. ಪ್ರಜಾಪ್ರಭುತ್ವದ ಮೂಲ ತತ್ವಗಳ ಜೊತೆ ಹೊಂದಾಣಿಕೆಯಿಂದ ಇರಲು ಇಂತಹ ವ್ಯಕ್ತಿಗಳಿಗೆ ಆಗುತ್ತಿಲ್ಲ ಎಂದೇ ಹೇಳಬೇಕಾಗುತ್ತದೆ.

ಇಂತಹ ವಸ್ತುಸಂಗ್ರಹಾಲಯ ಆರಂಭಿಸುವ ಆಲೋಚನೆ ಕೆಲವು ವರ್ಷಗಳ ಹಿಂದೆ ಬಂದಾಗ, ಭೂತಕಾಲಕ್ಕೇ ಜೋತುಬಿದ್ದವರು, ಭಾರತದ ಸ್ವಾತಂತ್ರ್ಯ, ಇಲ್ಲಿನ ಪ್ರಜಾತಂತ್ರ ಹಾಗೂ ಅಭಿವೃದ್ಧಿಗೆ ಒಂದು ಕುಟುಂಬ ಮಾತ್ರ ಕಾರಣ ಎಂಬ ಸಂಕಥನ ಅಪ್ಪಿಕೊಂಡವರು ಗಲಾಟೆ ಎಬ್ಬಿಸಿದರು. ಅವರು ಇಡೀ ಯೋಜನೆ ಸ್ಥಗಿತಗೊಳಿಸಲು ಯತ್ನಿಸಿದರು. ವಸ್ತುಸಂಗ್ರಹಾಲಯವನ್ನು ಕಟ್ಟುತ್ತಿರುವುದು ಜವಾಹರಲಾಲ್ ನೆಹರೂ ಅವರ ಕೊಡುಗೆಯನ್ನು ಮರೆಮಾಚಲು ಎಂದು ಇವರು ವಾದಿಸಿದರು. ಆದರೆ, ಈ ವಾದ ಎಷ್ಟು ತಪ್ಪು ಎಂಬುದು ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದರೆ ಗೊತ್ತಾಗುತ್ತದೆ.

'ಕುಟುಂಬ'ದ ನಿಯಂತ್ರಣದಲ್ಲಿದ್ದಾಗ ನೆಹರೂ ವಸ್ತುಸಂಗ್ರಹಾಲಯವನ್ನು ಬಹಳ ಕೆಟ್ಟದ್ದಾಗಿ ನೋಡಿಕೊಳ್ಳಲಾಗುತ್ತಿತ್ತು ಎಂಬುದು ಸತ್ಯ. ನೆಹರೂ ಅವರ ಕೊಡುಗೆಗಳನ್ನು ಆಸಕ್ತಿಕರವಾಗಿ ವಿವರಿಸುವ ವಿಚಾರದಲ್ಲಿ ಬದ್ಧತೆ ಇದ್ದಿರಲಿಲ್ಲ. ಇಂದು ವಸ್ತುಸಂಗ್ರಹಾಲಯದಲ್ಲಿನ ನೆಹರೂ ವಿಭಾಗವು ಹೆಚ್ಚು ಮಾಹಿತಿಪೂರ್ಣವಾಗಿದೆ. ದೇಶದ ಮೊದಲ ಪ್ರಧಾನಿಯು 'ಆಧುನಿಕ ಭಾರತದ ದೇವಸ್ಥಾನಗಳಾದ' ಭಾರಿ ಅಣೆಕಟ್ಟುಗಳು, ಜಲವಿದ್ಯುತ್ ಯೋಜನೆಗಳು, ಉಕ್ಕಿನ ಕಾರ್ಖಾನೆಗಳು, ತಂತ್ರಜ್ಞಾನ ಸಂಸ್ಥೆಗಳು ಮತ್ತು ಯೋಜನಾ ಆಯೋಗದ ಮೂಲಕ ನೀಡಿದ ಕೊಡುಗೆಯ ಬಗ್ಗೆ ಮೌಲಿಕ ಒಳನೋಟಗಳನ್ನು ನೀಡುತ್ತದೆ.

ನೆಹರೂ ಅವರಿಗೆ ಸಲ್ಲಬೇಕಾಗಿದ್ದ ಗೌರವ ಸಂದಿದೆ ಎಂದು ನಾನು ಹೇಳುತ್ತಿದ್ದೇನೆ. 'ಕುಟುಂಬ'ವು ನೆಹರೂ ವಸ್ತುಸಂಗ್ರಹಾಲಯವನ್ನು ತನ್ನ ಎಸ್ಟೇಟ್ ಎಂಬಂತೆ ಭಾವಿಸಿತ್ತು. ಅದನ್ನು ಚೆನ್ನಾಗಿ ನಿರ್ವಹಿಸುತ್ತಿರಲಿಲ್ಲ. ಈಗ ವಸ್ತುಸಂಗ್ರಹಾಲಯದ ನೆಹರೂ ವಿಭಾಗದಲ್ಲಿ ಆಗಿರುವ ಬದಲಾವಣೆಯು, 'ಕುಟುಂಬ'ವು ದೇಶವನ್ನು ಹೇಗೆ ಆಳಿತ್ತು ಮತ್ತು ಹೇಗೆ ಆಳಬೇಕಿತ್ತು ಎಂಬುದರ ಚಿತ್ರಣ ನೀಡುವಂತಿದೆ.

ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯದಿಂದ (ಎನ್‌ಎಂಎಂಎಲ್) ಹೊರಹಾಕಿಸಿಕೊಂಡವರು ಬಹಳ ತೊಂದರೆಗೆ ಸಿಲುಕಿದ್ದಾರೆ. ಏಕೆಂದರೆ ಅವರು ಎನ್‌ಎಂಎಂಎಲ್ ಅನ್ನು ತಮ್ಮ ಅಡ್ಡಾ ಆಗಿಸಿಕೊಂಡಿದ್ದರು. 'ಕುಟುಂಬ'ಕ್ಕೆ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯೊಬ್ಬರು ಎನ್‌ಎಂಎಂಎಲ್‌ನಲ್ಲಿ ಸಂಶೋಧನೆಗಳು 2014ರ ನಂತರದಲ್ಲಿ ಕಡಿಮೆಯಾಗಿವೆ, ತೀನ್ ಮೂರ್ತಿ ಸಂಕೀರ್ಣದಲ್ಲಿ ಕುರೂಪಿ ಕಟ್ಟಡವೊಂದು ತಲೆ ಎತ್ತುತ್ತಿದೆ ಎಂದು ಹೇಳಿದ್ದರು.


ಈಗಿನ ಸಂಗ್ರಹಾಲಯ ಕಟ್ಟಡವು ದೆಹಲಿಯ ಅತ್ಯಂತ ಆಕರ್ಷಕ ಕಟ್ಟಡವಾಗಿ ಗುರುತು ಪಡೆದುಕೊಳ್ಳುವುದು ಖಚಿತ. ಇಲ್ಲಿ ಭವ್ಯವಾದ ವಾಸ್ತುಶಿಲ್ಪ ಯೋಜನೆಯನ್ನು ಬಹಳ ಚೆನ್ನಾಗಿ ಕಾರ್ಯರೂಪಕ್ಕೆ ತರಲಾಗಿದೆ. 'ಕುಟುಂಬ'ದ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗೆ ತುಸುವಾದರೂ ಲಜ್ಜೆ ಇದ್ದಲ್ಲಿ ಅವರು ಅಂತಹ ಮಾತು ಆಡಿದ್ದಕ್ಕೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು.

ವಸ್ತುಸಂಗ್ರಹಾಲಯದ ವಿಚಾರವಾಗಿ ಕೆಲವು ಸಂಗತಿ ಗಳನ್ನು ನೇರವಾಗಿ ಹೇಳಬೇಕು. ದೇಶದ ಎಲ್ಲ ಪ್ರಧಾನ ಮಂತ್ರಿಗಳ ಕೊಡುಗೆಗಳನ್ನು ಹೇಳುವ ಇಂಥದ್ದೊಂದು ವಸ್ತುಸಂಗ್ರಹಾಲಯದ ಅಗತ್ಯ ಇದೆ ಎಂದು ಮೊದಲು ಹೇಳಿದ್ದು ಪ್ರಧಾನಿ ನರೇಂದ್ರ ಮೋದಿ. ಎನ್‌ಎಂಎಂಎಲ್‌ನ ಅಧ್ಯಕ್ಷರಾಗಿ ಪ್ರಧಾನಿ ಅವರು ಕಾರ್ಯಕಾರಿ ಮಂಡಳಿಯ ಸದಸ್ಯರ ಜೊತೆ ಒಂದೆರಡು ಬಾರಿ ಸಮಾಲೋಚನೆ ನಡೆಸಿದ್ದರು. ವಸ್ತುಸಂಗ್ರಹಾಲಯದಲ್ಲಿ ಏನಿರಬೇಕು ಎಂಬ ಬಗ್ಗೆ ತಮ್ಮ ಸಲಹೆಗಳನ್ನು ನೀಡಿದ್ದರು. ಈ ಸಮಾಲೋಚನೆಗಳಲ್ಲಿ ಮೋದಿ ಅವರು ಎರಡು ಸಂಗತಿಗಳನ್ನು ಹೇಳಿದ್ದರು. ಪಿಎಂಎಸ್ ನಿರ್ಮಾಣ ಮಾಡುವಾಗ ಹಿಂದಿನ ಕಲ್ಪನಾ ದಾರಿದ್ರ್ಯವನ್ನು ತೊಡೆದುಹಾಕಬೇಕು, ಹೊಸ ಆಲೋಚನೆಗಳನ್ನು ಜಾರಿಗೆ ತರಲು ಮುಕ್ತವಾಗಿರಬೇಕು ಎಂದು ಹೇಳಿದ್ದರು. ವಸ್ತುಸಂಗ್ರಹಾಲಯದ ಉದ್ಘಾಟನೆಯು ಒಂದು ಅರ್ಥದಲ್ಲಿ ಕಲ್ಪನಾ ದಾರಿದ್ರ್ಯದ ಕಾಲ ಮುಗಿದಿದೆ ಎಂಬುದನ್ನು ತೋರಿಸುತ್ತಿದೆ.

ಮೋದಿ ಅವರ ಮಾತುಗಳಿಗೆ ಕಿವಿಗೊಟ್ಟಾಗ ಹಾಗೂ ಅವರು ಶುರುಮಾಡಿದ ಕೆಲವು ಯೋಜನೆಗಳ ಕಡೆ ನೋಟ ಹರಿಸಿದಾಗ, 2014ಕ್ಕೂ ಹಿಂದಿನ ಆಡಳಿತ ವ್ಯವಸ್ಥೆ ಹಾಗೂ ಅದರ ನಂತರದ ಆಡಳಿತ ವ್ಯವಸ್ಥೆಗಳ ನಡುವಿನ ವ್ಯತ್ಯಾಸವು ಕಲ್ಪನಾ ದಾರಿದ್ರ್ಯ ಹಾಗೂ ಕಲ್ಪನಾ ಶ್ರೀಮಂತಿಕೆ ಎಂಬುದು ಅರಿವಾಗುತ್ತದೆ. ಮೋದಿ ಅವರು ಹೇಳಿದ್ದ ಎರಡನೆಯ ವಿಚಾರವು 'ಸಮತೋಲನ'ಕ್ಕೆ ಸಂಬಂಧಿಸಿದ್ದು. ಪ್ರತೀ ಪ್ರಧಾನಿಯ ಅವಧಿಯಲ್ಲಿ ಆಗಿರುವ ಘಟನೆಗಳನ್ನು ಪರಿಶೀಲಿಸುವಾಗಲೂ ಸಮತೋಲನ ಇರುವಂತೆ ನೋಡಿಕೊಳ್ಳಬೇಕಿರುವುದು ಬಹಳ ಮುಖ್ಯ ಎಂದು ಮೋದಿ ಅವರು ಹೇಳಿದ್ದರು.

1947ರಿಂದ ಭಾರತ ಬೆಳೆದ ಬಗೆಯನ್ನು ಈ ವಸ್ತುಸಂಗ್ರಹಾಲಯವು ತೋರಿಸುತ್ತಿದೆ. ಈಗ, ಮೋದಿ ಅವರನ್ನು ಹೊರತುಪಡಿಸಿ ಇತರ ಎಲ್ಲ ಪ್ರಧಾನಿಗಳಿಗೆ ಸೇರಿದ ಗ್ಯಾಲರಿಗಳು ಸಾರ್ವಜನಿಕರಿಗೆ ಮುಕ್ತವಾಗಿವೆ. ಹಿಂದೆ ಪ್ರಧಾನಿ ಆಗಿದ್ದ ಪ್ರತೀ ವ್ಯಕ್ತಿಯ ಆರಂಭಿಕ ಜೀವನ, ರಾಜಕೀಯ ಜೀವನ, ಅವರು ಕೈಗೊಂಡ ಕ್ರಮಗಳು, ಅವರು ಎದುರಿಸಿದ ಸವಾಲುಗಳು ಏನಿದ್ದವು ಎಂಬುದನ್ನು ಇಲ್ಲಿ ಕಾಣಬಹುದು. ಎಚ್.ಡಿ. ದೇವೇಗೌಡ, ಇಂದ್ರಕುಮಾರ್ ಗುಜ್ರಾಲ್, ಚಂದ್ರಶೇಖರ್, ಚರಣ್ ಸಿಂಗ್ ಅವರಂತೆ ಕಿರು ಅವಧಿಗೆ ಪ್ರಧಾನಿಯಾಗಿದ್ದವರ ಕುರಿತ ವಿವರಗಳೂ ಇಲ್ಲಿವೆ. ಭಾರತದ ಆರ್ಥಿಕ ಬೆಳವಣಿಗೆಯನ್ನು ಎತ್ತರಕ್ಕೆ ಒಯ್ದ ಪಿ.ವಿ. ನರಸಿಂಹ ರಾವ್, 1965ರಲ್ಲಿ ಪಾಕಿಸ್ತಾನದ ಜೊತೆಗಿನ ಯುದ್ಧದ ಸಂದರ್ಭದಲ್ಲಿ ದೇಶವನ್ನು ಮುನ್ನಡೆಸಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಗೆ ಕೂಡ ಸೂಕ್ತವಾದ ಆದ್ಯತೆ ನೀಡಲಾಗಿದೆ. ಮೊರಾರ್ಜಿ ದೇಸಾಯಿ, ಡಾ. ಮನಮೋಹನ್ ಸಿಂಗ್, ನೆಹರೂ–ಗಾಂಧಿ ಕುಟುಂಬದ ಮೂವರು ಪ್ರಧಾನ ಮಂತ್ರಿಗಳಿಗೆ ಸೂಕ್ತ ಆದ್ಯತೆ ನೀಡಲಾಗಿದೆ. ಎರಡು ಬಾರಿ ಕಿರು ಅವಧಿಗೆ ಪ್ರಧಾನಿಯಾಗಿದ್ದ ಗುಲ್ಜಾರಿಲಾಲ್ ನಂದಾ ಅವರ ಕೊಡುಗೆಯನ್ನೂ ಗುರುತಿಸಲಾಗಿದೆ. ಇವೆಲ್ಲ ರಾಷ್ಟ್ರೀಯ ನಾಯಕತ್ವ ಎಷ್ಟು ವೈವಿಧ್ಯಮಯವಾಗಿತ್ತು ಎಂಬುದನ್ನು, ಪ್ರಧಾನಿಯಾಗಿದ್ದವರ ಜೀವನಶೈಲಿ ಹಾಗೂ ಅವರ ಆಡಳಿತ ಎಷ್ಟು ಭಿನ್ನವಾಗಿತ್ತು ಎಂಬುದನ್ನು ತೋರಿಸುತ್ತವೆ.

ಈ ವಸ್ತುಸಂಗ್ರಹಾಲಯದಲ್ಲಿ ಹಿಂದಿನ ಕಾಲಕ್ಕೆ ಸಂಬಂಧಿಸಿದ್ದು ಎಷ್ಟಿದೆಯೋ ಮುಂದಿನದ್ದೂ ಅಷ್ಟೇ ಇದೆ ಎಂದು ಪ್ರಧಾನಿಯವರು ಉದ್ಘಾಟನೆಯ ಹೊತ್ತಿನಲ್ಲಿ ಹೇಳಿದರು. ಅವರು ವಸ್ತುಸಂಗ್ರಹಾಲಯದ 'ಅನುಭೂತಿ' ವಿಭಾಗದ ಬಗ್ಗೆ ಹಾಗೆ ಹೇಳಿದ್ದರು. ಅಲ್ಲಿ ಹಾಲೊಗ್ರಾಮ್‌ಗಳು, ವರ್ಚುವಲ್ ರಿಯಾಲಿಟಿಯ ಅನುಭವ ಸಿಗುತ್ತದೆ. ಹೀಗಾಗಿ, ಮುಂದಿನ ಬಾರಿ ದೆಹಲಿಗೆ ಬಂದಾಗ ವಸ್ತುಸಂಗ್ರಹಾಲಯ ಭೇಟಿಯು ನಿಮ್ಮ ಆದ್ಯತೆಯ ಪಟ್ಟಿಯಲ್ಲಿ ಇರಲಿ.



ಚುರುಮುರಿ



30 ವರ್ಷಗಳ ಮುಂದೆ!

• ನಾರಾಯಣ ರಾಯಚೂರ್

'ರೀ, ಬರ್ತೀರಾ ಆ ಪೇಪರ್ ಬಿಟ್ಟು? ಅದೇನು ಅಂಥಾ ಸುದ್ದಿ ಓದ್ತಾ ಇರೋದು, ನೋಡೇಬಿಡ್ತೀನಿ... ಏನು? ಈ '25 ವರ್ಷಗಳ ಹಿಂದೆ' ಕಾಲಮ್ಮೂ ಬಿಡಲ್ವೇ? ಲೋಕ, 30 ವರ್ಷ ಮುಂದೆ ಹೋಗಿದೆ, ನೀವಿನ್ನೂ...'

'ಹ್ಞಾಂ, ಹೊಳೀತು ಕಣೆ, 30 ವರ್ಷದ ಮುಂದಿನ ಸುದ್ದಿಗಳು ಹ್ಯಾಗಿರಬಹುದು?'

- ಸಾವಿರದ ಗಡಿ ದಾಟಿದ ಪೆಟ್ರೋಲ್: ವಾಹನಗಳೆಲ್ಲ ಶೆಡ್ ಸೇರಿದ್ದು, ಜನ ನಟರಾಜ ಸರ್ವಿಸ್‌ಗೆ (ನಡಿಗೆ) ಮೊರೆ ಹೋಗಿದ್ದಾರೆ. ಸಂದಿನೋವು, ಕೀಲುನೋವು ಮಾಯವಾಗಿ ಈ ನೋವುಗಳ ಔಷಧಿ ಮಾರಾಟಗಾರರು, ಡಾಕ್ಟ್ರು, ಜಾಹೀರಾತುದಾರರು ಸಂಕಷ್ಟದಲ್ಲಿದ್ದಾರೆ.
- ಕೊರೊನಾ 25ನೇ ಅಲೆ ಎದುರಿಸಲು ಸರ್ಕಾರ ಸಜ್ಜು: 'ರಾಜ್ಯದಾದ್ಯಂತ 'ಕೊರೊನಾ ಬೆಳ್ಳಿಹಬ್ಬ' ಆಚರಣೆ ಮಾಡಲು ಕರೆ ನೀಡಲಾಗಿದ್ದು, ಎಲ್ಲರಿಗೂ ಉಚಿತ ಬೆಳ್ಳಿ ಮಾಸ್ಕ್ ನೀಡಲು ನಿರ್ಧರಿಸಲಾಗಿದೆ.
- ರಸ್ತೆಗುಂಡಿಗಳೋ- ರಸ್ತೆ ಕೆರೆಗಳೋ: ಮುಚ್ಚದೇ ಬಿಟ್ಟಿರುವ ರಸ್ತೆಗುಂಡಿಗಳ ಪರಿಣಾಮ, ಅವು ಕೆರೆಗಳಂತಾಗಿ ಬೆಂಗಳೂರು 'ಕೆರೆಗಳ ನಗರ' ಎಂಬ ತನ್ನ ಹಳೆಯ ಹೆಸರನ್ನು ಮರಳಿ ಪಡೆಯಲು ಸಾಧ್ಯವಾಗಿದೆ.
- ಹಾಲಿನ ಬೆಲೆ ₹ 200: ಹಾಲಿನ ಬೆಲೆ ಲೀಟರ್‌ಗೆ ₹ 200 ಆಗಿರುವುದರಿಂದ 'ಮಿಲ್ಕ್‌ಲೆಸ್ ಕಾಫಿ, ಟೀ' ಗೆ ಬೇಡಿಕೆ ಹೆಚ್ಚುತ್ತಿದೆ.
- ಸ್ವಪ್ರೇರಣೆಯಿಂದ ವೃದ್ಧಾಶ್ರಮ ಸೇರಲು ನೂಕುನುಗ್ಗಲು: ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳ ಕಾಟ ತಾಳಲಾರದೆ ವೃದ್ಧಾಶ್ರಮಗಳಿಗೆ ಬೇಡಿಕೆ ಹೆಚ್ಚಿರುವುದರಿಂದ, ತಾಲ್ಲೂಕಿಗೊಂದು ವೃದ್ಧಾಶ್ರಮ ತೆರೆಯಲು ಸರ್ಕಾರ ನಿರ್ಧರಿಸಿದೆ ಎಂದು ವೃದ್ಧರ ಸಬಲೀಕರಣ ಖಾತೆ ಸಚಿವರು ತಿಳಿಸಿದ್ದಾರೆ.

'ಭೇಷ್! ನನ್ನದೂ ಒಂದು ಸೇರಿಸಿ'.

- 'ಗ್ಯಾಸ್ ಸಿಲಿಂಡರ್ ₹ 10,000 ದಾಟಿ ಸುಲಭವಾಗಿ ಗಗನಕ್ಕೆ ಏರ್ತಿರೋದ್ರಿಂದ ಇನ್ನು ಮುಂದೆ ಕ್ಷಿಪಣಿಗಳ ಬದಲು ಸಿಲಿಂಡರ್‌ಗಳನ್ನೇ ಉಡಾವಣೆಗೆ ಬಳಸಲು ತಜ್ಞರು ನಿರ್ಧರಿಸಿದ್ದಾರೆ!

'ತಲೆ ಅಂದ್ರೆ ತಲೆ ನಿನ್ನ ತಲೇನೇ ಕಣೆ!'

'ಸುಮ್ಮನೆ ಇಟ್ಟಿದಾರಾ ನಮ್ಮಪ್ಪ- ಅಮ್ಮ ನನ್ಹೆಸ್ರು ಶಕುಂತಲೆ ಅಂತ'!

ಸಂಗತ

ಅರಳುವ ಕುಸುಮಕ್ಕೇಕೆ ಈ ಪರಿ ಕ್ರೋಧ?

ಬೆಂಗಳೂರಿನ ಶಾಲೆಯೊಂದರ ಬಾಲಕಿಯರು ಸಾರ್ವಜನಿಕವಾಗಿ ಹೊಡೆದಾಡಿಕೊಂಡದ್ದನ್ನು ನೋಡಿದರೆ, ನಮ್ಮ ಸಮಾಜ ಮಕ್ಕಳಿಗೆ ಎಂತಹ ಮಾರ್ಗದರ್ಶನ ನೀಡುತ್ತಿದೆ ಎಂಬುದು ಅರಿವಾಗುತ್ತದೆ

• ನಾ. ದಿವಾಕರ

ಬೆಂಗಳೂರಿನ ಬಹುಪ್ರತಿಷ್ಠಿತ ಬಿಷಪ್ ಕಾಟನ್ ಹೆಣ್ಣು ಮಕ್ಕಳ ಶಾಲೆಯ ಕೆಲವು ವಿದ್ಯಾರ್ಥಿನಿಯರು ಶಾಲೆಯ ಹೊರಗೆ ಹೊಡೆದಾಡಿಕೊಂಡಿರುವ ದೃಶ್ಯ ಸಾಮಾಜಿಕ ಮಾಧ್ಯಮಗಳ ಮೂಲಕ ರಾಜ್ಯವ್ಯಾಪಿ ಸುದ್ದಿಯಾಗಿದೆ. ಸಮವಸ್ತ್ರ ಧರಿಸದಿರುವ ಕೆಲವು ವಿದ್ಯಾರ್ಥಿನಿಯರೂ ಈ ಹೊಡೆದಾಟದಲ್ಲಿ ಸೇರಿದ್ದಾರೆ. ಪರಸ್ಪರ ತಳ್ಳಾಡಿಕೊಂಡು, ಜುಟ್ಟು ಹಿಡಿದು ಕೆಳಗೆ ಬೀಳಿಸಿ, ರಸ್ತೆಗೆ ಬೀಳಿಸಿ ಹೊಡೆಯುವ ದೃಶ್ಯಗಳನ್ನು ನೋಡಿದರೆ, ನಮ್ಮ ಸಮಾಜ ಎತ್ತ ಸಾಗುತ್ತಿದೆ, ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎಂಬ ಆತಂಕ ಮೂಡುವುದು ಸಹಜ.

ಬಿಷಪ್ ಕಾಟನ್, ರಾಜಧಾನಿಯ ಪ್ರಮುಖ ಶಾಲೆಗಳಲ್ಲಿ ಒಂದು. ಅಲ್ಲಿ ಶ್ರೀಮಂತ, ಮಧ್ಯಮ ವರ್ಗದ ಮಕ್ಕಳೇ ಹೆಚ್ಚಾಗಿ ಓದುತ್ತಾರೆ, ಅವರೂ ಹೀಗೆ ಮಾಡಲು ಸಾಧ್ಯವೇ ಎಂಬ ಅಪ್ರಬುದ್ಧ ಪ್ರಶ್ನೆಗೆ ಅವಕಾಶ ಕೊಡದೆ ಅಥವಾ ಹೆಣ್ಣು ಮಕ್ಕಳೂ ಹೀಗೆ ಮಾಡುತ್ತಾರೆಯೇ ಎಂಬ ಸಾಂಪ್ರದಾಯಿಕ ಪ್ರಶ್ನೆಗೆ ಗಮನಕೊಡದೆ, ಏಕೆ ಹೀಗಾಗುತ್ತಿದೆ ಎಂದು ಯೋಚಿಸಿದರೆ, ನಾವು ಸಾಗುತ್ತಿರುವ ದಿಕ್ಕು ದೆಸೆಯನ್ನು ಪರಾಮರ್ಶಿಸಲು ಸಾಧ್ಯ.

ಬಹುಶಃ ಹೈಸ್ಕೂಲು ಮಕ್ಕಳಿರಬಹುದಾದ ಈ ಬಾಲಕಿಯರು ಹೊಡೆದಾಡಿಕೊಳ್ಳುವ ರೀತಿಯನ್ನು ನೋಡಿದರೆ, ನಮ್ಮ ಸಮಾಜ ವಿದ್ಯುನ್ಮಾನ ಮಾಧ್ಯಮಗಳ ಮೂಲಕ, ಅಂತರ್ಜಾಲ ಮತ್ತಿತರ ತಂತ್ರಜ್ಞಾನಗಳ ಮೂಲಕ ಮಕ್ಕಳಿಗೆ ಎಂತಹ ಮಾರ್ಗದರ್ಶನ ನೀಡುತ್ತಿದೆ ಎಂಬುದು ಅರಿವಾಗುತ್ತದೆ.

ಕಾರಣ ಏನೇ ಇರಲಿ, ಹರೆಯದ ಮಕ್ಕಳಲ್ಲಿ ಈ ಪರಿಯ ಕ್ರೋಧ, ಆಕ್ರೋಶ ತಂತಾನೇ ಸಾರ್ವಜನಿಕ ಸ್ವರೂಪ ಪಡೆದುಕೊಳ್ಳುವುದಿಲ್ಲ. ಇದಕ್ಕೆ ನಾವೇ ಸೃಷ್ಟಿಸಿದ ಸಾಮಾಜಿಕ ಪರಿಸರ ಮತ್ತು ಸಾಂಸ್ಕೃತಿಕ ವಾತಾವರಣವೂ ಕಾರಣವಾಗಿರುತ್ತವೆ. ಶಾಲೆಯ ಆವರಣದಲ್ಲಿ 'ಆತ್ಮರಕ್ಷಣೆ'ಯ ನೆಪದಲ್ಲಿ ನಡೆಯುವ ಚಟುವಟಿಕೆಗಳನ್ನು ಸಮರ್ಥಿಸಿಕೊಳ್ಳುವ ಸಚಿವರು, ರಾಜಕೀಯ ನಾಯಕರು ಇತ್ತ ಗಮನಿಸಬೇಕಿದೆ.

ಮತ್ತೊಬ್ಬರನ್ನು ಹೊಡೆಯುವ ಹಕ್ಕು ತನಗಿದೆ ಎನ್ನುವ ಮನೋಭಾವವೇ ಮನುಷ್ಯನನ್ನು ಕ್ರೌರ್ಯದೆಡೆಗೆ, ಅಮಾನುಷತೆಯೆಡೆಗೆ ಸೆಳೆಯುತ್ತದೆ. ದುರಂತ ಎಂದರೆ ಟೀವಿ ಧಾರಾವಾಹಿಗಳು, ಚಲನಚಿತ್ರಗಳು ಇಂತಹ ಮನೋಭಾವವನ್ನು ಸೃಷ್ಟಿಸುವುದೇ ಅಲ್ಲದೆ, ಕೇಡುಗತನದ ವಿವಿಧ ಮಾದರಿಗಳನ್ನೂ ಯುವ ಪೀಳಿಗೆಗೆ ಪರಿಚಯಿಸುತ್ತಿವೆ.

ಸಮಾಜವನ್ನು ಸರಿದಿಕ್ಕಿನಲ್ಲಿ ಕೊಂಡೊಯ್ಯುವ ನೈತಿಕ ಹೊಣೆ ಇರುವ ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ನಾಯಕರು ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಸಾರ್ವಜನಿಕ ವಲಯದಲ್ಲೂ ಹಿಂಸೆಯನ್ನು ಸಾರ್ವತ್ರೀಕರಿಸುತ್ತಿದ್ದಾರೆ. ಮನುಷ್ಯನಲ್ಲಿ ಅಮಾನುಷತೆಯನ್ನು ಹೆಚ್ಚಿಸುವ ಮಾರ್ಗಗಳಿಗೆ ಧರ್ಮರಕ್ಷಣೆ, ಆತ್ಮರಕ್ಷಣೆ ಎಂಬಂಥ ವಿಶೇಷಣಗಳನ್ನು ಪೋಣಿಸಲಾಗುತ್ತಿದೆ.

ನ್ಯಾಯಾಲಯದ ಅಂಗಳದಲ್ಲಿ ವಕೀಲರೇ ಹಲ್ಲೆ ಮಾಡುತ್ತಿದ್ದಾರೆ. ಇತ್ತೀಚೆಗೆ ಮಹಿಳಾ ವಕೀಲರೊಬ್ಬರಿಗೆ ವ್ಯಕ್ತಿಯೊಬ್ಬ ಸಾರ್ವಜನಿಕರ ಎದುರಲ್ಲೇ ಕಾಲಿನಲ್ಲಿ ಒದೆಯುತ್ತಾನೆ. ಸರ್ಕಾರಿ ಅಧಿಕಾರಿಗಳ ಮೇಲೆ, ಪೊಲೀಸರ ಮೇಲೆ ಹಲ್ಲೆಗಳು ನಡೆಯುತ್ತವೆ. ಇವೆಲ್ಲವನ್ನೂ ತಡೆಗಟ್ಟುವ ಜವಾಬ್ದಾರಿ ಇರುವ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ತಮ್ಮ ಹಿತಾಸಕ್ತಿಗೆ ತಕ್ಕಂತೆ ಪ್ರತಿಕ್ರಿಯಿಸುತ್ತಿರುವುದು ದುರಂತ.



ಈ ಮಕ್ಕಳಲ್ಲಿ ಅಷ್ಟೊಂದು ಕ್ರೋಧ, ಆಕ್ರೋಶ ಮೂಡಲು ವೈಯಕ್ತಿಕ, ವ್ಯಕ್ತಿಗತ ಕಾರಣಗಳು ಏನೇ ಇರಲಿ, ಹರೆಯದ ವಯಸ್ಸಿಗೇ ಈ ಮಟ್ಟಿಗೆ ಅಸಹಿಷ್ಣುತೆಯನ್ನು ರೂಢಿಸಿಕೊಳ್ಳಲು ಕಾರಣಗಳೇನು ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಿದೆ.

ವಿದ್ಯಾರ್ಥಿ ದೆಸೆಯಲ್ಲಿ ಮಕ್ಕಳನ್ನು ಅರಳುವ ಕುಸುಮಗಳೆಂದೇ ಪರಿಭಾವಿಸಲಾಗುತ್ತದೆ. ಈ ಕುಸುಮಗಳೇ ಭವಿಷ್ಯದ ಸುಂದರ ಉದ್ಯಾನದಲ್ಲಿ ನಳನಳಿಸುತ್ತಾ ಶಾಂತಿಯ ತೋಟದ ವಾರಸುದಾರರಾಗುತ್ತಾರೆ. ಆದರೆ ನಾವು ಈ ಮಕ್ಕಳ ಮುಂದೆ ಎಂತಹ ಪ್ರಾತ್ಯಕ್ಷಿಕೆ ಇಡುತ್ತಿದ್ದೇವೆ? ಇವರು ನಡೆವ ಹಾದಿಯಲ್ಲಿ ಎಂತಹ ದೀಪ್ತಿಗಳನ್ನು ನಿಲ್ಲಿಸುತ್ತಿದ್ದೇವೆ? ಇವರಿಗೆ ಪಠ್ಯಗಳ ಮುಖೇನ, ಪಠ್ಯೇತರ ಚಟುವಟಿಕೆಗಳ ಮೂಲಕ ಎಂತಹ ಜಗತ್ತನ್ನು ತೋರಿಸಲು ಯತ್ನಿಸುತ್ತಿದ್ದೇವೆ? ಇವರ ಭವಿಷ್ಯಕ್ಕಾಗಿ ಯಾವ ಬಗೆಯ ಮಾದರಿ ನೇತಾರರನ್ನು ಸೃಷ್ಟಿಸುತ್ತಿದ್ದೇವೆ? ಇತಿಹಾಸದಿಂದ ಹೆಕ್ಕಿ ತೆಗೆಯುವ ಯಾವ ಸಂಸ್ಕೃತಿಯನ್ನು ಇವರಿಗೆ ಉಣಬಡಿಸುತ್ತಿದ್ದೇವೆ?

ಇಷ್ಟು ಎಳೆಯ ವಯಸ್ಸಿಗೇ ಹೀಗೆ ವರ್ತಿಸಲು ಏನು ಕಾರಣ ಎನ್ನುವುದಕ್ಕಿಂತಲೂ ಈ ವರ್ತನೆಗೆ ಯಾರು ಕಾರಣ ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಿದೆ. ಮಕ್ಕಳನ್ನು ಹಿತವಲಯದ ಐಷಾರಾಮಿ ಬದುಕಿನಲ್ಲೇ ಬೆಳೆಸುವ ಪೋಷಕರು ಸಹ ತಾವು ತಂತ್ರಜ್ಞಾನದ ಹೆಸರಿನಲ್ಲಿ ಮಕ್ಕಳಿಗೆ ನೀಡುತ್ತಿರುವ ಪರಿಕರಗಳು ಮತ್ತು ಉಪಕರಣಗಳ ಹಿಂದಿನ ಸಾಂಸ್ಕೃತಿಕ ಕ್ರೌರ್ಯ ಹಾಗೂ ವಿಕೃತಿಗಳನ್ನೂ ಪರಿಚಯಿಸಬೇಕಲ್ಲವೇ? ಶಾಲೆಯ ಅಂಗಳವನ್ನು ಇನ್ನೂ ವಿಕಸಿಸಬೇಕಾದ ಕುಸುಮಗಳ ಸುಂದರ ತಾಣವನ್ನಾಗಿ ಕಾಪಾಡಿಕೊಳ್ಳಬೇಕಾದ ನೈತಿಕ ಹೊಣೆ ಈ ಸಮಾಜವನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಪ್ರಜ್ಞಾವಂತ ವ್ಯಕ್ತಿಯದೂ ಆಗಿದೆ.

ಒಂದು ಸಮಾಜವಾಗಿ ನಾವೆಲ್ಲೋ ಎಡವುತ್ತಿದ್ದೇವೆ. ಬಿಷಪ್ ಕಾಟನ್ ಶಾಲೆಯ ಕೆಲ ಮಕ್ಕಳ ಈ ಪ್ರಕರಣ ಒಂದು ಅಪಭ್ರಂಶ ಅಥವಾ ಅಪವಾದ ಅಲ್ಲ, ಅದು ನಾವು ಸಾಗುತ್ತಿರುವ ಹಾದಿಯ ಒಂದು ದೃಶ್ಯರೂಪಕ.

ವಾಚಕರ ವಾಣಿ

ಅಕ್ರಮಕ್ಕೆ ಅವಕಾಶ: ಏನು ಶಿಕ್ಷೆ?

'ರಾಜಕಾಲುವೆಯ ಮೇಲೆ ಮನೆಗಳನ್ನು ಕಟ್ಟಿದ್ದಾರೆ, ಅವನ್ನು ತೆರವುಗೊಳಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಿದ್ದಾರೆ. ಅದೆಲ್ಲ ಸರಿ, ಒಂದು ಮನೆಯನ್ನು ವಾರಗಳಲ್ಲಿ ಕಟ್ಟುವುದು ಸಾಧ್ಯವಿಲ್ಲ. ಮಹಡಿ ಮನೆಗಳನ್ನು ಕಟ್ಟಲಿಕ್ಕಂತೂ ವರ್ಷ ಬೇಕು. ಹೀಗಿರುವಾಗ, ಅಕ್ರಮ ನಿರ್ಮಾಣ ಕಾರ್ಯ ನಡೆಯದಂತೆ ನೋಡಿಕೊಳ್ಳಲು ಆ ಪ್ರದೇಶಕ್ಕೊಬ್ಬ ಸರ್ಕಾರಿ ಅಧಿಕಾರಿ ಇರುತ್ತಾನಲ್ಲ, ಅವ ಏನು ಮಾಡುತ್ತಿದ್ದ? ಕರ್ತವ್ಯಲೋಪ ಎಸಗಿದ ಅಥವಾ ಲಂಚ ಪಡೆದು ಅಕ್ರಮಕ್ಕೆ ಅವಕಾಶ ಮಾಡಿಕೊಟ್ಟ ಆತನಿಗೆ ಏನು ಶಿಕ್ಷೆ? ಅಕ್ರಮಗಳಿಗೆ ಅವಕಾಶ ಮಾಡಿಕೊಡುವವರಿಗೆ ಕಠಿಣ ಶಿಕ್ಷೆ ಕೊಟ್ಟರೆ ಇತರ ಅಧಿಕಾರಿಗಳಿಗೆ ಅದು ಒಂದು ಪಾಠವಾಗಿ, ಮುಂದೆ ಅಕ್ರಮ ನಿರ್ಮಾಣ ಚಟುವಟಿಕೆಗಳೇ ನಿಂತುಹೋಗುವುದಿಲ್ಲವೇ?

ಶ್ರೀನಿವಾಸ ಕಾರ್ಕಳ, ಮಂಗಳೂರು

ಜಾತಿವಾದದ ವಿಕೃತ ಮನಸ್ಸು

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳೆದ ಬಾರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗಿರುವುದು ಸಂತೋಷದ ವಿಷಯ. ಆದರೆ ಸಾಮಾಜಿಕ ಜಾಲತಾಣದ ಕೆಲ ಪೇಜ್‌ಗಳಲ್ಲಿ ಜಾತಿವಾದದ ವಿಕೃತ ಮನಸ್ಸುಳ್ಳ ಕೆಲವರು 'ನಮ್ಮ ಜಾತಿಯ ವಿದ್ಯಾರ್ಥಿ ರಾಜ್ಯಕ್ಕೆ/ಜಿಲ್ಲೆಗೆ ಟಾಪರ್' ಎಂದು ವಿಜೃಂಭಿಸುವ ಪೋಸ್ಟ್‌ಗಳನ್ನು ಹಾಕುತ್ತಿರುವುದನ್ನು ನೋಡಿ ಬೇಸರವಾಯಿತು. ಆ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸಿ ಹೆಮ್ಮೆಪಡಬೇಕು. ಅದನ್ನು ಬಿಟ್ಟು ಅವರನ್ನು ಒಂದು ಜಾತಿಗೆ ಸೀಮಿತ ಮಾಡುವುದು ತರವಲ್ಲ.

ಯಾವುದೇ ವಿದ್ಯಾರ್ಥಿ ಕಷ್ಟಪಟ್ಟು ಓದಿ ಮುಂದೆ ಬರಬೇಕು, ತನ್ನ ತಂದೆ ತಾಯಿಗೆ ಒಳ್ಳೆಯ ಹೆಸರು ತರಬೇಕು ಎಂಬ ಕನಸುಗಳನ್ನು ಇಟ್ಟುಕೊಂಡು ಓದುತ್ತಾನೆಯೇ ವಿನಾ 'ನಾನು ಆ ಜಾತಿಯವನು, ಆ ಜಾತಿಯ ಯಾದಿಯ ಮಕ್ಕಳಲ್ಲಿ ಮೊದಲಿಗನಾಗಬೇಕು' ಎಂದಲ್ಲ. ಮುಗ್ಧ ಮಕ್ಕಳಲ್ಲಿ ಜಾತಿ ಎಂಬ ವಿಷ ಬೀಜವನ್ನು ಬಿತ್ತಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಪ್ರಯತ್ನಗಳು ಬೇಡ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಜಾತಿ ಎಂಬ ಚಕ್ರವ್ಯೂಹದಲ್ಲಿ ಸಿಲುಕಿ ಗಿರಕಿ ಹೊಡೆಯುತ್ತಿರುವುದು ನಿಜಕ್ಕೂ ದುರಂತ.

ಮುರುಗೇಶ ಡಿ., ದಾವಣಗೆರೆ

ಅಲ್ಲೂ ಇಲ್ಲ... ಇಲ್ಲೂ ಇಲ್ಲ

ನಮ್ಮಲ್ಲಿ ಕೆಲವು ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಕರಾವಳಿ ಜಿಲ್ಲೆಗಳನ್ನು ಉಲ್ಲೇಖಿಸುವಾಗ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳು ಮಾತ್ರ ಕಾಣುತ್ತವೆ. ಮಲೆನಾಡು ಶಿವಮೊಗ್ಗ ಜಿಲ್ಲೆಯ ತಾಳಗುಪ್ಪಾದವರೆಗೆ ಮಾತ್ರ ಇದ್ದರೆ, ಬಯಲುಸೀಮೆಯು ಹಾವೇರಿ ಅಥವಾ ಹುಬ್ಬಳ್ಳಿವರೆಗೆ ಮಾತ್ರ ಇರುತ್ತದೆ. 'ಮುಂಬೈ ಕರ್ನಾಟಕ'ವನ್ನು ಇತ್ತೀಚೆಗೆ 'ಕಿತ್ತೂರು ಕರ್ನಾಟಕ' ಎಂದು ಹೆಸರಿಸುವಾಗ ಉತ್ತರ ಕನ್ನಡ ಜಿಲ್ಲೆಯನ್ನು ಪರಿಗಣಿಸಲಿಲ್ಲ ಮತ್ತು ಅಭಿಪ್ರಾಯವನ್ನೂ ಕೇಳಲಿಲ್ಲ. ಬಂದರು ಮತ್ತು ಸಮುದ್ರದ ಬಗೆಗೆ ಬರೆಯುವಾಗ ಕಾರವಾರದ ಕರಾವಳಿ ತೀರ ಕಾಣುವುದಿಲ್ಲ. ನೈರುತ್ಯ ರೈಲ್ವೆ ಬಗೆಗೆ ಬರೆಯವಾಗ ಅದು ಹುಬ್ಬಳ್ಳಿಗೆ ನಿಂತು ಹೋಗುತ್ತದೆ. ಉತ್ತರ ಕರ್ನಾಟಕಕ್ಕೆ ಯಾವುದೇ ಹೊಸ ಯೋಜನೆ ಬಂದರೂ ಅದು ಹುಬ್ಬಳ್ಳಿ- ಬೆಳಗಾವಿ ಗಡಿಯನ್ನು ದಾಟುವುದಿಲ್ಲ. ಉತ್ತರ ಕನ್ನಡದ 'ಅಲ್ಲೂ ಇಲ್ಲ... ಇಲ್ಲೂ ಇಲ್ಲ' ಎನ್ನುವ ಸ್ಥಿತಿ ನೋಡಿ, ಹಳೆಯ ತಲೆಮಾರಿನವರು 'ನಾವು ಕರ್ನಾಟಕ ರಾಜ್ಯದಲ್ಲಿ ಎಲ್ಲಿ ಇದ್ದೇವೆ' ಎಂದು ಕೇಳುವಂತಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ಸಿಧು ಸನ್ನಡತೆ ಪರಿಗಣಿತವಾಗಲಿ

ಹದಿನೈದು, ಇಪ್ಪತ್ತು ವರ್ಷಗಳ ಶಿಕ್ಷೆಯಾಗಿ ಸೆರೆವಾಸ ಅನುಭವಿಸುತ್ತಿರುವ ಕೈದಿಗಳಿಗೆ ಅವರ ಸನ್ನಡತೆಯನ್ನು ಗಮನಿಸಿ ಅವಧಿ ಪೂರೈಸುವುದಕ್ಕೆ ಮುನ್ನವೇ ಬಿಡುಗಡೆ ಮಾಡುವ ಹೃದಯವಂತಿಕೆಗೆ ನಮ್ಮ ಕಾನೂನಿನಲ್ಲಿ ಅವಕಾಶ ಇದೆ. ನವಜೋತ್ ಸಿಂಗ್ ಸಿಧು ಅವರು 30 ವರ್ಷಗಳ ಹಿಂದೆ ಎಸಗಿದ ಒಂದು ಕೃತ್ಯಕ್ಕೆ ನ್ಯಾಯಾಲಯ ಈಗ ಅವರಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿದೆ. ನ್ಯಾಯ ಎಲ್ಲರಿಗೂ ಒಂದೇ ಎನ್ನುವುದಕ್ಕೆ ಇದು ನಿದರ್ಶನ.

ಇಲ್ಲಿ ಒಂದು ಪ್ರಶ್ನೆ- ಈ 30 ವರ್ಷಗಳ ಅವಧಿಯಲ್ಲಿ ಸಿಧು ಅವರಿಂದ ಮತ್ತಾವ ಘಾತುಕ ನಡವಳಿಕೆಯೂ ಕಂಡುಬಂದಿಲ್ಲ. ಅದೂ ಅಲ್ಲದೆ ಅವರು ತಮ್ಮ ಉತ್ತಮ ಆಟದಿಂದ ಭಾರತ ಕ್ರಿಕೆಟ್ ಕ್ಷೇತ್ರದಲ್ಲಿ ಧ್ರುವತಾರೆಯಾಗಿ ಮೆರೆದು ದೇಶದ ಪ್ರತಿಷ್ಠೆಗೆ ಕಾರಣರಾಗಿದ್ದಾರೆ. ಬಿಜೆಪಿಯಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದರು. ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಇವೆಲ್ಲ ಅವರ ಉತ್ತಮ ನಡವಳಿಕೆಗೆ ಮತ್ತು ಅವರ ಸಾರ್ವಜನಿಕ ಸೇವಾಸಕ್ತಿಗೆ ನಿದರ್ಶನಗಳು. ಹೀಗಾಗಿ, ಈ ಮೂರು ದಶಕಗಳಲ್ಲಿನ ಬದುಕು ಸಿಧು ಅವರ ಉತ್ತಮ ನಡವಳಿಕೆಗೆ ಸಾಕ್ಷಿಯಾಗಿದೆ. ನ್ಯಾಯಾಲಯವು ಅವರಿಗೆ ಶಿಕ್ಷೆಯ ಅವಧಿಯನ್ನು ಕಡಿಮೆಗೊಳಿಸಿ ಬಿಡುಗಡೆ ಮಾಡಿದರೆ, ಜನಸೇವೆ ಮಾಡಲು ಅನುವು ಮಾಡಿಕೊಟ್ಟಂತೆ ಆಗುತ್ತದೆ.

ಸತ್ಯಬೋಧ, ಬೆಂಗಳೂರು

ಮಳೆಹಾನಿ: ಎಚ್ಚರಿಕೆ ಸಾಕು, ಪರಿಹಾರ ಬೇಕು

ಬೆಂಗಳೂರಿನಲ್ಲಿ ರಾಜಕಾಲುವೆ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುಡುಗಿದ್ದಾರೆ. ಈ ಸಂಬಂಧ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡುತ್ತಿರುವವರಲ್ಲಿ ಇಂದಿನ ಮುಖ್ಯಮಂತ್ರಿ ಮೊದಲಿಗರಲ್ಲ, ಪ್ರಾಯಶಃ ಕೊನೆಯವರೂ ಆಗಲಾರರು. ಕಳೆದ ಐದು ವರ್ಷಗಳಲ್ಲಿ ಅಧಿಕಾರ ನಡೆಸಿರುವ ಮಂತ್ರಿಗಳೆಲ್ಲರೂ ಹೀಗೆ ಗುಟುರು ಹಾಕಿದವರೇ. ಪರಿಣಾಮ ಮಾತ್ರ ಶೂನ್ಯ.

ಅವನಿ ಶೃಂಗೇರಿ ಮತ್ತು ರಾಜರಾಜೇಶ್ವರಿ ನಗರ ಪ್ರದೇಶದಲ್ಲಿ ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ನಿರ್ಮಿತವಾಗಿದ್ದಹಲವುಕಟ್ಟಡಗಳನ್ನುಈಮೊದಲುರೋಷಾವೇಶದಿಂದನೆಲಸಮಮಾಡಿದ್ದಬಿಬಿಎಂಪಿಅಧಿಕಾರಿಗಳ ಶೌರ್ಯ, ರಾಜರಾಜೇಶ್ವರಿ ನಗರದಲ್ಲಿನ ಪ್ರಮುಖ ರಾಜಕಾರಣಿಗಳು, ಇತರ ಪ್ರಭಾವಿಗಳು, ಖ್ಯಾತನಾಮರ ಆಸ್ಪತ್ರೆ, ಮಾಲ್ ಮತ್ತು ಬಂಗಲೆಗಳನ್ನು ಕಂಡೊಡನೆ ಉಡುಗಿಹೋಗಿತ್ತು. ಅವನ್ನು ರಕ್ಷಿಸುವುದಕ್ಕಾಗಿಯೇ ಒತ್ತುವರಿಯ ಸರ್ವೆ ಸಮರ್ಪಕವಾಗಿ ಆಗಿಲ್ಲ, ಮರು ಸರ್ವೆ ನಡೆಸಬೇಕೆಂಬ ನೆಪವನ್ನು ಮುಂದಿಟ್ಟ ಕಾರಣ, ಆ ಕಟ್ಟಡಗಳು, 'ಮುಟ್ಟಿ, ನೋಡೋಣ' ಎಂಬಂತೆ ಇನ್ನೂ ತಲೆ ಎತ್ತಿ ಮೆರೆಯುತ್ತಿವೆ! ಪ್ರಭಾವಿಗಳಿಂದಾಗಲೀ ಇತರರಿಂದಾಗಲೀ ಆಗಿರುವ ರಾಜಕಾಲುವೆಗಳ ಒತ್ತುವರಿಯೆಲ್ಲವನ್ನೂ ನಿರ್ದಾಕ್ಷಿಣ್ಯವಾಗಿ ತೆರವು ಮಾಡಿದರೆ ಮತ್ತು ಮಳೆಗಾಲಕ್ಕೂ ಮುನ್ನವೇ ಚರಂಡಿ, ಮಳೆಗಾಲುವೆ ಮತ್ತು ರಾಜಕಾಲುವೆಗಳ ಹೂಳೆತ್ತಿದರೆ, ಮಳೆಯ ನೀರು ಸರಾಗವಾಗಿ ಹರಿದು ಹೋಗುತ್ತದೆ.


ಸ್ವಾತಿ ಪಿ. ಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಠ್ಯಪುಸ್ತಕಗಳ ಮರುಪರಿಷ್ಕರಣೆಯ ಅಗತ್ಯವಿತ್ತೇ...

ಬಹುತ್ವವನ್ನು ಬಲಿಗೊಡುವುದೇ ಪುನರ್ ಪರಿಷ್ಕರಣೆಯ ಆಶಯ

• ಸಿ.ಎನ್. ರಾಮಚಂದ್ರನ್



> ಪುನರ್ ಪರಿಷ್ಕೃತ ಪಠ್ಯವು ವೈವಿಧ್ಯವಿಲ್ಲದ, ಉಪದೇಶವೇ ಹೆಚ್ಚಾಗಿರುವ, 'ಶಾಂತಿ-ಸಹಬಾಳ್ವೆ-ಬಹುತ್ವ'ದ ಆಶಯವನ್ನು ಎಲ್ಲಿಯೂ ಪುರಸ್ಕರಿಸದ, ಸಂಕಲನವಿದೆಂದು ಅನಿಸುತ್ತದೆ. ಸಂಪಾದಕ ಮಂಡಳಿ ತಮ್ಮ ಮಾತಿನಲ್ಲಿ ಉಪಯೋಗಿಸಿರುವ 'ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತ ಪ್ರಚಾರಕ್ಕೆ ಅವಕಾಶವಾಗಬಾರದು' ಎಂಬ ಘೋಷವಾಕ್ಯವು ಈ ಪುನರ್ ಪರಿಶೀಲನೆಗೆ ಒಳಪಟ್ಟ ಪಠ್ಯ ಪುಸ್ತಕಕ್ಕೇ ಹೆಚ್ಚು ಅನ್ವಯವಾಗುತ್ತದೆ...

ಪ್ರಜಾವಾಣಿ ಚರ್ಚೆ

ಶಾಲಾ-ಕಾಲೇಜುಗಳಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಆಯಾ ಕ್ಷೇತ್ರಗಳಲ್ಲಿರುವ ಅನುಭವಿ ವಿದ್ವಾಂಸರ ಕೆಲಸ ಎಂದು ಇತ್ತೀಚಿನವರೆಗೆ ಎಲ್ಲರೂ ಭಾವಿಸಿದ್ದರು. ಆದರೆ, ಕಳೆದೆರಡು ದಶಕಗಳಿಂದ ಸರ್ಕಾರಗಳೇ ನೇರವಾಗಿ ಪಠ್ಯಪುಸ್ತಕ ರಚನೆಯಲ್ಲಿ ಆಸಕ್ತಿ ವಹಿಸಿ, 'ಈ ಪಠ್ಯವಿರಬೇಕು, ಇದು ಇರಬಾರದು' ಎಂದು ನಿರ್ದೇಶಿಸುತ್ತಿರುವುದಕ್ಕೆ ಶಿಕ್ಷಣವನ್ನು ಕುರಿತು ಸರ್ಕಾರಗಳಿಗೆ ಇರುವ ಅಗಾಧ ಕಾಳಜಿ ಕಾರಣವೇ ಅಥವಾ ಆಡಳಿತ ಪಕ್ಷಗಳು ಬದಲಾದಂತೆ ಪಠ್ಯಪುಸ್ತಕಗಳೂ ಬದಲಾಗುತ್ತಿರುವುದು ಶಿಕ್ಷಣಕ್ಕೂ ರಾಜಕೀಯ ಲೇಪವಾಗುತ್ತಿರುವುದರ ಕುರುಹೇ ಎಂಬುದು ಗೊತ್ತಾಗುತ್ತಿಲ್ಲ.

ಸದ್ಯ ವಾದ-ವಿವಾದಗಳಿಗೆ ಗುರಿಯಾಗಿರುವುದು ಹತ್ತನೆಯ ತರಗತಿಗೆ ಸಿದ್ಧಪಡಿಸಿರುವ ಕನ್ನಡ ಪಠ್ಯಪುಸ್ತಕ. ಈ ಪುಸ್ತಕದ ಇತಿಹಾಸ ಕುತೂಹಲಕರವಾಗಿದೆ. ಮೊದಲಿಗೆ ಪ್ರೊ. ಎನ್. ತಮ್ಮಣ್ಣಗೌಡ ಅಧ್ಯಕ್ಷತೆಯ ಸಮಿತಿ 2010ರಲ್ಲಿ 'ಸಿರಿ ಕನ್ನಡ-10' ಎಂಬ ಪಠ್ಯಪುಸ್ತಕವನ್ನು ಸಿದ್ಧಪಡಿಸಿತು. ಅನಂತರ, 2014ರಲ್ಲಿ ಆಗ ಇದ್ದ ಸರ್ಕಾರವು ಆ ಪಠ್ಯಪುಸ್ತಕದ ಪರಿಷ್ಕರಣೆಗೆ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು; ಆ ಸಮಿತಿಯು ಸಿದ್ಧಪಡಿಸಿದ ಪಠ್ಯಪುಸ್ತಕವು 2017-18ರಲ್ಲಿ ಜಾರಿಗೆ ಬಂದಿತು. 'ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಾಮಾಜಿಕ ಸಾಮರಸ್ಯ' ಈ ತತ್ವಗಳ ಹಿನ್ನೆಲೆಯಲ್ಲಿ ಈ ಸಮಿತಿಯು ಪಠ್ಯಪುಸ್ತಕವನ್ನು ಪರಿಷ್ಕರಿಸಿತು. ನಂತರ, 2021ರಲ್ಲಿ ಅಧಿಕಾರದಲ್ಲಿದ್ದ ನೂತನ ಸರ್ಕಾರ ಈ ಪರಿಷ್ಕೃತ ಪಠ್ಯಪುಸ್ತಕವನ್ನು 'ಪುನರ್ ಪರಿಶೀಲಿಸಲು' ರೋಹಿತ್ ಚಕ್ರತೀರ್ಥ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. 'ಭಾಷಾ ಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕ ನ್ಯಾಯ, ಲಿಂಗ ಸಮಾನತೆ, ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ... ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತ ಪ್ರಚಾರಕ್ಕೆ ಅವಕಾಶವಾಗಬಾರದು' ಇತ್ಯಾದಿ ತಾತ್ವಿಕ ಹಿನ್ನೆಲೆಯಲ್ಲಿ ಬರಗೂರು ಸಮಿತಿ ರೂಪಿಸಿದ್ದ ಪಠ್ಯಪುಸ್ತಕವನ್ನು ಈ 'ಪುನರ್ ಪರಿಶೀಲನಾ ಸಮಿತಿ'ಯು ಪರಿಷ್ಕರಿಸಿದೆ. ಈ ಪರಿಶೀಲನಾ ಕಾರ್ಯದಲ್ಲಿ ಮೊದಲಿನ ಪಠ್ಯಪುಸ್ತಕದಿಂದ ಕೆಲವು ಪಠ್ಯಗಳನ್ನು ಕೈಬಿಟ್ಟು ಅವುಗಳ ಜಾಗದಲ್ಲಿ ಹೊಸ ಪಠ್ಯಗಳನ್ನು ಸೇರಿಸಿದೆ. ಈ ಬದಲಾವಣೆಗಳ ಪರಿಣಾಮವನ್ನು, ವಿದ್ಯಾರ್ಥಿಗಳ ನೆಲೆಯಲ್ಲಿ, ಹೀಗೆ ಸಂಕ್ಷಿಪ್ತವಾಗಿ ದಾಖಲಿಸಬಹುದು.

1) **ವೈವಿಧ್ಯ ನಷ್ಟ:** ಕಿಶೋರಾವಸ್ಥೆಯ ವಿದ್ಯಾರ್ಥಿಗಳ ಕುತೂಹಲ ಹಾಗೂ ಆಸಕ್ತಿ ಇವುಗಳನ್ನು ತಣಿಸಲು ಸಾಹಿತ್ಯ ಪ್ರಭೇದಗಳ ವೈವಿಧ್ಯ ಅತ್ಯವಶ್ಯಕ. ಈ ಪುನರ್ ಪರಿಷ್ಕೃತ ಆವೃತ್ತಿಯಲ್ಲಿ ಬರಗೂರು ಸಮಿತಿ ಸಿದ್ಧಪಡಿಸಿದ್ದ ಪಠ್ಯಾವಳಿಯಲ್ಲಿ ಐದು ಪಠ್ಯಗಳನ್ನು ಕೈಬಿಡಲಾಗಿದೆ; ಅವುಗಳೆಂದರೆ: ಸಾರಾ ಅಬೂಬಕ್ಕರ್ ಅವರ 'ಯುದ್ಧ'; ಎ.ಎನ್. ಮೂರ್ತಿರಾವ್ ಅವರ 'ವ್ಯಾಘ್ರಗೀತೆ'; ಜಿ. ರಾಮಕೃಷ್ಣ ಅವರ 'ಭಗತ್ ಸಿಂಗ್' (ಈ ಪಠ್ಯವನ್ನು ಬಿಟ್ಟಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ; ಆದರೆ ನನಗೆ ದೊರಕಿರುವ ಆವೃತ್ತಿಯಲ್ಲಿ ಆ ಪಠ್ಯವಿಲ್ಲ); ಲಂಕೇಶ್ ಅವರ 'ಮೃಗ ಮತ್ತು ಸುಂದರಿ' ಮತ್ತು 'ಜನಪದ ಒಗಟುಗಳು'. ಇವುಗಳಲ್ಲಿ, 'ಯಾವ ಕಾರಣಕ್ಕೆ ಯುದ್ಧವಾದರೂ ಅದರಲ್ಲಿ ಸಾವು-ನೋವುಗಳಾಗುವುದು ಜನಸಾಮಾನ್ಯರಿಗೆ' ಎಂಬ ಆಶಯದ 'ಯುದ್ಧ' ಎಂಬ ಪಠ್ಯ ಉತ್ತಮ ಸಣ್ಣಕಥೆ; 'ವ್ಯಾಘ್ರಗೀತೆ' ವೈನೋದಿಕ ಧಾಟಿಯಲ್ಲಿ ಹುಲಿಗಳಿಗೂ ಅವುಗಳದೇ ಆದ ಧರ್ಮವಿದೆ (ಹುಲಿ ಬೆನ್ನಹಿಂದೆ ಯಾರನ್ನೂ ಆಕ್ರಮಿಸುವುದಿಲ್ಲ) ಎಂಬ ಆಶಯದ ಲಲಿತ ಪ್ರಬಂಧ; 'ಭಗತ್ ಸಿಂಗ್' ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ದೇಶಭಕ್ತನ ಜೀವನ ಚರಿತ್ರೆ; 'ಮೃಗ ಮತ್ತು ಸುಂದರಿ' ಪ್ರೀತಿ ಮೃಗತ್ವವನ್ನೂ ಬದಲಾಯಿಸುತ್ತದೆ ಎಂಬ ಆಶಯದ ಕಟ್ಟುಕಥೆ (Fable); 'ಜನಪದ ಒಗಟುಗಳು' ಎಂಬ ಪಠ್ಯ ಹೆಸರೇ ಹೇಳುವಂತೆ ಜಾನಪದ ಸಾಹಿತ್ಯದ ಒಂದು ಭಾಗ.

'ಪುನರ್ ಪರಿಷ್ಕೃತ' ಆವೃತ್ತಿಯಲ್ಲಿ ಇವುಗಳ ಸ್ಥಾನದಲ್ಲಿ ಬನ್ನಂಜೆ ಅವರ 'ಶುಕನಾಸನ ಉಪದೇಶ'; ಹೆಡಗೇವಾರ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?'; ಶಿವಾನಂದ ಕಳವೆ ಅವರ 'ಸ್ವದೇಶೀ ಸೂತ್ರದ ಸರಳ ಹಬ್ಬ' ಮತ್ತು ಗೋವಿಂದ ಪೈ ಅವರ 'ನಾನು ಪ್ರಾಸ ಬಿಟ್ಟ ಕತೆ'. 'ಸ್ವಾಮಿ ವಿವೇಕಾನಂದರ ಚಿಂತನೆ' ಎಂಬ ಪಠ್ಯವನ್ನು ಬದಲಿಸಿ, 'ಉದಾತ್ತ ಚಿಂತನೆಗಳು' ಹೆಸರಿನ ಪಠ್ಯ ಸೇರಿಸಲಾಗಿದ್ದು, ಅದರಲ್ಲಿ ವಿವೇಕಾನಂದರೊಡನೆ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ವಿಚಾರಗಳನ್ನೂ ಸೇರಿಸಲಾಗಿದೆ.

ಗೋವಿಂದ ಪೈ ಅವರ ಪಠ್ಯವನ್ನು ಹೊರತುಪಡಿಸಿದರೆ, ಉಳಿದ ನಾಲ್ಕೂ ಚಿಂತನಾಪ್ರಧಾನ ವೈಚಾರಿಕ ಲೇಖನಗಳು. ಪದ್ಯಭಾಗವನ್ನು ಹೊರತುಪಡಿಸಿದರೆ, ಉಳಿದ ಪಠ್ಯಗಳಲ್ಲಿ ಹೆಚ್ಚಿನವು ವೈಚಾರಿಕ ಲೇಖನಗಳು; ಪರಿಣಾಮದಲ್ಲಿ ವೈವಿಧ್ಯವಿಲ್ಲದೆ, ಏಕತಾನತೆಯಿಂದ ವಿದ್ಯಾರ್ಥಿಗಳ ಆಸಕ್ತಿ ಕುಂಠಿತವಾಗಬಹುದು.

2) **ಚರ್ಚಾಸ್ಪದ ವಿಚಾರಗಳು:** ಈ ಸಂಕಲನದಲ್ಲಿ (ನನಗೆ ತೋರುವಂತೆ) ಅತಿ ಹೆಚ್ಚು ಚರ್ಚೆಗೆ ಕಾರಣವಾಗುವ ಲೇಖನಗಳು ಎರಡು: ಹೆಡಗೇವಾರ್ ಹಾಗೂ ಶತಾವಧಾನಿ ಗಣೇಶ್ ಅವರ ಲೇಖನಗಳು. ಹೆಡಗೇವಾರ್ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?' ಎಂಬ ಭಾಷಣದ ಪಠ್ಯದಲ್ಲಿ ಅವರು ಸ್ವವಿರೋಧಾತ್ಮಕ ಎರಡು ವಿಚಾರಗಳನ್ನು ಮಂಡಿಸುತ್ತಾರೆ. ಮೊದಲಿಗೆ, 'ತತ್ವವೇ ಎಂದೆಂದೂ ನಮ್ಮ ಆದರ್ಶವಾಗಿರಬೇಕು' ಎಂದು ಹೇಳುತ್ತಲೇ, ಅದನ್ನು ಆಚರಣೆಯಲ್ಲಿ ತರುವುದು ಕಷ್ಟಸಾಧ್ಯವಾದುದರಿಂದ, 'ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದೂ, ಸರ್ವಥಾ ಪ್ರಮಾದಾತೀತನೆಂದೂ ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬೇಕು' ಎಂದು ತೀರ್ಮಾನಿಸುತ್ತಾರೆ. ಎಂದರೆ, ತತ್ವವನ್ನು ಎತ್ತಿ ಹಿಡಿಯುತ್ತಲೇ ವ್ಯಕ್ತಿಪೂಜೆಗೆ ಅನುವು ಮಾಡಿಕೊಡುತ್ತಾರೆ. ರಾಜ-ಮಹಾರಾಜರ ಕಾಲ ಅಳಿದು ಪ್ರಜಾಪ್ರಭುತ್ವದ ಕಾಲದಲ್ಲಿ ಇಂದು 'ವ್ಯಕ್ತಿಪೂಜೆ'ಯನ್ನು ಒಪ್ಪಲು ಸಾಧ್ಯವೇ? ಇಷ್ಟೇ ಅಲ್ಲದೆ, 'ಸರ್ವಥಾ ಪ್ರಮಾದಾತೀತ ವ್ಯಕ್ತಿ' ಈ ಭೂಮಿಯ ಮೇಲೆ ಇರಲು ಸಾಧ್ಯವೇ? ('ಧ್ವಜ'ದ ಬಗ್ಗೆ ಹೆಡಗೇವಾರ್ ಅವರು ಹೇಳುವಾಗ ತಮ್ಮ ಭಾಷಣದಲ್ಲಿ 'ಭಗವಾಧ್ವಜ' ಎಂದು, ಹಾಗೂ '. . . ಸಂಘಕ್ಕೆ' ಎಂದು ನೇರವಾಗಿ ಹೇಳುತ್ತಾರೆ; ಆದರೆ ಸಂಪಾದಕ ಮಂಡಳಿ 'ಭಗವಾ' ಮತ್ತು 'ಸಂಘಕ್ಕೆ' ಪದಗಳನ್ನು ಬಿಟ್ಟಿದೆ. ಹೀಗೆ ಮೂಲಪಠ್ಯವನ್ನು ತಿರುಚಬಹುದೆ?)


ಶತಾವಧಾನಿ ಗಣೇಶ್ ಅವರು 'ಶ್ರೇಷ್ಠ ಭಾರತೀಯ ಚಿಂತನೆಗಳು' ಎಂಬ ಲೇಖನದಲ್ಲಿ 'ಪಾಶ್ಚಾತ್ಯರು ಕಟ್ಟಿಕೊಟ್ಟ ತಪ್ಪು ಕಲ್ಪನೆಗಳನ್ನೇ ನಾವು ಸತ್ಯವೆಂದು ನಂಬುವಂತಾಯಿತು' ಎಂದು ಪ್ರಾರಂಭಿಸಿ, ನಂತರ ಅನೇಕ ಅಮೂರ್ತ ಪರಿಕಲ್ಪನೆಗಳ 'ನಿಜವಾದ' ಅರ್ಥವನ್ನು ಕೊಡುತ್ತಾ ಹೋಗುತ್ತಾರೆ. ಈ ಪರಿಕಲ್ಪನೆಗಳೆಂದರೆ: ಋತ, ಸತ್ಯ, ಋಣ, ಹಾಗೂ ಧರ್ಮ; ಯಜ್ಞ, ದಾನ, ತಪಸ್ಸು ಮತ್ತು ಪುರುಷಾರ್ಥ, ಸ್ವಧರ್ಮ. ಈ ಪರಿಕಲ್ಪನೆಗಳ ವ್ಯಾಖ್ಯಾನಗಳಲ್ಲಿ ಕಂಡುಬರುವ ಲೇಖಕರ ಅಗಾಧ ವಿದ್ವತ್ತನ್ನು ಮೆಚ್ಚುತ್ತಲೇ, ಇವೆಲ್ಲವೂ 'ಬುದ್ಧಿಚಾತುರ್ಯದ ವಿನ್ಯಾಸ'ಗಳಲ್ಲವೇ ಎಂದೂ ಪ್ರಶ್ನಿಸುವಂತಾಗುತ್ತದೆ. ಉದಾಹರಣೆಗೆ, ಯಜ್ಞದಲ್ಲಿ 'ಅಗ್ನಿಮುಖದಲ್ಲಿ ಆಹುತಿ ನೀಡುವುದು ಒಂದು ಸಂಕೇತ ಮಾತ್ರ'; ಅದರಿಂದ 'ತ್ಯಾಗ ಮಾಡುವುದರ ಲಕ್ಷಣ ತಿಳಿಯುತ್ತದೆ' ಎಂದು ಮಂಡಿಸುತ್ತಾರೆ. 'ಯಜ್ಞ' ಸಂಕೇತ ಮಾತ್ರ ಎನ್ನುವುದಾದರೆ ಅದರಲ್ಲಿ 'ಪ್ರಾಣಿವಧೆ' ಹೇಗೆ ಮತ್ತು ಏಕೆ ಆಗುತ್ತದೆ? ಸ್ವಧರ್ಮವೆಂದರೆ 'ವ್ಯಕ್ತಿಯು ತನ್ನ ಸ್ವಭಾವಕ್ಕೆ ಅನುಸಾರವಾಗಿ ತನ್ನದಾದ ಬದುಕನ್ನು ರೂಪಿಸಿಕೊಳ್ಳುವುದು' ಎಂದು ಅರ್ಥೈಸಿದರೆ, ದುಷ್ಟನೊಬ್ಬನು ತನ್ನ ದುಷ್ಟ ಸ್ವಭಾವಕ್ಕೆ ಅನುಸಾರವಾಗಿ ವರ್ತಿಸಿದಾಗ ಅದು 'ಧರ್ಮ' ಹೇಗಾಗುತ್ತದೆ? (ಇಲ್ಲಿ, 'ಧರ್ಮ' ಪದಕ್ಕೆ ಇರುವ ನಾನಾರ್ಥಗಳಲ್ಲಿ ಒಂದಾದ 'ಮತ, ರಿಲಿಜನ್' ಎನ್ನುವ ಅರ್ಥವನ್ನು ದೂರಮಾಡಲು ಲೇಖಕರು ಪ್ರಯತ್ನಿಸುತ್ತಿದ್ದಾರೆಂದು ಕಾಣುತ್ತದೆ).

ಒಟ್ಟಾರೆಯಾಗಿ ನೋಡಿದಾಗ, ವೈವಿಧ್ಯವಿಲ್ಲದ, ಉಪದೇಶವೇ ಹೆಚ್ಚಾಗಿರುವ, 'ಶಾಂತಿ-ಸಹಬಾಳ್ವೆ-ಬಹುತ್ವ'ದ ಆಶಯವನ್ನು ಎಲ್ಲಿಯೂ ಪುರಸ್ಕರಿಸದ, ಸಂಕಲನವಿದೆಂದು ಅನಿಸುತ್ತದೆ. ಸಂಪಾದಕ ಮಂಡಳಿ ತಮ್ಮ ಮಾತಿನಲ್ಲಿ ಉಪಯೋಗಿಸಿರುವ 'ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತ ಪ್ರಚಾರಕ್ಕೆ ಅವಕಾಶವಾಗಬಾರದು' ಎಂಬ ಘೋಷವಾಕ್ಯವು ಈ ಪುನರ್ ಪರಿಶೀಲನೆಗೆ ಒಳಪಟ್ಟ ಪಠ್ಯ ಪುಸ್ತಕಕ್ಕೇ ಹೆಚ್ಚು ಅನ್ವಯವಾಗುತ್ತದೆ.

ಲೇಖಕ: ವಿಮರ್ಶಕ, ಶಿಕ್ಷಣ ತಜ್ಞ

ಸ್ವಾತಂತ್ರ್ಯ ಹೋರಾಟಗಾರ ಹೆಡಗೇವಾರ್ ಪಾಠವಿದ್ದರೆ ತಪ್ಪೇನು?

• ಬಿ.ಸಿ. ನಾಗೇಶ್



> ಮೊದಲ ಬಾರಿ ರಾಜ್ಯದ ಪಠ್ಯ ಪುಸ್ತಕದಲ್ಲಿ ಡಾ. ಹೆಡಗೇವಾರ್ ಅವರ ಉತ್ತಮವಾದ ವಿಚಾರಧಾರೆಯನ್ನು ಮಕ್ಕಳಿಗೆ ಪರಿಚಯಿಸುತ್ತಿರುವುದನ್ನು ಸಹಿಸದ ಕಾಂಗ್ರೆಸ್ ನಾಯಕರು ಮತ್ತು ಸೋ ಕಾಲ್ಡ್ ಬುದ್ಧಿಜೀವಿಗಳ ಕಣ್ಣುಗಳು ಕೆಂಪಗಾಗಿವೆ. ಕಾಂಗ್ರೆಸ್ ಮತ್ತು ಆ ಪಕ್ಷದ ಮುಖಂಡರ ಕೃಪಾಶೀರ್ವಾದಕ್ಕೆ ಒಳಗಾದವರು ಬರೆದಿದ್ದೇ ಇತಿಹಾಸ; ಅದೇ ಸರಿ ಎನ್ನುವಂತಾಗಿದೆ.

ಪಠ್ಯಪುಸ್ತಕಗಳು ನಮ್ಮ ದೇಶ, ನೆಲ, ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ ಅಭಿಮಾನ ಮೂಡಿಸುವಂತಿರಬೇಕು. ನಮ್ಮ ದೇಶದಲ್ಲಿ ಆಗಿ ಹೋದ ಪುಣ್ಯಪುರುಷರು, ದಾರ್ಶನಿಕರು, ರಾಷ್ಟ್ರಭಕ್ತರು, ಸ್ವಾತಂತ್ರ ಯೋಧರ ಕಥೆ/ ವಿಚಾರಗಳನ್ನು ಪಠ್ಯಪುಸ್ತಕಗಳು ಒಳಗೊಂಡಿರಬೇಕು. ಇತಿಹಾಸದಲ್ಲಿ ಗತಿಸಿದ ಅನ್ಯಾಯ, ದಬ್ಬಾಳಿಕೆ, ಆಕ್ರಮಣಗಳಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವಂತಿರಬೇಕು.

ಈ ಹಿಂದೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಆಶಯದಂತೆ ಪಠ್ಯಪುಸ್ತಕಗಳನ್ನು ಮುಖ್ಯ ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯ ಅವರ ಅಧ್ಯಕ್ಷತೆಯಲ್ಲಿ ಪಠ್ಯಪುಸ್ತಕ ರಚನಾ ಸಮಿತಿಯನ್ನು ರಚಿಸಲಾಗಿತ್ತು. ಮೊದಲ ಬಾರಿ ರಾಜ್ಯದ ಪಠ್ಯ ಪುಸ್ತಕದಲ್ಲಿ ಡಾ. ಹೆಡಗೇವಾರ್ ಅವರ ಉತ್ತಮವಾದ ವಿಚಾರಧಾರೆಯನ್ನು ಮಕ್ಕಳಿಗೆ ಪರಿಚಯಿಸುತ್ತಿರುವುದನ್ನು ಸಹಿಸದ ಕಾಂಗ್ರೆಸ್ ನಾಯಕರು ಮತ್ತು ಸೋ ಕಾಲ್ಡ್ ಬುದ್ಧಿಜೀವಿಗಳ ಕಣ್ಣುಗಳು ಕೆಂಪಗಾಗಿವೆ. ಕಾಂಗ್ರೆಸ್ ಮತ್ತು ಆ ಪಕ್ಷದ ಮುಖಂಡರ ಕೃಪಾಶೀರ್ವಾದಕ್ಕೆ ಒಳಗಾದವರು ಬರೆದಿದ್ದೇ ಇತಿಹಾಸ; ಅದೇ ಸರಿ ಎನ್ನುವಂತಾಗಿದೆ. ಸಾಮಾನ್ಯವಾಗಿ ಹೊಸ ಪಠ್ಯಪುಸ್ತಕಗಳು ರಚನೆಯಾಗಿ, ಜಾರಿಗೆ ಬಂದ ನಂತರ ಸುಮಾರು 8 ರಿಂದ 10 ವರ್ಷಗಳ ಕಾಲ ಅವು ಚಾಲ್ತಿಯಲ್ಲಿರುತ್ತವೆ. ಮುಡಂಬಡಿತ್ತಾಯರ ಸಮಿತಿಯು ಅನೇಕ ಸಭೆ, ಕಾರ್ಯಾಗಾರಗಳಲ್ಲಿ ಚರ್ಚೆಗಳನ್ನು ನಡೆಸಿ, ಉತ್ತಮ ಮತ್ತು ಸಮತೋಲಿತ ಪಠ್ಯಪುಸ್ತಕಗಳನ್ನು ರಚಿಸಿತ್ತು. ಇಂತಹ ಪಠ್ಯಪುಸ್ತಕಗಳಲ್ಲಿ ಬದಲಾವಣೆಗಳು ಅನಿವಾರ್ಯವಾದಲ್ಲಿ ಮಾತ್ರ ಆಯಾ ಸಾಲಿನ ಪಠ್ಯಪುಸ್ತಕಗಳಲ್ಲಿನ ಮಾಹಿತಿ ಪರಿಷ್ಕರಿಸಲಾಗುತ್ತದೆ. ಹಿಂದೆ ಅಧಿಕಾರ ನಡೆಸಿದ ಕಾಂಗ್ರೆಸ್ ಸರ್ಕಾರವು, ಸಮತೋಲಿತವಾಗಿ ಮತ್ತು ಉತ್ತಮವಾಗಿ ರಚಿಸಲ್ಪಟ್ಟ ಪಠ್ಯಪುಸ್ತಕಗಳಲ್ಲಿ 'ಕೇಸರಿಕರಣ'ವಾಗಿದೆ ಎಂಬ ಮಿಥ್ಯಾರೋಪ ಮಾಡಿದ್ದಲ್ಲದೇ, ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯಲ್ಲಿ 27 ಸಮಿತಿಗಳನ್ನು ರಚಿಸಿ ಪಠ್ಯಪುಸ್ತಕ ಪರಿಷ್ಕರಣೆ ಮಾಡಿತ್ತು.

ಹೀಗೆ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳು 2017-18ನೇ ಸಾಲಿನಿಂದ ಜಾರಿಗೆ ಬಂದವು. ಪಠ್ಯಪುಸ್ತಕಗಳಲ್ಲಿ ಇದ್ದ ಭಾರತೀಯ ಮತ್ತು ರಾಷ್ಟ್ರಪ್ರೇಮದ ಅನೇಕ ಅಂಶಗಳನ್ನು ಪರಿಷ್ಕರಣೆಯ ನೆಪದಲ್ಲಿ ತೆಗೆದುಹಾಕಲಾಗಿತ್ತು. ಪಠ್ಯಪುಸ್ತಕಗಳಲ್ಲಿ ಭಾರತ, ಹಿಂದೂ ಧರ್ಮದ ಬಗ್ಗೆ ಇದ್ದ ವಿಷಯಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಮಹತ್ವದ್ದನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿ ಅನೇಕ ಪದಗಳನ್ನು ಬದಲಾಯಿಸಲಾಯಿತು. 'ಹಿಂದೂ ಮಹಾಸಾಗರ' ಎಂದು ಇದ್ದುದನ್ನು 'ಇಂಡಿಯನ್ ಓಷಿಯನ್' ಎಂಬುದಾಗಿ, 'ಮಾತೃಭೂಮಿ' ಪದವನ್ನು 'ಭಾರತೀಯತೆ' ಎಂದು ಮಾರ್ಪಾಡು ಮಾಡಿದ್ದರು. ಈ ತಪ್ಪುಗಳನ್ನು ಸರಿಪಡಿಸಲು ರೋಹಿತ್ ಚಕ್ರತೀರ್ಥ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು.

ಮೂಲವನ್ನು ಅರಿತುಕೊಳ್ಳದೇ ಹೊಸತನ್ನು ಕಟ್ಟಲಾಗದು. ಇತಿಹಾಸದ ಅರ್ಧ ಮಾತ್ರ ತೋರಿಸಿ, ಇನ್ನರ್ಧವನ್ನು ಮುಚ್ಚಿಡಬಾರದು. ಸಮಾಜ, ದೇಶ, ಭವಿಷ್ಯಕ್ಕೆ ಒಳಿತಾಗಬೇಕೆಂದರೆ ಒಬ್ಬರು, ಇನ್ನೊಬ್ಬರನ್ನು ದ್ವೇಷಿಸುವ ಮನಸ್ಥಿತಿಯನ್ನು ಮಕ್ಕಳಲ್ಲಿ ತುಂಬಬಾರದು. ಚಿಕ್ಕ ವಯಸ್ಸಿನ ಮಕ್ಕಳಿಗೆ ಜ್ಞಾನಾಧಾರಿತ ಶಿಕ್ಷಣವನ್ನು ನೀಡಬೇಕು. ವಯಸ್ಕರಾದ ಬಳಿಕ ಅವರಿಗೆ ಸರಿ ಎನಿಸುವುದನ್ನು ಓದಲು ಅವಕಾಶ ಇದ್ದೇ ಇರುತ್ತದೆ. ಆಗ ಅವರು ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಧಾರ ಮಾಡುತ್ತಾರೆ. ಒಂದು ದಶಕದ ಹಿಂದಿನವರೆಗೂ ಜ್ಞಾನ ಸಂಪಾದನೆಗೆ ಹೆಚ್ಚಾಗಿ ಪಠ್ಯ ಪುಸ್ತಕಗಳೇ ಆಧಾರವಾಗಿದ್ದವು. ಆದರೆ, ಇಂದು ಜ್ಞಾನ ಸಂಪಾದನೆ ಮತ್ತು ವಿಷಯ ತಿಳಿಯಲು ನೂರಾರು ಮಾರ್ಗಗಳಿವೆ. ಹೀಗಾಗಿ, ಸತ್ಯ ಮುಚ್ಚಿಡಲಾಗದು.

ಭಾರತದ ಸಂವಿಧಾನವನ್ನು ಭಾರತದ ಪ್ರಜೆಗಳಿಗೆ ಸಮಾನ ಅವಕಾಶ ಕಲ್ಪಿಸುವಂತೆ ಪರಿಪೂರ್ಣವಾಗಿ ರಚಿಸಲಾಗಿದೆ. ಆದರೆ, ದೀರ್ಘ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ಹಲವು ದಶಕಗಳಿಂದ ನೈಜ ಇತಿಹಾಸವನ್ನು ತಿರುಚಿ ಸಮಾಜ ಒಡೆಯುವ ಅಂಶಗಳನ್ನು ಪಠ್ಯ ಪುಸ್ತಕಗಳಲ್ಲಿ ಸೇರಿಸಿದೆ.

ದೇಶದ ಭವಿಷ್ಯ ಭದ್ರವಾಗಿರಬೇಕೆಂದರೆ ಮಕ್ಕಳಿಗೆ ದೇಶಪ್ರೇಮ, ರಾಷ್ಟ್ರೀಯತೆಯನ್ನು ಬೆಳೆಸಬೇಕು. ಮಹಾತ್ಮ ಗಾಂಧೀಜಿ ಕಂಡ ಕನಸಿನಂತೆ ಸ್ವಾಭಿಮಾನಿ, ಸ್ವಾವಲಂಬಿ ಭಾರತವನ್ನು ನಿರ್ಮಿಸುವ ಮತ್ತು ಅದನ್ನು ಮಕ್ಕಳಿಗೆ ಪಠ್ಯದ ಮೂಲಕ ತಿಳಿಸುವ ಪ್ರಯತ್ನಗಳು ಆಗಬೇಕಿದೆ. ಆ ಕೆಲಸವನ್ನೇ ಸರ್ಕಾರ ಮಾಡಿದೆ.

ರೋಹಿತ್ ಸಮಿತಿಯ ಸಲಹೆ ಆಧರಿಸಿ, ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರು, ದೇಶದ ಏಳಿಗೆಯೇ ಪರಮೋಚ್ಚವೆಂದ ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರ ಭಾಷಣದ ಪಾಠವನ್ನು 10ನೇ ತರಗತಿಯ ಕನ್ನಡ ಭಾಷಾ ಪುಸ್ತಕದಲ್ಲಿ ಸೇರಿಸಲಾಗಿದೆ. ಹೆಡಗೇವಾರ್ ಅವರು ದೇಶದ ಅಭಿವೃದ್ಧಿಯ ಕನಸು ಕಂಡು ಅದನ್ನು ನನಸು ಮಾಡಲು ತನ್ನ ಜೀವನವನ್ನೇ ಮುಡುಪಾಗಿಟ್ಟವರು. ತಮ್ಮ ಹೋರಾಟ, ಅಭಿವೃದ್ಧಿ ಪರ ಚಿಂತನೆಗಳಿಂದ ಭಾರತದ ಕೋಟ್ಯಂತರ ಯುವ ಜನತೆಯಲ್ಲಿ ಭಾರತೀಯತೆಯ ಜಾಗೃತಿ ಮೂಡಿಸಿದರು. ತಮ್ಮ ಭಾಷಣಗಳಲ್ಲಿ ಭಾರತೀಯ ವಿಚಾರಧಾರೆಗಳನ್ನು ಹೇಳುತ್ತಿದ್ದರು. ಕನ್ನಡ ಭಾಷಾ ಪುಸ್ತಕದಲ್ಲಿ ಅಳವಡಿಸಲಾಗಿರುವ ಅವರ ಭಾಷಣದ ಭಾಗ ಕೂಡ ಭಾರತ ದೇಶ, ನಾವು ಪಾಲಿಸಬೇಕಿರುವ ಒಳ್ಳೆಯ ಸಿದ್ಧಾಂತದ ಕುರಿತಾಗಿದೆ. ಪಾಠ ಓದುವ ಪ್ರತಿಯೊಬ್ಬರಿಗೂ ತನ್ನ ಆದ್ಯತೆ ಏನಾಗಬೇಕು ಎಂಬ ಆಲೋಚನೆ ಮೂಡುತ್ತದೆ.

ವೈದ್ಯಕೀಯ ಪದವಿ ಪಡೆದ ಹೆಡಗೇವಾರ್ ಅವರು ವೈದ್ಯಕೀಯ ವೃತ್ತಿಯನ್ನು ಮಾಡಿಕೊಂಡು ಆರಾಮದಾಯಕ ಜೀವನ ಸಾಗಿಸಬಹುದಿತ್ತು. ಆದರೆ, ಅವರಿಗೆ ದೇಶದ ಬಗ್ಗೆ ಚಿಂತೆ ಇತ್ತು. ಹೀಗಾಗಿ, ಬದಲಾವಣೆ ತರಲು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ತಮ್ಮ ಸಮಾಜ ಸೇವೆ ಆರಂಭಿಸಿದರು. ಕೆಲ ಕಾಲದಲ್ಲೇ ಪಕ್ಷದಿಂದ ಹೊರಬಂದು ಜಗತ್ತಿನ ಅತಿ ದೊಡ್ಡ ದೇಶಪ್ರೇಮಿಗಳ ಸಂಘಟನೆಯಾದ ಆರ್‌ಎಸ್‌ಎಸ್ ಸ್ಥಾಪಿಸಿದರು. ಇಂದು ಕೋಟ್ಯಂತರ ಕಾರ್ಯಕರ್ತರು ದೇಶದ ಅಭಿವೃದ್ಧಿ ಪರ ಚಿಂತನೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ದೇಶದ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ಭಾರತವನ್ನು ಸ್ವಾವಲಂಬಿ, ಸ್ವಾಭಿಮಾನಿ, ವಿಶ್ವಗುರು ಸ್ಥಾನಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲಿ ಯಶಸ್ಸೂ ಸಿಗುತ್ತಿದೆ.

ಮೊದಲ ಬಾರಿ ರಾಜ್ಯದ ಪಠ್ಯ ಪುಸ್ತಕದಲ್ಲಿ ಡಾ. ಹೆಡಗೇವಾರ್ ಅವರ ಉತ್ತಮವಾದ ವಿಚಾರಧಾರೆಯನ್ನು ಮಕ್ಕಳಿಗೆ ಪರಿಚಯಿಸುತ್ತಿರುವುದನ್ನು ಸಹಿಸದ ಕಾಂಗ್ರೆಸ್ ನಾಯಕರು ಮತ್ತು ಸೋ ಕಾಲ್ಡ್ ಬುದ್ಧಿಜೀವಿಗಳ ಕಣ್ಣುಗಳು ಕೆಂಪಗಾಗಿವೆ. ಕಾಂಗ್ರೆಸ್ ಮತ್ತು ಆ ಪಕ್ಷದ ಮುಖಂಡರ ಕೃಪಾಶೀರ್ವಾದಕ್ಕೆ ಒಳಗಾದವರು ಬರೆದಿದ್ದೇ ಇತಿಹಾಸ; ಅದೇ ಸರಿ ಎನ್ನುವಂತಾಗಿದೆ. ಆರಂಭದಲ್ಲಿದ್ದ ಪುಸ್ತಕಗಳನ್ನು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಏಕೆಂದರೆ, ಭಾರತದ ಭವಿಷ್ಯಕ್ಕಿಂತ ಕಾಂಗ್ರೆಸ್ ನಾಯಕರಿಗೆ ಸ್ವಂತ ಏಳಿಗೆ ಬೇಕಾಗಿತ್ತು. ಹೀಗಾಗಿ, ಅವರೆಂದಿಗೂ ಶಿಕ್ಷಣದಲ್ಲಿ ಮಕ್ಕಳಿಗೆ ನಾವೇನು ನೀಡುತ್ತಿದ್ದೇವೆ. ಅದರಿಂದ ಸಮಾಜಕ್ಕೆ ಮತ್ತು ಭಾರತಕ್ಕೆ ಆಗುವ ಅನುಕೂಲ ಏನು ಎಂಬುದನ್ನು ಅರಿಯುವ ಪ್ರಯತ್ನವನ್ನೇ ಮಾಡಲಿಲ್ಲ.

ಮಕ್ಕಳ ವಯೋಮಾನಕ್ಕೆ ತಕ್ಕಂತೆ ಪಠ್ಯ ವಿಷಯಗಳು ಇರಬೇಕು. ಆಯಾ ವಯಸ್ಸಿನಲ್ಲಿ ಇರಬಹುದಾದ ವೈಜ್ಞಾನಿಕ ಬುದ್ಧಿಮತ್ತೆ, ಮಕ್ಕಳ ವಯೋಮಾನಕ್ಕೆ ತಕ್ಕಂತೆ, ವೈಜ್ಞಾನಿಕವಾಗಿ ಪರಿಶೀಲಿಸಿದ ವಿಷಯ, ಅಂಶಗಳನ್ನು ಮಕ್ಕಳಿಗೆ ಕಲಿಸಬೇಕು. ಅನಗತ್ಯ ವಿಚಾರಗಳನ್ನು ತಲೆಯಲ್ಲಿ ತುಂಬುವ ಪ್ರಯತ್ನ ಮಾಡಬಾರದು. ಆರೋಗ್ಯಕರ ಚಿಂತನೆಗಳೊಂದಿಗೆ ಸಮಾಜದ ವಿವಿಧ ವರ್ಗ, ಸಮುದಾಯಗಳ ಜನರ ನಡುವೆ ಪರಸ್ಪರ ನಂಬಿಕೆ, ವಿಶ್ವಾಸ ಮೂಡಿಸಬೇಕು. ಅನಗತ್ಯ ಪುನರಾವರ್ತಿತ ಭಾಗಗಳನ್ನು ಕೈಬಿಟ್ಟು ವಿದ್ಯಾರ್ಥಿಗಳಿಗೆ ಕಲಿಕಾ ಹೊರೆಯನ್ನು ತಗ್ಗಿಸಿ ಪರಿಪೂರ್ಣ ಶಿಕ್ಷಣ ನೀಡುವ ಅಗತ್ಯತೆ ಮನಗಂಡು ಸಮಾಜ ವಿಜ್ಞಾನ ಮತ್ತು ಕನ್ನಡ ಪುಸ್ತಕಗಳನ್ನು ಪರಿಷ್ಕರಿಸಲಾಗಿದೆ.

ಪರಿಷ್ಕರಣೆಗೊಂಡಿರುವ ಪಠ್ಯಾಂಶಗಳನ್ನು ಆಯಾ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯಕ್ಕೆ ಸರಿಹೊಂದುವಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯಿಂದ ನುರಿತ ಶಿಕ್ಷಕರ ಮೂಲಕ ಪರಿಶೀಲಿಸಲಾಗಿದೆ. ಇಲಾಖೆ ನೀಡಿದ ಸಲಹೆಗಳನ್ನು ಪರಿಶೀಲಿಸಿ ಪರಿಷ್ಕೃತ ಪಠ್ಯ ಪುಸ್ತಕ ಅಂತಿಮಗೊಳಿಸಲಾಗಿದೆ.

ಪಠ್ಯಪುಸ್ತಕದಿಂದ ಭಗತ್ ಸಿಂಗ್, ಶ್ರೀ ನಾರಾಯಣ ಗುರುಗಳು, ಬಸವಣ್ಣನವರ ಪಾಠವನ್ನು ತೆಗೆದಿಲ್ಲ. ರಾಜಕೀಯ ಕಾರಣಕ್ಕೆ ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡಲು ಪ್ರಯತ್ನಿಸಬಾರದು.

ಲೇಖಕ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 126

ದಕ್ಷನ ಬೆವರಲ್ಲಿ ಹುಟ್ಟಿದ ರತಿ

ಬ್ರಹ್ಮ ಮತ್ತವನ ಮಕ್ಕಳ ಕಾಮವಿಕಾರವನ್ನು ಸಹಿಸದ ಧರ್ಮಪುರುಷ ಶಿವನಲ್ಲಿ ಮೊರೆ ಇಟ್ಟ. 'ಮಹಾದೇವನೇ! ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳಿಗೆ ನೀನೇ ಕರ್ತನು. ನೀನು ಮಾಯಾಮಯವಾದ ರಜಸ್ಸು, ಸತ್ತ್ವ ಮತ್ತು ತಮಸ್ಸು ಎಂಬ ಮೂರು ಗುಣಗಳಿಂದ ಬ್ರಹ್ಮ, ವಿಷ್ಣು, ಮತ್ತು ರುದ್ರರೂಪಗಳನ್ನು ಧರಿಸಿ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ನಾಶಗಳನ್ನು ನಡೆಸುತ್ತಲಿರುವೆ. ಹೀಗಿದ್ದರೂ ಪಾರಮಾರ್ಥಿಕವಾಗಿ ನೀನು ನಿರ್ಗುಣನು, ಯಾವ ಗುಣಗಳೂ ಇಲ್ಲದವನು.'

'ಓ ಪರಮೇಶ್ವರನೇ! ನೀನು ಪಾರಮಾರ್ಥಿಕವಾಗಿ ಸತ್ತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳಿಲ್ಲದ ಮಂಗಳರೂಪ. ಜಡವಾದ ಪ್ರಕೃತಿಯ ಸಂಬಂಧವಿಲ್ಲದ ಚೇತನಸ್ವರೂಪ. ಆದುದರಿಂದಲೇ ಪ್ರಕೃತಿ ಸಂಬಂಧವಾದ ಯಾವ ಗುಣಗಳೂ ಇಲ್ಲದವನಾಗಿದ್ದೀಯ. ಜನ್ಮ, ಸ್ಥಿತಿ, ನಾಶ ಮುಂತಾದ ವಸ್ತುವಿಕಾರಗಳಿಲ್ಲದೇ ನಿತ್ಯನಾದವನಾಗಿದ್ದೀಯ, ಮಾಯಾಮಯನಾಗಿ ಅನೇಕ ಲೀಲೆಗಳನ್ನು ಮಾಡುವವನಾದ ನೀನು, ಪಾಪ ಬುದ್ಧಿಯುಳ್ಳವರಾದ ನನ್ನ ತಂದೆ ಬ್ರಹ್ಮ ಮತ್ತವನ ಮಕ್ಕಳಾದ ನನ್ನ ಸಹೋದರರ ಪಾಪಕೃತ್ಯ ತಡೆಹಿಡಿ. ಸಂಧ್ಯೆ ಮೇಲೆ ಮೋಹಗೊಂಡಿರುವ ಅವರೆಲ್ಲರಿಗೂ ಸದ್ಬುದ್ಧಿ ಕೊಡು' ಎಂದು ಧರ್ಮಪುರುಷ ಶಿವನಲ್ಲಿ ಪ್ರಾರ್ಥಿಸುತ್ತಾನೆ.

ಧರ್ಮಪುರುಷನ ಮೊರೆ ಕೇಳಿ ಮಹಾದೇವನು ಧಾವಿಸಿ ಬಂದು, 'ಎಲೈ ಬ್ರಹ್ಮನೇ, ನಿನಗೂ ಈ ಮದನವಿಕಾರವುಂಟಾಯಿತೇ? ನಿನ್ನ ಸ್ವಂತ ಮಗಳನ್ನು ನೋಡಿ ಈ ರೀತಿ ಭೋಗಾಭಿಲಾಷೆಯುಳ್ಳವರಾಗುವುದು ವೇದಮಾರ್ಗವನ್ನನುಸರಿಸಿ ನಡೆಯುವ ನಿಮ್ಮಂಥವರಿಗೆ ಯೋಗ್ಯವಲ್ಲ. ತಾಯಿ, ತಂಗಿ, ಅಕ್ಕ, ಅತ್ತಿಗೆ, ಮಗಳನ್ನು ಕಾಮದೃಷ್ಟಿಯಿಂದ ತಿಳಿವಳಿಕೆ ಇದ್ದವನು ನೋಡಬಾರದು ಎಂಬ ನೀನೇ ಉಪದೇಶಿಸಿರುವೆಯಲ್ಲವೇ? ನಿನ್ನ ಮನಸ್ಸು ತುಂಬಾ ಕಲುಷಿತವಾಗಿರುವುದರಿಂದಲೇ ನೀಚನಾದ ಕಾಮನು ನಿನ್ನ ಚಂಚಲಗೊಳಿಸಿದ. ದಕ್ಷ, ಮರೀಚ ಮುಂತಾದ ನಿನ್ನ ಪುತ್ರರೂ ಸ್ತ್ರೀಯಲ್ಲಿ ಹೇಗೆ ಅಭಿಲಾಷೆಯುಳ್ಳವರಾದರು? ಮೂಢನಾದ ಮನ್ಮಥ ತಿಳಿವಳಿಕೆಯಿಲ್ಲದೆ, ದೇಶಕಾಲಗಳನ್ನು ತಿಳಿಯದೇ ಉದ್ಧಟತನವನ್ನಾಶ್ರಯಿಸಿ ನಿಮ್ಮೆಲ್ಲರನ್ನೂ ತನ್ನ ಬಾಣಗಳಿಂದ ಕಾಮವಿಕಾರವುಳ್ಳವರನ್ನಾಗಿ ಮಾಡಿದ್ದಾನೆ. ಯಾರ ಮನಸ್ಸನ್ನು ಕಾಮಿನಿಯು ಅಪಹರಿಸಿ, ಅಸ್ಥಿರವಾದ ವಿಷಯಕೂಪದಲ್ಲಿ ಮುಳುಗಿಸುವಳೋ, ಅಂತಹ ಮನಸ್ಸುಳ್ಳವನ ಶಾಸ್ತ್ರಜ್ಞಾನಕ್ಕೆ ಧಿಕ್ಕಾರವಿರಲಿ, ಅವನು ತಿಳಿದಿರುವುದೆಲ್ಲವೂ ವ್ಯರ್ಥವೆನಿಸುತ್ತೆ' ಎಂದು ಪರಮಾತ್ಮ ಛೀಮಾರಿ ಹಾಕಿದ.

ಶಿವನ ಮಾತುಗಳನ್ನು ಕೇಳಿ ಬ್ರಹ್ಮನಾದ ನಾನು ನಾಚಿಕೆಯಿಂದ ಮತ್ತಷ್ಟು ಹೆಚ್ಚಾದ ಬೆವರುಗಳುಳ್ಳವನಾಗಿ ತುಂಬಾ ಲಜ್ಜೆಗೊಂಡೆ. ನಾನು ಕಾಮೇಚ್ಛೆಯಿಂದ ಸುಂದರಿಯಾದ ಸಂಧ್ಯೆಯನ್ನು ಸ್ವೀಕರಿಸಬೇಕೆಂಬ ಇಚ್ಛೆಯುಳ್ಳವನಾಗಿದ್ದರೂ ಶಿವನ ಹೆದರಿಕೆಯಿಂದ ಮನಸ್ಸನ್ನು ಬಿಗಿಹಿಡಿದು ಕಾಮವಿಕಾರವನ್ನು ತ್ಯಜಿಸಿದೆ. ಆಗ ನನ್ನ ಶರೀರದಿಂದ ಬೆವರನೀರು ಕೆಳಗೆ ಬಿದ್ದಿತು. ಅದರಿಂದ ಅಗ್ನಿಷ್ವಾತ್ತರು ಎಂಬ ಪಿತೃದೇವತೆಗಳು ಮತ್ತು ಬರ್ಹಿಷದರು ಎಂಬ ಪಿತೃಗಣಗಳೂ ಜನಿಸಿದುವು.

ಪಿತೃದೇವತೆಗಳೆಲ್ಲರೂ ಅಂಜನಖಂಡದಂತೆ ಕಪ್ಪುವರ್ಣದವರಾಗಿದ್ದರು. ಅವರಲ್ಲಿ ಕೆಲವರು ಸಂಸಾರದಲ್ಲಿ ವಿರಕ್ತರಾದ ಮಹಾಯೋಗಿಗಳಾಗಿದ್ದರೆ, ಇನ್ನೂ ಕೆಲವರು ಕರ್ಮಯೋಗಿಗಳಾಗಿದ್ದರು. ಅವರಲ್ಲಿ ಅಗ್ನಿಷ್ವಾತ್ತರು ಎಂಬ ಪಿತೃದೇವತೆಗಳು ಅರವತ್ತು ನಾಲ್ಕು ಸಾವಿರ ಸಂಖ್ಯೆಯಲ್ಲಿದ್ದರೆ, ಬರ್ಹಿಷದರು ಎಂಬ ಪಿತೃಗಣಗಳು ಎಂಬತ್ತಾರು ಸಾವಿರ ಇದ್ದರು. ಇಂಥ ಸಂದರ್ಭದಲ್ಲಿ ದಕ್ಷಪ್ರಜಾಪತಿಯ ಶರೀರದಿಂದಲೂ ಬೆವರನೀರು ಬಿದ್ದಿತು. ಅದರಿಂದ ಸಕಲ ಗುಣಪರಿಪೂರ್ಣಳಾದ ಓರ್ವ ಉತ್ತಮ ಸ್ತ್ರೀ ಜನಿಸಿದಳು. ಅವಳು ತೆಳ್ಳನೆ ಬಳುಕುವ ಶರೀರವುಳ್ಳ, ಕೋಮಲವಾದ ನಡುವುಳ್ಳ, ಸೂಕ್ಷ್ಮವಾದ ರೋಮಪಂಕ್ತಿಯಿಂದ ಕೂಡಿದ, ಮನೋಹರವಾದ ದಂತಪಂಕ್ತಿಯುಳ್ಳ, ಪುಟಕ್ಕೆ ಹಾಕಿದ ಚಿನ್ನದಂತೆ ಶರೀರಕಾಂತಿಯುಳ್ಳವಳಾಗಿದ್ದಳು. ಅವಳ ಹೆಸರು ರತಿದೇವಿ. ಅವಳು ವಿರಕ್ತರಾದ ಮುನಿಗಳನ್ನೂ ಮೋಹಗೊಳಿಸುವಷ್ಟು ಸುಂದರಿಯಾಗಿದ್ದಳು.

ಅವಳನ್ನು ನೋಡಿದ ಮರೀಚಿ ಮೊದಲಾದ ಆರು ಜನ ಮುನಿಗಳು ತಮ್ಮ ಇಂದ್ರಿಯಗಳನ್ನು ನಿಗ್ರಹಿಸಿ ಕಾಮವಿಕಾರವನ್ನು ತಡೆದರು. ಕ್ರತುಮುನಿ, ವಸಿಷ್ಠ, ಪುಲಸ್ತ್ಯ, ಅಂಗಿರಸ್ಸು ಕಾಮವಿಕಾರಕ್ಕೆ ತುತ್ತಾಗಿ, ಅವರ ವೀರ್ಯವು ಭೂಮಿಯಲ್ಲಿ ಬಿದ್ದಿತು. ಆ ವೀರ್ಯದಿಂದ ಸೋಮಪರು, ಆಜ್ಯಪರು, ಸುಕಾಲಿ ಮತ್ತು ಹವಿಷ್ಮಂತ ಎಂಬ ನಾಲ್ಕು ವಿಧದ ಕೆಲವು ಪಿತೃದೇವತೆಗಳು ಜನಿಸಿದರು. ಇವರೆಲ್ಲರೂ ಶ್ರಾದ್ಧದಲ್ಲಿನ ಕವ್ಯ(ಹವಿಸ್ಸು)ವನ್ನು ಸೇವಿಸುವರು.

ಪದಬಂಧ 4964

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬರದಲ್ಲಿಯೇ ಹೊರದೂಡುವಿಕೆ! (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡುವಾಗ ತೋರಿದ ಸಲಿಗೆ (3)
7.ಪದರದೊಳಗೆ ಮೋಕ್ಷ ಕಂಡೀತೇ? (2)
9.ಶಿಷ್ಯನಿಗೆ ವಿದ್ಯೆಯನ್ನು ಕಲಿಸುವವನು (2)
12.ಕಾಮನನ್ನು ಹೀಗೂ ಕರೆವರು (2)
13.ಜನನಿ ನುಡಿದಿರುವ ಸತ್ಯ (2)
15.ಶಿವನ ಇನ್ನೊಂದು ಹೆಸರು (3)
17.ಹೊಗಳಿಕೆಯ ವಿರುದ್ಧ ಪದ (4)
18.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ
1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಕಾರು ಏರಿದವ ಹಬ್ಬಿಸಿದ ಸುಳ್ಳು ಸುದ್ದಿ! (3)
6.ಧಣಿಗೆ ಆಗಿರುವ ಆಯಾಸ (3)
8.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
11.ಲಾಂಗೂಲವಿರುವ ಹುಡುಗ! (3)
12.ಮಾತೆಯಲ್ಲಿರುವ ಗೌರವ (3)
14.ಜನರು ಗಲಿಬಿಲಿಯಿಂದ ಏರಿದ ವೇದಿಕೆ! (3)
15.ಅಂಕೆಗೆ ಸಿಕ್ಕದಿರುವಾಗ ಮೂಡಿದ ಅನುಮಾನ! (2)
16.ಕಾಮನ ಪತ್ನಿ (2)

1			2	■	3			4
	■	■	5	6		■	■	
7	8	■	■		■	■	9	10
■		■	■		■	■		■
■		■	■	■	■	■		■
■		■	■	11	■	■		■
12		■	■		■	■	13	14
	■	■	15		16	■	■	
17				■	18			

4963ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾದ್ವಾರ 3.ಗರ್ವ
4.ನವದಂಪತಿ 6.ನಗು
8.ಕಾಮನೆ 10.ಪಾಪು
12.ಮರಣಕಾಲ 14.ಹೊಗೆ
15.ಮಿಲಾಕತ್ತು

ಮೇಲಿಂದ ಕೆಳಕ್ಕೆ:
1.ಮತದಾನ 2.ರಸನ
3.ಗರತಿ 5.ದಂಡನೆ
7.ಗುರಿ 8.ಕಾರಣ
9.ದಪಾ 11.ಪುರುಸತ್ತು
12.ಮಲ್ಲಿಗೆ 13.ಲಕುಮಿ

ಸುಡೊಕು 5350

		4			1			3
		1				6		
5			8		9		4	7
		5	4			3		
	6			9			7	
3					8	5		9
4	1			8			3	
		2	7		4	9		1
7		9		3			2	

5349 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣಷಷ್ಠಿ ಗಂ. 15-00 ನಕ್ಷತ್ರ: ಶ್ರವಣ ಗಂ. 23-46 ಯೋಗ: ಶುಕ್ಲ ಗಂ. 08-11, ಕರಣ: ವಣಿಜ ಗಂ. 15-00, ವೃಷಭ ಮಾಸದ 06 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 19 ಶವ್ವಾಲ್
ಅದೃಷ್ಟ ಸಂಖ್ಯೆ : 9, 13

ಮೇಷ: ಬಹುಸಮಯದಲ್ಲಿನ ಹಿತಶತ್ರುಗಳ, ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು. ಆದರೇ ನೀವು ಹೆದರುವ ಅವಶ್ಯವಿಲ್ಲ. ಅವಮಾನಿಸಿದ-ವರಿಂದ ಗೌರವ ಪಡೆಯುವ ಕಾಲವನ್ನು ನಿರೀಕ್ಷಿಸಬಹುದು.

ವೃಷಭ: ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿದಲ್ಲಿ ನಿಮ್ಮ ಅಸ್ತಿತ್ವ ಮತ್ತು ನೆಮ್ಮದಿ ಉಳಿದುಕೊಳ್ಳುವುದು. ಬಂಧುಗಳು ಸಂಬಂಧ ಕೋರಿ ನಿಮ್ಮ ಮನೆಗೆ ಬರಲಿದ್ದಾರೆ. ಒಪ್ಪಿಗೆಯಂತೆ ವಿವಾಹ ನಡೆಸುವಿರಿ.

ಮಿಥುನ: ಮೇಲಧಿಕಾರಿ ಅಥವಾ ಹಿರಿಯರಲ್ಲಿ ಮುಖ್ಯ ವಿಚಾರ ಮಾತನಾಡುವಾಗ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ಮನದ ಭಾವನೆಯನ್ನು ತೆರೆದಿಡಿ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮದ ಅಗತ್ಯವಿದೆ.

ಕರ್ಕಾಟಕ: ಇಂದು ಗ್ರಹಗಳ ಚಲನೆಯಿಂದ ಸುಖಮಯ ಜೀವನ ನಡೆಸಲು ಅನುಕೂಲ. ನಿಮ್ಮ ಹಳೆಯ ಸ್ನೇಹಿತನ ಆಕಸ್ಮಿಕ ಭೇಟಿಯು ಈ ದಿನ ಸಂತಸವನ್ನು ಉಂಟುಮಾಡುವುದು. ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ಲಾಭವಾಗುವುದು.

ಸಿಂಹ: ನಾಳೆಯ ನಿಮ್ಮ ಯೋಜನೆಗಳ ಪೂರೈಕೆಗೆ ಸಮಯ ದೊರಕುವಂತೆ ಯೋಜನೆ ಹಾಕಿಕೊಳ್ಳುವುದು ಉತ್ತಮ. ನಿಮ್ಮ ಆಲೋಚನೆಗಳು ಮೆಚ್ಚುಗೆಗೆ ಪಾತ್ರವಾಗಲಿದೆ. ವ್ಯಾಪಾರ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಲಾಭ.

ಕನ್ಯಾ: ಈ ದಿನ ಕೆಲಸ ಕಾರ್ಯಗಳಲ್ಲಿ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆಯುತ್ತದೆ. ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗುವ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸುವ ಹೋರಾಟವನ್ನು ಮಾಡಿ. ಮಹಾಗಣಪತಿ ಆರಾಧನೆ ಉತ್ತಮ.

ತುಲಾ: ಬರವಣಿಗೆಯಲ್ಲಿ ಉತ್ಸಾಹ ಹೆಚ್ಚುವುದು. ಸಂಶೋಧಕರರಿಗೆ ಅಧ್ಯಯನಕ್ಕೆ ಅನುಕೂಲಕರವಾದ ಪುಸ್ತಕ ದೊರೆಯಲಿದೆ. ಸಂದರ್ಭಕ್ಕನುಗು-ಣವಾದ ತೀರ್ಮಾನ ಅನಿವಾರ್ಯವಾಗುವುದು ಮತ್ತು ಸರಿಯಾಗುವುದು.

ವೃಶ್ಚಿಕ: ಖರ್ಚು ವೆಚ್ಚಗಳ ಮೇಲೆ ಬಿಗಿ ಹಿಡಿತ ಸಾಧಿಸಬೇಕಾಗುತ್ತದೆ. ವೃತ್ತಿ ಬದಲಾವಣೆಯ ಆಲೋಚನೆಯಿಂದ ನಿಮ್ಮ ಯಾವುದೇ ಸಮಸ್ಯೆ ನಿವಾರಣೆ ಆಗುವುದಿಲ್ಲ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

ಧನು: ನಿಮ್ಮ ಕಾರ್ಯದೊತ್ತಡದಲ್ಲಿ ಮನೆಯ ವಿಚಾರಗಳತ್ತಲೂ ಗಮನ-ಹರಿಸುವುದು ಮುಖ್ಯವಾಗುವುದು. ಯಾವುದೇ ಸ್ವಾರ್ಥ ಅಪೇಕ್ಷೆ ಇಲ್ಲದೇ ಮಾಡುತ್ತಿರುವ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿಯಾಗಿರುತ್ತದೆ.

ಮಕರ: ಪ್ರಯಾಣದಿಂದ ಲಾಭ ಪಡೆಯುವಿರಿ. ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವಾಗ ಎಚ್ಚರವಹಿಸುವುದು ಉತ್ತಮ. ನಿಮ್ಮ ನಿಜವಾದ ಗೆಳೆಯ ಯಾರೆಂಬುವುದು ಈ ದಿನದ ಸಂದರ್ಭಗಳು ನಿಮಗೆ ತಿಳಿಸಲಿದೆ.

ಕುಂಭ: ಮನೆಯಲ್ಲಿ ಶಿಶುವಿನ ಜನನದಿಂದ ಸಂಸಾರದಲ್ಲಿ ಸಂತೋಷ ತುಂಬಿರುತ್ತದೆ. ಹೊಸ ಸ್ಥಳದಲ್ಲಿ ಶಿಕ್ಷಕ ವೃತ್ತಿ ಆರಂಭಿಸುವಿರಿ. ವೈದ್ಯರಿಗೆ ಹೆಚ್ಚು ಆದಾಯವಿರುವುದು. ಬಾಕಿಯಿರುವ ಕೆಲಸ ಪೂರ್ತಿಗೊಳಿಸಲು ಈ ದಿನ ಪ್ರಶಸ್ತ.

ಮೀನ: ಇಂದು ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕ. ಆತುರ ಬೇಡ. ಕೆಲಸದ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚಲಿವೆ. ನಿಮ್ಮ ಮುಂದಿರುವ ಗುರಿಯತ್ತ ಸಂಪೂರ್ಣ ಗಮನ ಹರಿಸಿ.

ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆ: ಸುಪ್ರೀಂ ಕೋರ್ಟ್ ಅಭಿಪ್ರಾಯ

‘ಮಿಶ್ರ ಧಾರ್ಮಿಕ ಲಕ್ಷಣ ಹೊಸತಲ್ಲ’

ನವದೆಹಲಿ (ಪಿಟಿಐ): ಪೂಜಾ ಸ್ಥಳದ ಧಾರ್ಮಿಕ ಲಕ್ಷಣಗಳನ್ನು ಖಚಿತಪಡಿಸಿಕೊಳ್ಳುವುದನ್ನು 1991ರ ಪೂಜಾ ಸ್ಥಳ ಕಾಯ್ದೆಯಲ್ಲಿ ನಿರ್ಬಂಧಿಸಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜ್ಞಾನವಾಪಿ ಮಸೀದಿಯಲ್ಲಿ ವಿಡಿಯೊ ಸಮೀಕ್ಷೆ ನಡೆಸಲು ವಾರಾಣಸಿ ಸಿವಿಲ್ ನ್ಯಾಯಾಲಯವು ನೀಡಿದ್ದ ಆದೇಶವನ್ನು ಪ್ರಶ್ನಿಸಿ, ಜ್ಞಾನವಾಪಿ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

‘ಈ ಕಾಯ್ದೆಯನ್ನು ಅಯೋಧ್ಯೆ ಪ್ರಕರಣದಲ್ಲಿ ಅನ್ವಯಿಸಲಾಗಿದೆ. ಪೂಜಾ ಸ್ಥಳದಲ್ಲಿನ ಧಾರ್ಮಿಕ ಲಕ್ಷಣಗಳನ್ನು ಖಚಿತಪಡಿಸಿಕೊಳ್ಳುವುದನ್ನು ಈ ಕಾಯ್ದೆಯ 3ನೇ ಸೆಕ್ಷನ್ ನಿರ್ಬಂಧಿಸುವುದಿಲ್ಲ’ ಎಂದು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿದ್ದ ಪೀಠವು ಹೇಳಿದೆ. ಅಯೋಧ್ಯೆ ಪ್ರಕರಣವನ್ನು ನಿರ್ವಹಿಸಿದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಚಂದ್ರಚೂಡ್ ಸಹ ಇದ್ದರು.

‘ಪಾರ್ಸಿಗಳ ಅಗ್ನಿದೇವಾಲಯವಿದೆ (ಅಗಿಯಾರಿ) ಎಂದಿಟ್ಟುಕೊಳ್ಳಿ. ಆ ದೇವಾಲಯದ ಸಂಕೀರ್ಣದ ಬೇರೆಡೆ ಶಿಲುಬೆ ಇದೆ ಎಂದಿಟ್ಟುಕೊಳ್ಳಿ. ದೇವಾಲಯ ಇದ್ದ ಕಾರಣಕ್ಕೆ ಶಿಲುಬೆಯು ಅಗಿಯಾರಿ ಆಗಿಬಿಡುತ್ತದೆಯೇ? ಶಿಲುಬೆ ಇರುವ ಮಾತ್ರಕ್ಕೆ ಅಗ್ನಿದೇವಾಲಯವು ಕ್ರೈಸ್ತರ ಪ್ರಾರ್ಥನೆಯ ಸ್ಥಳವಾಗಿಬಿಡುತ್ತದೆಯೇ? ಈ ರೀತಿಯ ಮಿಶ್ರ ಲಕ್ಷಣಗಳು ಇದ್ದರೆ, ವ್ಯಾಜ್ಯದ ಈ ವೇದಿಕೆಯನ್ನು ಮರೆತುಬಿಡಿ. ಈ ರೀತಿಯ ಮಿಶ್ರ ಲಕ್ಷಣಗಳು ಭಾರತಕ್ಕೆ ಹೊಸದೇನಲ್ಲ’ ಎಂದು ಪೀಠವು ಹೇಳಿದೆ. ‘1991ರ ಕಾಯ್ದೆ ಏನೆಂದು ಗುರುತಿಸುತ್ತದೆಯೆಂದರೆ, ಶಿಲುಬೆಯ ಇರುವಿಕೆ ಪಾರ್ಸಿ ದೇವಾಲಯವನ್ನು ಕ್ರೈಸ್ತ ಪ್ರಾರ್ಥನಾ ಸ್ಥಳವನ್ನಾಗಿಸುವುದಿಲ್ಲ. ಪಾರ್ಸಿ ಧಾರ್ಮಿಕ ಗುರುತು ಕ್ರೈಸ್ತ ಪ್ರಾರ್ಥನಾ ಸ್ಥಳವನ್ನು ಪಾರ್ಸಿ ದೇವಾಲಯವನ್ನಾಗಿಸುವುದಿಲ್ಲ’ ಎಂದು ಪೀಠವು ಹೇಳಿದೆ.

ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದಂತೆ ಅಧೀನ ನ್ಯಾಯಾಲಯವು ನಡೆಸುತ್ತಿರುವ ವಿಚಾರಣೆಯೂ ನಡೆಯಲಿ. ಹಾಗೆಂದು ಈ ಅರ್ಜಿಯನ್ನು ನಾವು ವಿಲೇವಾರಿ ಮಾಡುವುದಿಲ್ಲ. ಬದಲಿಗೆ ಈ ಅರ್ಜಿಯ ವಿಚಾರಣೆಯನ್ನು ನಾವು ಕಾಯ್ದಿರಿಸುತ್ತೇವೆ ಎಂದು ಪೀಠವು ಹೇಳಿದೆ.

ವಿಡಿಯೊ ಸಮೀಕ್ಷೆಯ ಆಯ್ದ ಮಾಹಿತಿಗಳು ಮಾಧ್ಯಮಗಳಿಗೆ ಸೋರಿಕೆಯಾಗುವುದು ನಿಲ್ಲಬೇಕು ಎಂದು ಪೀಠ ಹೇಳಿದೆ.

ಜಿಲ್ಲಾ ನ್ಯಾಯಾಲಯಕ್ಕೆ ವಿಚಾರಣೆ

ಜ್ಞಾನವಾಪಿ ಮಸೀದಿಯಲ್ಲಿ ಹಿಂದೂ ಧಾರ್ಮಿಕ ಕುರುಹುಗಳಿದ್ದು, ಅಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಿ ಎಂದು ಹಿಂದೂ ಮಹಿಳೆಯರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿಸಿ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

‘ವಿಷಯದ ಸಂಕೀರ್ಣತೆ ಮತ್ತು ಸೂಕ್ಷ್ಮತೆ ದೃಷ್ಟಿಯಿಂದ ಈ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಂಗ ವ್ಯವಸ್ಥೆಯ ಹಿರಿಯ ಅಧಿಕಾರಿ ನಡೆಸುವುದು ಸೂಕ್ತ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಧಾರ್ಮಿಕ ಸ್ಥಳವನ್ನು ಸಿವಿಲ್ ವ್ಯಾಜ್ಯಕ್ಕೆ ಒಳಪಡಿಸಲು ಅವಕಾಶವಿಲ್ಲ ಎಂದು ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿ ವಿಚಾರಣೆಗೆ ಯೋಗ್ಯವಿದೆಯೇ ಎಂಬುದನ್ನು ಜಿಲ್ಲಾ ನ್ಯಾಯಾಲಯವು ಮೊದಲು ನಿರ್ಧರಿಸಲಿ ಎಂದೂ ಪೀಠ ಹೇಳಿದೆ.

ಶಿವಲಿಂಗ ಇದೆ ಎನ್ನಲಾಗಿರುವ ಪ್ರದೇಶಕ್ಕೆ ಭದ್ರತೆ ನೀಡಬೇಕು ಮತ್ತು ಮಸೀದಿ ಆವರಣದಲ್ಲಿ ಮುಸ್ಲಿಮರಿಗೆ ನಮಾಜ್ ಮಾಡಲು ಅವಕಾಶ ನೀಡಬೇಕು ಎಂಬ ಆದೇಶ ಮುಂದುವರೆಯಲಿದೆ. ಮಸೀದಿಗೆ ನಮಾಜು ಮಾಡಲು ಬರುವ ಮುಸ್ಲಿಮರಿಗೆ ಶುದ್ಧೀಕರಣ ಮಾಡಿಕೊಳ್ಳಲು ಸರಿಯಾದ ವ್ಯವಸ್ಥೆಗಳನ್ನು ಮಾಡುವಂತೆ ಜಿಲ್ಲಾಧಿಕಾರಿಗೆ ಪೀಠವು ನಿರ್ದೇಶನ ನೀಡಿದೆ.

> ಜ್ಞಾನವಾಪಿ, ಶಾಹಿ ಈದ್ಗಾವನ್ನು ಬಲವಂತದಿಂದ ಪಡೆಯಲು ಪ್ರಯತ್ನಿಸಿದರೆ ದೇಶವ್ಯಾಪಿ ಹೋರಾಟ ಮಾಡಬೇಕಾಗುತ್ತದೆ. ಮುಸ್ಲಿಮರು ಈ ಬಾರಿ ತಲೆಬಾಗುವುದಿಲ್ಲ
>
> **ಹಾಜಿ ಮೆಹಬೂಬ್,** ಬಾಬರಿ ಮಸೀದಿ ಮೊಕದ್ದಮೆ ಅರ್ಜಿದಾರ

ಹೈದರಾಬಾದ್ ಪಶುವೈದ್ಯೆ ಅತ್ಯಾಚಾರ–ಹತ್ಯೆ ಪ್ರಕರಣ: ವರದಿ ಸಲ್ಲಿಸಿದ ತನಿಖಾ ಆಯೋಗ

ದಿಶಾ ಪ್ರಕರಣ: ಎನ್‌ಕೌಂಟರ್ ಉದ್ದೇಶಪೂರ್ವಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈದರಾಬಾದ್‌ನ ಹೊರವಲಯದಲ್ಲಿ ಪಶುವೈದ್ಯೆಯ ಮೇಲೆ ಅತ್ಯಾಚಾರ ಎಸಗಿ ಕೊಂದಿದ್ದ ಪ್ರಕರಣದ ಆರೋಪಿಗಳನ್ನು ಪೊಲೀಸರು ಉದ್ದೇಶಪೂರ್ವಕವಾಗಿಯೇ ಎನ್‌ಕೌಂಟರ್‌ನಲ್ಲಿ ಕೊಂದಿದ್ದಾರೆ. ‘ಗುಂಡು ಹಾರಿಸಿದರೆ ಆರೋಪಿಗಳು ಸಾಯುತ್ತಾರೆ ಎಂದು ಗೊತ್ತಿದ್ದೂ, ಪೊಲೀಸರು ಉದ್ದೇಶಪೂರ್ವಕವಾಗಿ ಗುಂಡು ಹಾರಿಸಿದ್ದಾರೆ’ ಎಂದು ಎನ್‌ಕೌಂಟರ್‌ನ ತನಿಖೆಗೆ ಸುಪ್ರೀಂ ಕೋರ್ಟ್ ನೇಮಿಸಿದ್ದ ತನಿಖಾ ಆಯೋಗವು ತನ್ನ ವರದಿಯಲ್ಲಿ ಹೇಳಿದೆ.

ಎನ್‌ಕೌಂಟರ್‌ನಲ್ಲಿ ಭಾಗಿಯಾಗಿದ್ದ 10 ಪೊಲೀಸ್ ಅಧಿಕಾರಿಗಳನ್ನು ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಪ್ರಕ್ರಿಯೆಗೆ ಒಳಪಡಿಸಬೇಕು ಎಂದು ಆಯೋಗವು ಶಿಫಾರಸು ಮಾಡಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಸಿರ್‌ಪುರ್ಕರ್, ಬಾಂಬೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರೇಖಾ ಸೊಂಡೂರ್ ಬಲ್ಡೋಟಾ ಮತ್ತು ಸಿಬಿಐ ಮಾಜಿ ನಿರ್ದೇಶಕ ಡಿ.ಆರ್. ಕಾರ್ತಿಕೇಯನ್ ಅವರಿದ್ದ ಆಯೋಗವು 387 ಪುಟಗಳ ತನ್ನ ವರದಿಯನ್ನು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತು.

‘ಆರೋಪಿಗಳ ಕೈಗೆ ಕೋಳ ಹಾಕಿರಲಿಲ್ಲ. ಅವರು ನಮ್ಮ ಪಿಸ್ತೂಲು ಕಸಿದುಕೊಂಡು, ತಪ್ಪಿಸಿಕೊಳ್ಳಲು ಯತ್ನಿಸಿದರು. ಜತೆಗೆ ನಮ್ಮತ್ತ ಗುಂಡು ಹಾರಿಸಿದರು. ಆತ್ಮರಕ್ಷಣೆಗಾಗಿ ಆರೋಪಿಗಳತ್ತ ಗುಂಡು ಹಾರಿಸಿದೆವು. ಆಗ ಆರೋಪಿಗಳು ಮೃತಪಟ್ಟರು’ ಎಂದು ಪೊಲೀಸರು ಹೇಳಿಕೆ ನೀಡಿದ್ದರು.

ಆದರೆ ಆಯೋಗವು ತನ್ನ ವರದಿಯಲ್ಲಿ ಈ ಪ್ರತಿಪಾದನೆಯನ್ನು ನಿರಾಕರಿಸಿದೆ. ‘ಆರೋಪಿಗಳು ತಪ್ಪಿಸಿಕೊಳ್ಳುತ್ತಿದ್ದರು ಮತ್ತು ಪೊಲೀಸರತ್ತ ಗುಂಡು ಹಾರಿಸುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಗಳು ತಪ್ಪಿಸಿಕೊಳ್ಳುತ್ತಾ ಪೊಲೀಸರತ್ತ ಗುಂಡು ಹಾರಿಸುವ ಸಾಧ್ಯತೆ ತೀರಾ ಕಡಿಮೆ ಇದೆ. ಪೊಲೀಸರ ಹೇಳಿಕೆಯನ್ನು ನಂಬಲು ಸಾಧ್ಯವಿಲ್ಲ’ ಎಂದು ಆಯೋಗವು ತನ್ನ ವರದಿಯಲ್ಲಿ ಹೇಳಿದೆ.

ವರದಿ ಮುಖ್ಯಾಂಶಗಳು

- ಆರೋಪಿಗಳಾದ ಮೊಹಮ್ಮದ್ ಆರಿಫ್, ಜೊಲ್ಲು ಶಿವ, ಜೊಲ್ಲು ನವೀನ್ ಮತ್ತು ಚಿಂತಕುಂಟ ಚೆನ್ನಕೇಶವುಲು ಅವರ ಬಂಧನದ ವೇಳೆ ಅವರನ್ನು ಏಕೆ ಬಂಧಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಪೊಲೀಸರು ನೀಡಿಲ್ಲ.
- ಎನ್‌ಕೌಂಟರ್ ನಡೆದ ಸಂದರ್ಭದಲ್ಲಿ ಜೊಲ್ಲು ಶಿವ, ಜೊಲ್ಲು ನವೀನ್ ಮತ್ತು ಚಿಂತಕುಂಟ ಚೆನ್ನಕೇಶವುಲು ಅವರಿಗೆ 20 ವರ್ಷ ಎಂದು ಪೊಲೀಸರು ತಮ್ಮ ದಾಖಲೆಗಳಲ್ಲಿ ನಮೂದಿಸಿದ್ದಾರೆ. ಆದರೆ ವಾಸ್ತವದಲ್ಲಿ ಮೂವರಿಗೂ ಆಗ 18 ವರ್ಷ ತುಂಬಿರಲಿಲ್ಲ
- ಪೊಲೀಸರು ಕೊಲ್ಲುವ ಉದ್ದೇಶದಿಂದಲೇ ಸಂಚು ಮಾಡಿದ್ದಾರೆ. ಹೀಗಾಗಿ ಎಲ್ಲರೂ ಅದರ ಯಶಸ್ಸಿಗಾಗಿ ಕೆಲಸ ಮಾಡಿದ್ದಾರೆ. ಹೀಗಾಗಿ 10 ಪೊಲೀಸ್ ಅಧಿಕಾರಿಗಳ ವಿರುದ್ಧ ಕೊಲೆ, ಕೊಲೆಗಾಗಿ ಸಂಚು ಮತ್ತು ಸಾಕ್ಷ್ಯ ನಾಶದ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಬೇಕು
- ಗುಂಪುಹಲ್ಲೆ–ಹತ್ಯೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಹಾಗೆಯೇ ತಕ್ಷಣವೇ ನ್ಯಾಯ ನೀಡುವ ಯತ್ನಗಳನ್ನೂ ಒಪ್ಪಿಕೊಳ್ಳಲೂ ಸಾಧ್ಯವಿಲ್ಲ. ಎಲ್ಲಾ ಸಂದರ್ಭಗಳಲ್ಲೂ ಕಾನೂನಿನ ಆಡಳಿತವೇ ಇರಬೇಕು. ಶಿಕ್ಷೆ ನೀಡುವ ಪ್ರಕ್ರಿಯೆ ಸ್ಥಾಪಿತ ಕಾನೂನಿನ ಅನ್ವಯವೇ ನಡೆಯಬೇಕು

ಅಕ್ರಮ ನೇಮಕಾತಿ: ಶಿಕ್ಷಕಿ ಹುದ್ದೆಯಿಂದ ಸಚಿವರ ಪುತ್ರಿ ವಜಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಶಿಕ್ಷಣ ಸಚಿವರ ಪುತ್ರಿಯನ್ನು ಶಿಕ್ಷಕಿ ಹುದ್ದೆಯಿಂದ ವಜಾ ಮಾಡಿರುವ ಕಲ್ಕತ್ತ ಹೈಕೋರ್ಟ್, ಅವರು ಶಿಕ್ಷಕಿಯಾಗಿ 2018ರಿಂದ 41 ತಿಂಗಳು ಪಡೆದಿದ್ದ ವೇತನವನ್ನು ಎರಡು ಕಂತುಗಳಲ್ಲಿ ವಾಪಸು ಮಾಡಬೇಕು ಎಂದು ಆದೇಶಿಸಿದೆ.

ಶಿಕ್ಷಣ ಸಚಿವ ಪರೇಶ್ ಚಂದ್ರ ಅಧಿಕಾರಿ ಅವರ ಪುತ್ರಿ ಅಂಕಿತಾ ಅಧಿಕಾರಿ ಅವರು ಸರ್ಕಾರಿ ಅನುದಾನಿತ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ನ್ಯಾಯಮೂರ್ತಿ ಅವಿಜಿತ್ ಗಂಗೋಪಾಧ್ಯಾಯ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಜೂನ್ 7ರ ಒಳಗೆ ಮೊದಲ ಮತ್ತು ಜುಲೈ 7ರ ಒಳಗೆ ಎರಡನೇ ಕಂತಿನಲ್ಲಿ ವೇತನವನ್ನು ಹೈಕೋರ್ಟ್ ರಿಜಿಸ್ಟ್ರಾರ್ ಅವರಲ್ಲಿ ಠೇವಣಿ ಇಡಬೇಕು ಎಂದು ತಿಳಿಸಿದೆ. ನೇಮಕಾತಿ ಪರೀಕ್ಷೆಯಲ್ಲಿ ಅಂಕಿತಾ ಅವರಿಗಿಂತ ಹೆಚ್ಚು ಅಂಕ ಪಡೆದಿದ್ದರೂ ತಮಗೆ ಅವಕಾಶ ನಿರಾಕರಿಸಲಾಗಿದೆ ಎಂದು ಅವಕಾಶ ವಂಚಿತ ಅಭ್ಯರ್ಥಿ ಕೋರ್ಟ್ ಮೊರೆ ಹೋಗಿದ್ದರು.

ಪಶ್ಚಿಮ ಬಂಗಾಳ ಶಾಲಾ ಸೇವಾ ಆಯೋಗ (ಎಸ್‌ಎಸ್‌ಸಿ) ಶಿಫಾರಸು ಆಧರಿಸಿ, ಪಶ್ಚಿಮ ಬಂಗಾಳ ಪ್ರೌಢಶಿಕ್ಷಣ ಮಂಡಳಿಯು ಮಾಡಿದ್ದ ನೇಮಕಾತಿಯನ್ನು ಪರಿಗಣಿಸಬಾರದು ಎಂದು ಕೋರ್ಟ್ ಆದೇಶಿಸಿದ್ದು, ಶಾಲಾ ಆವರಣ ಪ್ರವೇಶಿಸದಂತೆ ಶಿಕ್ಷಕಿಗೆ ತಾಕೀತು ಮಾಡಿದೆ.

ಪುತ್ರಿಯ ಅಕ್ರಮ ನೇಮಕಾತಿ ಪ್ರಕರಣ ಕುರಿತ ವಿಚಾರಣೆಗಾಗಿ ಇದಕ್ಕೂ ಮೊದಲು ಸಚಿವರು ಸಿಬಿಐ ಕಚೇರಿಗೆ ಬಂದಿದ್ದರು. ಹೈಕೋರ್ಟ್ ಸೂಚನೆಯಂತೆ ನಿಗದಿತ ಅವಧಿಗೆ ವಿಚಾರಣೆಗೆ ಹಾಜರಾಗದ ಕಾರಣ ಸಿಬಿಐ, ಸಚಿವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿತ್ತು.

ಶಿಕ್ಷಣ ಸಚಿವ ಮತ್ತು ಅವರ ಪುತ್ರಿಯ ವಿರುದ್ಧ ಸಿಬಿಐ, ಐಪಿಸಿ ಸೆಕ್ಷನ್ 420 (ವಂಚನೆ), 120ಬಿ (ಕ್ರಿಮಿನಲ್ ಸಂಚು) ಅನ್ವಯ ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ವಯ ಮೊಕದ್ದಮೆ ದಾಖಲಿಸಿದೆ. ಈ ಪ್ರಕರಣ ಕುರಿತು ಹೈಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿತ್ತು.

ಟಿಎಂಸಿ ರ‍್ಯಾಲಿ: ಸಚಿವ ಪರೇಶ್ ಚಂದ್ರ ಅಧಿಕಾರಿ ಅವರು ಪ್ರತಿನಿಧಿಸುವ ಕ್ಷೇತ್ರ ಬೆಹಲ ಪಶ್ಚಿಮ್‌ನಲ್ಲಿ ಟಿಎಂಸಿ ಪಕ್ಷವು ಶುಕ್ರವಾರ ರ‍್ಯಾಲಿ ನಡೆಯಿತು. ಟಿಎಂಸಿ ಸರ್ಕಾರದ ಸಾಧನೆ ಬಿಂಬಿಸುವುದು ಇದರ ಉದ್ದೇಶ ಎಂದು ಪಕ್ಷ ಹೇಳಿಕೊಂಡಿತು. ಆದರೆ, ಸಾಮಾಜಿಕ ಜಾಲತಾಣದಲ್ಲಿ ಈ ಕುರಿತ ಫೋಟೊ ವೈರಲ್ ಆಗಿದ್ದು, ಸಚಿವರ ವಿರುದ್ಧದ ಸಿಬಿಐ ವಿಚಾರಣೆ ಪ್ರತಿಭಟಿಸುವುದೇ ಉದ್ದೇಶ ಎಂದು ನೆಟ್ಟಿಗರು ಪ್ರತಿಪಾದಿಸಿದ್ದಾರೆ. ಈ ಮಧ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಸಚಿವರು ರಾಜೀನಾಮೆ ನೀಡಬೇಕು ಎಂದು ವಿರೋಧಪಕ್ಷಗಳು ಆಗ್ರಹಪಡಿಸಿವೆ.

ಕೇರಳದ ಒಂಬತ್ತು ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಣೆ

ತಿರುವನಂತಪುರಂ (ಪಿಟಿಐ): ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಭಾರತೀಯ ಹವಾಮಾನ ಇಲಾಖೆಯು ಕೇರಳದ ಒಂಬತ್ತು ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಿಸಿದೆ.

ತಿರುವನಂತಪುರಂ, ಕೊಲ್ಲಂ, ಪತ್ತನಂತಿಟ್ಟ, ಆಲಪ್ಪುಳ, ಎರ್ನಾಕುಳಂ, ಇಡುಕ್ಕಿ, ತ್ರಿಶೂರ್, ಮಲಪ್ಪುರಂ ಮತ್ತು ಕೋಯಿಕ್ಕೋಡ್ ಜಿಲ್ಲೆಗಳಲ್ಲಿ ಸುಮಾರು 6 ರಿಂದ 11 ಸೆಂ.ಮೀ. ಮಳೆಯಾಗುವ ಸಾಧ್ಯತೆ ಇರುವುದರಿಂದ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಕೇರಳ ಹಾಗೂ ಲಕ್ಷದ್ವೀಪದ ಕೆಲವು ಪ್ರದೇಶಗಳಲ್ಲಿ ಗುಡುಗು, ಸಿಡಿಲು ಸಹಿತ ವಿಪರೀತ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೇಂದ್ರ ಸರ್ಕಾರಕ್ಕೆ 8 ವರ್ಷ • ಬಿಜೆಪಿ ಚಿಂತಕರಿಗೆ ಪ್ರಧಾನಿ ಮೋದಿ ಸಲಹೆ

ಮುಂದಿನ 25 ವರ್ಷಕ್ಕೆ ಗುರಿ ನಿಗದಿಪಡಿಸಿ

ಜೈಪುರ (ಪಿಟಿಐ): ‘ಕೇಂದ್ರ ಸರ್ಕಾರವು ಎಂಟು ವರ್ಷಗಳಲ್ಲಿ ದೇಶಕ್ಕೆ ಉತ್ತಮ ಆಡಳಿತ ನೀಡಿದೆ. ಸಾಮಾಜಿಕ ನ್ಯಾಯವನ್ನೂ ಕಲ್ಪಿಸುತ್ತಿದೆ. ಬಿಜೆಪಿಯು ಮುಂದಿನ 25 ವರ್ಷಕ್ಕೆ ಗುರಿ ನಿಗದಿಪಡಿಸಲು, ಆ ನಿಟ್ಟಿನಲ್ಲಿ ಕೆಲಸ ಮಾಡಲು ಇದು ಸಕಾಲ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕೇಂದ್ರ ಸರ್ಕಾರವು 8 ವರ್ಷಗಳ ಆಡಳಿತ ಪೂರ್ಣಗೊಳಿಸಿದ ಸಂದರ್ಭ ಅವರು ಇಲ್ಲಿ ಪಕ್ಷದ ಪದಾಧಿಕಾರಿಗಳನ್ನು ಉದ್ದೇಶಿಸಿ ವರ್ಚುವಲ್ ಮೂಲಕ ಮಾತನಾಡಿದರು.

‘ಪ್ರಸ್ತುತ, ವಿರೋಧ ಪಕ್ಷಗಳು ದೇಶದ ಗಮನವನ್ನು ಅಭಿವೃದ್ಧಿಯಿಂದ ಬೇರೆಡೆಗೆ ಸೆಳೆಯಲು ಯತ್ನಿಸುತ್ತಿವೆ. ನಮ್ಮ ಪಕ್ಷದ ಮುಖಂಡರು ಇಂತಹ ಹುನ್ನಾರಗಳಿಗೆ ಬಲಿಯಾಗದೇ ರಾಷ್ಟ್ರ ಹಿತದ ಮುಖ್ಯ ವಿಷಯಗಳಿಗೆ ಬದ್ಧರಾಗಬೇಕು’ ಎಂದು ಹೇಳಿದರು.

ಬಿಜೆಪಿಯು ಅಭಿವೃದ್ಧಿಯನ್ನು ರಾಷ್ಟ್ರ ರಾಜಕಾರಣದ ಮುನ್ನೆಲೆಗೆ ತಂದಿದೆ. ಆದರೆ, ಕೆಲ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿಗಾಗಿ ದೇಶದ ಭವಿಷ್ಯದ ಜೊತೆಗೆ ಆಟವಾಡುತ್ತಿವೆ ಎಂದು ಅವರು, ಯಾವುದೇ ಪಕ್ಷದ ಹೆಸರು ಉಲ್ಲೇಖಿಸದೇ ಟೀಕಿಸಿದರು.

‘ದೇಶದ ಎಲ್ಲ ಭಾಷೆಗಳು ‘ಭಾರತೀಯ’

ಜೈಪುರ (ಪಿಟಿಐ): ‘ಭಾರತದ ಎಲ್ಲ ಭಾಷೆಗಳು ‘ಭಾರತೀಯ’ ಎಂದು ಬಿಜೆಪಿ ಪರಿಗಣಿಸಲಿದೆ ಮತ್ತು ಗೌರವಿಸಲು ಅರ್ಹವಾದುದು ಎಂದು ಭಾವಿಸಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾಷೆಯ ವಿಷಯದಲ್ಲಿ ಪ್ರಚೋದನೆ ಉಂಟು ಮಾಡುವ ಯತ್ನಗಳ ವಿರುದ್ಧ ಜನರನ್ನು ಜಾಗೃತಗೊಳಿಸಬೇಕು ಎಂದು ಪಕ್ಷದ ಮುಖಂಡರಿಗೆ ಕರೆ ನೀಡಿದರು. ‘ಪ್ರತಿ ಭಾಷೆಯಲ್ಲಿಯೂ ಭಾರತೀಯ ಸಂಸ್ಕೃತಿ ಪ್ರತಿಬಿಂಬಿಸುವುದನ್ನು ಬಿಜೆಪಿ ಕಾಣುತ್ತಿದೆ’ ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ಸ್ಥಳೀಯ ಭಾಷೆಗಳಿಗೆ ಪ್ರಾಧ್ಯಾನ್ಯತೆ ನೀಡಲಾಗಿದೆ. ಇದು, ಎಲ್ಲ ಭಾಷೆಗಳ ಕುರಿತು ನಮಗಿರುವ ಬದ್ಧತೆಯಾಗಿದೆ. ರಾಷ್ಟ್ರೀಯ ಹೆಮ್ಮೆಯಾಗಿ ದೇಶದ ಸಂಸ್ಕೃತಿ, ಭಾಷಾ ವೈವಿಧ್ಯವನ್ನು ಬಿಂಬಿಸಿದ್ದೇ ಬಿಜೆಪಿ ಎಂದು ಪ್ರತಿಪಾದಿಸಿದರು.

ಸಂಕ್ಷಿಪ್ತ ಸುದ್ದಿ

ಲಾಲು ವಿರುದ್ಧ ಹೊಸ ಪ್ರಕರಣ

ನವದೆಹಲಿ (ಪಿಟಿಐ): ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಸಿಬಿಐ ಹೊಸ ಪ್ರಕರಣ ದಾಖಲಿಸಿದ್ದು, ದೆಹಲಿ, ಪಟ್ನಾ ಮತ್ತು ಗೋಪಾಲಗಂಜ್‌ನ 16 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ.

ಯುಪಿಎ ಸರ್ಕಾರದ ಅವಧಿಯಲ್ಲಿ ರೈಲ್ವೆ ಸಚಿವರಾಗಿದ್ದ ಲಾಲು ಅವರು ರೈಲ್ವೆ ಉದ್ಯೋಗಾಕಾಂಕ್ಷಿಗಳಿಂದ ಉದ್ಯೋಗಕ್ಕೆ ಪ್ರತಿಯಾಗಿ ಭೂಮಿಯನ್ನು ಪಡೆದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಈ ಆರೋಪಕ್ಕೆ ಸಂಬಂಧಿಸಿದಂತೆ ಲಾಲು, ಅವರ ಪತ್ನಿ ರಾಬ್ಡಿ ದೇವಿ, ಪುತ್ರಿಯರಾದ ಮೀಸಾ, ಹೇಮಾ ಅವರ ವಿರುದ್ಧ ಐಪಿಸಿ ಕಲಂ 120–ಬಿ ಅಡಿಯಲ್ಲಿ ಕ್ರಿಮಿನಲ್ ಪಿತೂರಿ, ಭ್ರಷ್ಟಾಚಾರ ತಡೆ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಜೈಲಿನಿಂದ ಆಜಂ ಖಾನ್ ಬಿಡುಗಡೆ

ಸೀತಾಪುರ (ಉತ್ತರ ಪ್ರದೇಶ) (ಪಿಟಿಐ): ವಂಚನೆ ಪ್ರಕರಣದಲ್ಲಿ ಜೈಲು ಸೇರಿದ್ದ ಸಮಾಜವಾದಿ ಪಕ್ಷದ ಹಿರಿಯ ನಾಯಕ ಆಜಂ ಖಾನ್ ಅವರು ಶುಕ್ರವಾರ ಬೆಳಿಗ್ಗೆ ಬಿಡುಗಡೆಯಾದರು. ಗುರುವಾರ ಸುಪ್ರೀಂಕೋರ್ಟ್ ಖಾನ್ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು.

ಆಜಂ ಖಾನ್ ಅವರ ಬಿಡುಗಡೆಯನ್ನು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಪ್ರಗತಿಶೀಲ ಸಮಾಜವಾದಿ ಪಕ್ಷದ ನಾಯಕ ಶಿವಪಾಲ್ ಯಾದವ್ ಸೇರಿದಂತೆ ಅಸಂಖ್ಯಾತ ಬೆಂಬಲಿಗರು ಸ್ವಾಗತಿಸಿದ್ದಾರೆ.

ಇಂದ್ರಾಣಿ ಮುಖರ್ಜಿ ಬಿಡುಗಡೆ

ನವದೆಹಲಿ(ಪಿಟಿಐ): 2012ರ ಶೀನಾ ಬೋರಾ ಕೊಲೆ ಪ್ರಕರಣದ ಪ್ರಮುಖ ಆರೋಪಿ ಇಂದ್ರಾಣಿ ಮುಖರ್ಜಿ ಅವರು ಶುಕ್ರವಾರ ಮುಂಬೈನ ಭಾಯಕಳಾ ಮಹಿಳಾ ಕಾರಾಗೃಹದಿಂದ ಬಿಡುಗಡೆಯಾಗಿದ್ದಾರೆ.

ತನ್ನ ಪುತ್ರಿಯ ಕೊಲೆ ಪ್ರಕರಣದಲ್ಲಿ ಕಳೆದ 6 ವರ್ಷಗಳಿಂದ ಜೈಲು ಶಿಕ್ಷೆ ಅನುಭವಿಸುತ್ತಿರುವ ಇಂದ್ರಾಣಿ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಜಾಮೀನು ನೀಡಿತ್ತು. ಆದರೆ, ಜೈಲಿನಿಂದ ಬಿಡುಗಡೆಯ ಪ್ರಕ್ರಿಯೆಗಳು ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ, ಅವರ ಬಿಡುಗಡೆ ವಿಳಂಬವಾಯಿತು ಎನ್ನಲಾಗಿದೆ.

ಕಾರ್ಮಿಕ ಸಾವು; 9 ಮಂದಿ ನಾಪತ್ತೆ

ಜಮ್ಮು: ರಾಂಬನ್ ಜಿಲ್ಲೆಯ ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ (ಎನ್‌ಎಚ್‌–44)ನಿರ್ಮಾಣ ಹಂತದ ಸುರಂಗ ಕುಸಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದು, ಮೂವರನ್ನು ರಕ್ಷಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಯ ರಾಂಬನ್ ಸಮೀಪದ ಖೂನಿ ನಲ್ಲಾ ಎಂಬಲ್ಲಿ ಗುರುವಾರ ತಡರಾತ್ರಿ ಈ ಘಟನೆ ನಡೆದಿದೆ. ಕಾಮಗಾರಿ ನಿರ್ವಹಿಸುತ್ತಿದ್ದ ಸರ್ಲಾ ಕಂಪನಿಯ 11ರಿಂದ 12 ಮಂದಿ ಕಾರ್ಮಿಕರು ಅವಶೇಷಗಳಡಿ ಸಿಲುಕಿದ್ದು, ಜಿಲ್ಲಾಡಳಿತವು ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆ ನಡೆಸಿ ಬಂಡೆಗಳಡಿ ಸಿಲುಕಿದ್ದ ಮೂವರನ್ನು ರಕ್ಷಿಸಿದೆ.

‘ಶುಕ್ರವಾರ ಮಧ್ಯಾಹ್ನದ ವೇಳೆಗೆ ಕಾರ್ಮಿಕನ ಮೃತದೇಹ ಪತ್ತೆಯಾಗಿದೆ. ಅವಶೇಷಗಳಡಿ ಇನ್ನೂ 9 ಮಂದಿ ಸಿಲುಕಿದ್ದು, ಅವರೆಲ್ಲ ಬದುಕುಳಿಯುವ ಸಾಧ್ಯತೆ ಕಡಿಮೆ.’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಚೀನಾದಿಂದ ಸೇತುವೆ ನಿರ್ಮಾಣ ಯತ್ನ: ಕ್ರಮಕ್ಕೆ ರಾಹುಲ್ ಆಗ್ರಹ

ನವದೆಹಲಿ (ಪಿಟಿಐ): ‘ದೇಶದ ಭದ್ರತೆ, ಗಡಿ ರಕ್ಷಣೆಯ ವಿಷಯದಲ್ಲಿ ರಾಜಿಗೆ ಅವಕಾಶವಿಲ್ಲ.ಪ್ರಧಾನಿನರೇಂದ್ರಮೋದಿಅವರು ದೇಶದ ಗಡಿ ರಕ್ಷಣೆಗೆ ಬದ್ಧತೆ ತೋರಬೇಕು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ.

ಪೂರ್ವ ಲಡಾಖ್ ಬಳಿ ಅಂತರರಾಷ್ಟ್ರೀಯ ಗಡಿ ಸಮೀಪ ಪಾಂಗಾಂಗ್ ಸರೋವರಕ್ಕೆ ಚೀನಾವು ಎರಡನೇ ಸೇತುವೆಯನ್ನು ನಿರ್ಮಿಸಲು ಒತ್ತು ನೀಡಿದೆ ಎಂಬ ವರದಿ ಉಲ್ಲೇಖಿಸಿ ಹೇಳಿದ್ದಾರೆ.

ಮೊದಲ ಸೇತುವೆ ನಿರ್ಮಾಣ ಕುರಿತ ವರದಿ ಬಂದಾಗ ‘ನಾವು ಪರಿಸ್ಥಿತಿ ಗಮನಿಸುತ್ತಿದ್ದೇವೆ’ ಎಂದು ಸರ್ಕಾರ ಹೇಳಿಕೆ ನೀಡಿತ್ತು. ಈಗಲೂ ಅದೇ ಹೇಳಿಕೆ ನೀಡುತ್ತಿದೆ ಎಂದು ರಾಹುಲ್ ಗಾಂಧಿ ಟ್ವೀಟ್‌ನಲ್ಲಿ ವ್ಯಂಗ್ಯವಾಡಿದ್ದಾರೆ.

ಚೀನಾ ನಿರ್ಮಿಸುತ್ತಿದೆ ಎನ್ನಲಾದ ಸೇತುವೆಯು ಆ ದೇಶವು ಗಡಿಯುದ್ದಕ್ಕೂ ಕ್ಷಿಪ್ರಗತಿಯಲ್ಲಿ ತನ್ನ ಸೇನೆಯನ್ನು ಕ್ರೋಡೀಕರಿಸಲು ಸಹಾಯಕವಾಗಲಿದೆ ಎಂದು ಉಪಗ್ರಹ ಚಿತ್ರಗಳನ್ನು ಆಧರಿಸಿ ಈ ಬೆಳವಣಿಗೆಗಳನ್ನು ಹತ್ತಿರದಿಂದ ಬಲ್ಲವರು ಪ್ರತಿಪಾದಿಸಿದ್ದಾರೆ.

ಪೆಗಾಸಸ್: ವರದಿ ಸಲ್ಲಿಕೆಗೆ ಸಮಯ ನೀಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಚನೆಯಾಗಿರುವ ತಾಂತ್ರಿಕ ಮತ್ತು ಮೇಲ್ವಿಚಾರಣಾ ಸಮಿತಿಗೆ ವರದಿ ಸಲ್ಲಿಸಲು ಸುಪ್ರೀಂ ಕೋರ್ಟ್ 4 ವಾರಗಳ ಸಮಯಾವಕಾಶ ನೀಡಿದೆ.

‘ಗೂಢಚರ್ಯೆಗೆ ಒಳಪಟ್ಟ 29 ಫೋನ್‌ಗಳ ಪರಿಶೀಲನೆ ನಡೆಸಲಾಗುತ್ತಿದ್ದು, ನಾಲ್ಕು ವಾರಗಳಲ್ಲಿ ಪ್ರಕ್ರಿಯೆ ಮುಗಿಯಬೇಕು.’ ಎಂದು ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠ ತಿಳಿಸಿದೆ.

‘ಗೂಢಚರ್ಯೆಗೆ ಒಳಪಟ್ಟ ಫೋನ್‌ಗಳ ಪರೀಕ್ಷೆಗೆ ಪ್ರಮಾಣಿತ ನಿರ್ವಹಣಾ ಕಾರ್ಯವಿಧಾನವನ್ನು ಅಳವಡಿಸಲಾಗುವುದು. ಈ ತಿಂಗಳ ಅಂತ್ಯದ ವೇಳೆಗೆ ತಾಂತ್ರಿಕ ಸಮಿತಿಯ ತನಿಖೆಯು ಮುಗಿಯಬಹುದು. ಬಳಿಕ ಜುಲೈನಲ್ಲಿ ಮೇಲ್ವಿಚಾರಣಾ ಸಮಿತಿಯ ನ್ಯಾಯಾಧೀಶರು ಪರಿಶೀಲನೆಗಾಗಿ ತಮ್ಮ ವರದಿಯನ್ನು ಪೀಠಕ್ಕೆ ಸಲ್ಲಿಸಲಿದ್ದಾರೆ’ ಎಂದು ಕೋರ್ಟ್ ತಿಳಿಸಿತು.

ಮೋಯಿನ್ ಮೋಹಕ ಆಟ ವ್ಯರ್ಥ; ಕೊನೆಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲು

ಬೆಳಗಿದ ರವಿ; ಪ್ಲೇ ಆಫ್‌ಗೆ ರಾಜಸ್ಥಾನ

ಮುಂಬೈ (ಪಿಟಿಐ): ಸಾಧಾರಣ ಗುರಿ ಬೆನ್ನತ್ತಿದರೂ ಒಂದು ಹಂತದಲ್ಲಿ ಸೋಲಿನ ಆತಂಕಕ್ಕೆ ಒಳಗಾಗಿದ್ದ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ಮತ್ತು ಆಸರೆಯಾದರು.

ಯಶಸ್ವಿ (59; 44 ಎಸೆತ, 8 ಬೌಂಡರಿ, 1 ಸಿಕ್ಸರ್) ಮತ್ತು ಅಶ್ವಿನ್ (ಅಜೇಯ 40; 23 ಎ, 2 ಬೌ, 3 ಸಿ) ಅವರ ಮೋಹಕ ಆಟದ ಬಲದಿಂದ ರಾಜಸ್ಥಾನ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ತನ್ನ ಕೊನೆಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳಿಂದ ಜಯ ಗಳಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿ ಪ್ಲೇ ಆಫ್ ಪ್ರವೇಶಿಸಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಮೂರನೇ ಕ್ರಮಾಂಕದ ಮೋಯಿನ್ ಅಲಿ (93; 57 ಎಸೆತ, 13 ಬೌಂಡರಿ, 3 ಸಿಕ್ಸರ್) ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ 6 ವಿಕೆಟ್ ಕಳೆದುಕೊಂಡು 150 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ರಾಜಸ್ಥಾನ 19.4 ಓವರ್‌ಗಳಲ್ಲಿ 5ಕ್ಕೆ 151 ರನ್ ಗಳಿಸಿತು. ಜೋಸ್ ಬಟ್ಲರ್, ಸಂಜು ಸ್ಯಾಮ್ಸನ್ ಮತ್ತು ದೇವದತ್ತ ಪಡಿಕ್ಕಲ್ ಅವರ ವಿಕೆಟ್ ಉರುಳಿದಾಗ ತಂಡ ಸಂಕಷ್ಟಕ್ಕೆ ಸಿಲುಕಿತ್ತು. ಈ ಸಂದರ್ಭದಲ್ಲಿ ಇನಿಂಗ್ಸ್ ಮುನ್ನಡೆಸುವ ಹೊಣೆ ಹೊತ್ತುಕೊಂಡ ಅಶ್ವಿನ್, ಮೋಹಕ ಆಟವಾಡಿದರು. ಹೀಗಾಗಿ ತಂಡಕ್ಕೆ ಸುಲಭ ಜಯ ಒಲಿಯಿತು.

ಮೋಯಿನ್ ಅಲಿ ಮೋಹಕ ಬ್ಯಾಟಿಂಗ್: ಟಾಸ್ ಗೆದ್ದ ಚೆನ್ನೈ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ ಮತ್ತು ವೇಗದ ದಾಳಿಯ ಮೂಲಕ ಕಾಡಿದ ರಾಜಸ್ಥಾನ ರಾಯಲ್ಸ್ ತಂಡ ಆರಂಭದಲ್ಲೇ ವಿಕೆಟ್‌ಗಳನ್ನು ಗಳಿಸಿ ಮೇಲುಗೈ ಸಾಧಿಸಿತು.

ಟ್ರೆಂಟ್ ಬೌಲ್ಟ್ ಎಸೆತದಲ್ಲಿ ಋತುರಾಜ್ ಗಾಯಕವಾಡ್ ಔಟಾದಾಗ ತಂಡದ ಮೊತ್ತ 2 ಆಗಿತ್ತು. ಆಫ್‌ಸ್ಟಂಪ್‌ನಿಂದ ಆಚೆ ಹೋಗುತ್ತಿದ್ದ ಚೆಂಡನ್ನು ಡ್ರೈವ್ ಮಾಡಲು ಪ್ರಯತ್ನಿಸಿದ ಋತುರಾಜ್ ವಿಕೆಟ್ ಕೀಪರ್, ನಾಯಕ ಸಂಜು ಸ್ಯಾಮ್ಸನ್‌ಗೆ ಕ್ಯಾಚ್ ನೀಡಿದರು.

ಡೇವಾನ್ ಕಾನ್ವೆ ಜೊತೆಗೂಡಿದ ಮೋಯಿನ್ ಅಲಿ ಆರಂಭದಲ್ಲೇ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಅವರಿಗೆ ಕಾನ್ವೆ ಕೂಡ ಉತ್ತಮ ಸಹಕಾರ ನೀಡಿದರು. 3ನೇ ಓವರ್‌ನಲ್ಲಿ ಬೌಂಡರಿ ಮತ್ತು ಸಿಕ್ಸರ್ ಸಿಡಿಸಿ ಕಾನ್ವೆ ಆಕ್ರಮಣಕಾರಿ ಆಟಕ್ಕೆ ಮುಂದಾದರು.

ಪ್ರಸಿದ್ಧ ಕೃಷ್ಣ ಹಾಕಿದ ಮುಂದಿನ ಓವರ್‌ನಲ್ಲಿ 3 ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿ ಮೋಯಿನ್ ಅಲಿ 18 ರನ್ ಕಲೆ ಹಾಕಿದರು. ಅಶ್ವಿನ್ ಹಾಕಿದ ಇನಿಂಗ್ಸ್‌ನ 5ನೇ ಓವರ್‌ನಲ್ಲಿ 2 ಬೌಂಡರಿ ಮತ್ತು 1 ಸಿಕ್ಸರ್ ಸಿಡಿಸಿದ ಅಲಿ ಅವರು ಮುಂದಿನ ಓವರ್‌ನಲ್ಲಿ ಬೌಲ್ಟ್ ಅವರನ್ನು ದಂಡಿಸಿದರು. ಮೊದಲ ಎಸೆತದಲ್ಲಿ ಸಿಕ್ಸರ್ ಗಳಿಸಿದ ಅವರು ನಂತರ ಐದು ಎಸೆತಗಳನ್ನು ಬೌಂಡರಿಗೆ ಅಟ್ಟಿದರು.

ಇನಿಂಗ್ಸ್ ಅರ್ಧ ಹಾದಿ ಸಾಗುವ ಮೊದಲು ಕಾನ್ವೆ ಔಟಾದರು. ಜಗದೀಶನ್ ಮತ್ತು ಅಂಬಟಿ ರಾಯುಡು ಕೂಡ ಬೇಗನೇ ಮರಳಿದರು. ಧೋನಿ ತಲಾ ಒಂದು ಬೌಂಡರಿ ಮತ್ತು ಸಿಕ್ಸರ್ ಮೂಲಕ 28 ಎಸೆತಗಳಲ್ಲಿ 26 ರನ್ ಗಳಿಸಿ ಮೋಯಿನ್ ಅಲಿಗೆ ಹೆಚ್ಚು ಅವಕಾಶ ನೀಡಿದರು. ಶತಕದತ್ತ ಹೆಜ್ಜೆ ಹಾಕಿದ್ದ ಮೋಯಿನ್ ಕೊನೆಯ ಓವರ್‌ನ ಮೊದಲ ಎಸೆತದಲ್ಲಿ ವಿಕೆಟ್ ಒಪ್ಪಿಸಿದರು


ರವಿಚಂದ್ರನ್ ಅಶ್ವಿನ್ ಅವರ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

‘ಮುಂದಿನ ವರ್ಷವೂ ಆಡುವೆ’

ಮುಂದಿನ ವರ್ಷದ ಐಪಿಎಲ್ ಆವೃತ್ತಿಯಲ್ಲೂ ಆಡುವುದಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ತಿಳಿಸಿದ್ದಾರೆ. ಈ ಮೂಲಕ, 40 ವರ್ಷದ ವಿಕೆಟ್ ಕೀಪರ್ ಬ್ಯಾಟರ್ ಧೋನಿ ಕ್ರಿಕೆಟ್ ಪ್ರೇಮಿಗಳ ಸಂದೇಹಗಳಿಗೆ ಕೊನೆ ಹಾಡಿದ್ದಾರೆ. ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದ ಟಾಸ್ ನಂತರ ಮಾತನಾಡಿದ ಅವರು ‘ಮುಂದಿನ ವರ್ಷ ಖಂಡಿತವಾಗಿಯೂ ಆಡುವೆ. ಚೆನ್ನೈನಲ್ಲಿ ಆಡದೇ ಚೆನ್ನೈ ನಗರಕ್ಕೆ ವಿದಾಯ ಹೇಳುವುದು ಸರಿಯಲ್ಲ. ಹಾಗಾದರೆ ಚೆನ್ನೈ ಅಭಿಮಾನಿಗಳಿಗೆ ನಿರಾಸೆಯಾಗಲಿದೆ’ ಎಂದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 150 (20 ಓವರ್‌ಗಳಲ್ಲಿ)
ಋತುರಾಜ್ ಸಿ ಸಂಜು ಬಿ ಬೌಲ್ಟ್ 2 (6 ಎ), ಡೆವಾನ್ ಕಾನ್ವೆ ಎಲ್‌ಬಿಡಬ್ಲ್ಯು ಅಶ್ವಿನ್ 16 (14 ಎ, 4x1, 6x1), ಮೋಯಿನ್ ಸಿ ಪರಾಗ್ ಬಿ ಮೆಕಾಯ್ 93 (57 ಎ, 4x13, 6x3), ನಾರಾಯಣ ಜಗದೀಶನ್ ಸಿ ಪರಾಗ್ ಬಿ ಚಾಹಲ್ 1 (4 ಎ), ಅಂಬಟಿ ರಾಯುಡು ಸಿ ದೇವದತ್ತ ಬಿ ಚಾಹಲ್ 3 (6 ಎ), ಧೋನಿ ಸಿ ಬಟ್ಲರ್ ಬಿ ಚಾಹಲ್ 26 (28 ಎ, 4x1, 6x1), ಮಿಚೆಲ್ ಔಟಾಗದೆ 1 (2 ಎ), ಸಿಮ್ರನ್‌ಜೀತ್ ಔಟಾಗದೆ 3 (3 ಎ)
ಇತರೆ (ವೈಡ್ 5) 5
ವಿಕೆಟ್ ಪತನ: 1-2 (ಋತುರಾಜ್ ಗಾಯಕವಾಡ್, 0.6), 2-85 (ಡೆವಾನ್ ಕಾನ್ವೆ, 7.3), 3-88 (ನಾರಾಯಣ ಜಗದೀಶನ್, 8.4), 4-95 (ಅಂಬಟಿ ರಾಯುಡು, 10.2), 5-146 (ಮಹೇಂದ್ರ ಸಿಂಗ್ ಧೋನಿ, 18.6), 6-146 (ಮೋಯಿನ್ ಅಲಿ, 19.1)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-44-1, ಪ್ರಸಿದ್ಧ ಕೃಷ್ಣ 4-0-32-0, ರವಿಚಂದ್ರನ್ ಅಶ್ವಿನ್ 4-0-28-1, ಯಜುವೇಂದ್ರ ಚಾಹಲ್ 4-0-26-2, ಒಬೆದ್ ಮೆಕಾಯ್ 4-0-20-2

ರಾಜಸ್ಥಾನ್ ರಾಯಲ್ಸ್ 5ಕ್ಕೆ 151 (19.4 ಓವರ್)
ಯಶಸ್ವಿ ಸಿ ಪಥಿರಣ ಬಿ ಸೋಲಂಕಿ 59 (44ಎ, 4X8, 6X1), ಬಟ್ಲರ್ ಸಿ ಮೋಯಿನ್ ಬಿ ಸಿಮರ್‌ಜೀತ್ ಸಿಂಗ್ 2 (5ಎ), ಸಂಜು ಸಿ ಮತ್ತು ಬಿ ಸ್ಯಾಂಟನರ್ 15 (20ಎ, 4X2), ದೇವದತ್ತ ಬಿ ಮೋಯಿನ್ 3 (9ಎ), ಅಶ್ವಿನ್ ಔಟಾಗದೆ 40 (23ಎ, 4X2, 6X3), ಹೆಟ್ಮೆಯರ್ ಸಿ ಶಿವಂ ಬಿ ಸೋಲಂಕಿ 6 (7ಎ, 4X1), ರಿಯಾನ್ ಔಟಾಗದೆ 10 (10ಎ, 4X1)
ಇತರೆ (ಲೆಗ್‌ಬೈ 8, ವೈಡ್ 8) 16
ವಿಕೆಟ್ ಪತನ: 1-16 (ಜೋಸ್ ಬಟ್ಲರ್, 1.4), 2-67 (ಸಂಜು ಸ್ಯಾಮ್ಸನ್, 8.3), 3-76 (ದೇವದತ್ತ ಪಡಿಕ್ಕಲ್, 11.2), 4-104 (ಯಶಸ್ವಿ ಜೈಸ್ವಾಲ್, 14.5), 5-112 (ಶಿಮ್ರಾನ್ ಹೆಟ್ಮೆಯರ್, 16.2)
ಬೌಲಿಂಗ್: ಮುಕೇಶ್ ಚೌಧರಿ 4-0-41-1, ಸಿಮರ್‌ಜೀತ್ ಸಿಂಗ್ 3-0-18-1, ಮಿಚೆಲ್ ಸ್ಯಾಂಟನರ್ 3-0-15-1, ಮಥೀಶ್ ಪಥಿರಣ 3.4-0-28-0, ಮೋಯಿನ್ ಅಲಿ 4-0-21-1, ಪ್ರಶಾಂತ್ ಸೋಲಂಕಿ 2-0-20-2

ಫಲಿತಾಂಶ: ರಾಜಸ್ಥಾನ್ ರಾಯಲ್ಸ್‌ಗೆ 5 ವಿಕೆಟ್ ಜಯ

ಇಂದು ಡೆಲ್ಲಿ–ಮುಂಬೈ ಸೆಣಸು: ನನಸಾಗುವುದೇ ಆರ್‌ಸಿಬಿ ಕನಸು?

ಮುಂಬೈ (ಪಿಟಿಐ): ಗುಜರಾತ್ ಟೈಟನ್ಸ್ ವಿರುದ್ಧ ಭರ್ಜರಿ ಜಯ ಗಳಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ಲೇ ಆಫ್ ಹಂತಕ್ಕೇರುವ ಅವಕಾಶವನ್ನು ಜೀವಂತವಾಗಿರಿಸಿಕೊಂಡಿದೆ. ಆದರೆ ತಂಡದ ಭವಿಷ್ಯ ಶನಿವಾರ ನಡೆಯಲಿರುವ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಮುಂಬೈ ಇಂಡಿಯನ್ಸ್ ಪಂದ್ಯದಲ್ಲಿ ನಿರ್ಧಾರವಾಗಲಿದೆ.

ಶನಿವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯ ರಿಷಭ್ ಪಂತ್ ನೇತೃತ್ವದ ಡೆಲ್ಲಿ ಪಾಲಿಗೆ ‘ಕ್ವಾರ್ಟರ್ ಫೈನಲ್’ ಆಗಿದ್ದು ಗೆದ್ದರೆ ಪ್ಲೇ ಆಫ್‌ಗೆ ಪ್ರವೇಶಿಸಲಿದೆ. ಮುಂಬೈ ಇಂಡಿಯನ್ಸ್ ಗೆಲುವಿನೊಂದಿಗೆ ಅಭಿಯಾನ ಮುಕ್ತಾಯಗೊಳಿಸಲು ಪ್ರಯತ್ನಿಸಲಿದೆ.

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ Vs ಮುಂಬೈ ಇಂಡಿಯನ್ಸ್
ಸ್ಥಳ: ವಾಂಖೆಡೆ, ಮುಂಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್
ರಾತ್ರಿ 7.30

ಆರ್‌ಸಿಬಿ ತನ್ನ ಪಾಲಿನ ಎಲ್ಲ ಪಂದ್ಯಗಳನ್ನು ಮುಗಿಸಿದ್ದು 16 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಶನಿವಾರ ಗೆದ್ದರೆ ಡೆಲ್ಲಿ ಖಾತೆಗೂ 16 ಪಾಯಿಂಟ್‌ಗಳು ಸೇರಲಿವೆ. ಆದರೆ ಡೆಲ್ಲಿಯ ರನ್‌ರೇಟ್ (+0.255) ಉತ್ತಮವಾಗಿದ್ದು ಬೆಂಗಳೂರನ್ನು (-0.253) ಹಿಂದಿಕ್ಕಿ ಪ್ಲೇ ಆಫ್‌ಗೆ ಪ್ರವೇಶಿಸಲಿದೆ.

ಗುರುವಾರ ನಡೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 8 ವಿಕೆಟ್‌ಗಳಿಂದ ಜಯ ಗಳಿಸಿತ್ತು.

ಅರ್ಜುನ್‌ಗೆ ಸಿಗುವುದೇ ಅವಕಾಶ?:- ದಿಗ್ಗಜ ಬ್ಯಾಟರ್ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್‌ಗೆ ಮುಂಬೈ ಇಂಡಿಯನ್ಸ್ ತಂಡದಲ್ಲಿ ಕೊನೆಗೂ ಅವಕಾಶ ಸಿಗುವುದೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಎರಡು ಆವೃತ್ತಿಗಳಲ್ಲಿ ಅರ್ಜುನ್ ಸತತ 27 ಪಂದ್ಯಗಳಲ್ಲಿ ಬೆಂಚು ಕಾದಿದ್ದಾರೆ. ಕೊನೆಯ ಪಂದ್ಯದಲ್ಲಿ ಯುವ ಆಟಗಾರರಿಗೆ ಅವಕಾಶ ನೀಡುವುದಾಗಿ ನಾಯಕ ರೋಹಿತ್ ಶರ್ಮಾ ಹೇಳಿರುವುದರಿಂದ ಅರ್ಜುನ್ ಕಣಕ್ಕೆ ಇಳಿಯುವ ನಿರೀಕ್ಷೆ ಮೂಡಿದೆ.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	14	10	4	0	0	20	0.316
ರಾಜಸ್ಥಾನ	14	9	5	0	0	18	0.298
ಲಖನೌ	14	9	5	0	0	18	0.251
ಬೆಂಗಳೂರು	14	8	6	0	0	16	-0.253
ಡೆಲ್ಲಿ	13	7	6	0	0	14	0.255
ಕೋಲ್ಕತ್ತ	14	6	8	0	0	12	0.146
ಪಂಜಾಬ್	13	6	7	0	0	12	-0.043
ಹೈದರಾಬಾದ್	13	6	7	0	0	12	-0.230
ಚೆನ್ನೈ	14	4	10	0	0	8	-0.203
ಮುಂಬೈ	13	3	10	0	0	6	-0.577

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	629
ರಾಹುಲ್	ಲಖನೌ	537
ಕ್ವಿಂಟನ್ ಡಿಕಾಕ್	ಲಖನೌ	502

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	24
ಕಗಿಸೊ	ಪಂಜಾಬ್	22

ಬ್ಯಾಡ್ಮಿಂಟನ್: ಸೆಮಿಗೆ ಸಿಂಧು

ಬ್ಯಾಂಕಾಕ್ (ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಜಪಾನ್‌ನ ಅಕಾನೆ ಯಾಮಗುಚಿ ವಿರುದ್ಧ ಅಮೋಘ ಆಟವಾಡಿದ ಭಾರತದ ಪಿ.ವಿ.ಸಿಂಧು ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.


ಪಿ.ವಿ.ಸಿಂಧು

ಸಿಂಧು ಶುಕ್ರವಾರ ನಡೆದ ಹಣಾಹಣಿಯಲ್ಲಿ ಎದುರಾಳಿಯನ್ನು 21-15, 20-22, 21-13ರಲ್ಲಿ ಮಣಿಸಿದರು. ಜಪಾನ್ ಆಟಗಾರ್ತಿಯನ್ನು ಮಣಿಸಲು ಸಿಂಧು 51 ನಿಮಿಷ ತೆಗೆದುಕೊಂಡರು. ಫೈನಲ್‌ನಲ್ಲಿ ಅವರು ಒಲಿಂಪಿಕ್ ಚಾಂಪಿಯನ್, ಚೀನಾದ ಚೆನ್ ಯು ಫೀ ವಿರುದ್ಧ ಸೆಣಸುವರು. ಸಿಂಧು ಕ್ರಾಸ್ ಕೋರ್ಟ್ ಹೊಡೆತ, ಡ್ರಾಪ್‌ಗಳು ಮತ್ತು ಸ್ಮೈಜ್‌ಗಳ ಮೂಲಕ ಅ ಕಾಡಿದರು.

ಏಷ್ಯಾಕಪ್: ಜಕಾರ್ತಕ್ಕೆ ಭಾರತ ಹಾಕಿ ತಂಡ

ಬೆಂಗಳೂರು: ಹಾಲಿ ಚಾಂಪಿಯನ್ ಭಾರತ, ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಜಕಾರ್ತಕ್ಕೆ ಶುಕ್ರವಾರ ಪ್ರಯಾಣ ಬೆಳೆಸಿದೆ. ಬೀರೇಂದ್ರ ಲಾಕ್ರ ನೇತೃತ್ವದ ತಂಡ ‘ಎ’ ಗುಂಪಿನಲ್ಲಿದ್ದು ಜಪಾನ್, ಪಾಕಿಸ್ತಾನ ಮತ್ತು ಆತಿಥೇಯ ಇಂಡೊನೇಷ್ಯ ಇದೇ ಗುಂಪಿನಲ್ಲಿವೆ. 23ರಂದು ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ, ಪಾಕಿಸ್ತಾನವನ್ನು ಎದುರಿಸಲಿದೆ.

ಅಮೆರಿಕ ಟ್ವೆಂಟಿ20: ಸತ್ಯ, ಶಂತನು ಹೂಡಿಕೆ

ನ್ಯೂಯಾರ್ಕ್: ಮೈಕ್ರೊಸಾಫ್ಟ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸತ್ಯ ನಾದೆಲ್ಲ ಮತ್ತು ಅಡೋಬ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಂತನು ನಾರಾಯಣ್ ಒಳಗೊಂಡಂತೆ ಅಮೆರಿಕದಲ್ಲಿ ನಡೆಯಲಿರುವ ಮೊತ್ತ ಮೊದಲ ವೃತ್ತಿಪರ ಟ್ವೆಂಟಿ20 ಕ್ರಿಕೆಟ್ ಲೀಗ್‌ನಲ್ಲಿ ಹೂಡಿಕೆಗೆ ಮಾಡಿದ್ದಾರೆ.

ಅಮೆರಿಕದಲ್ಲಿ ಕ್ರಿಕೆಟ್ ಜನಪ್ರಿಯಗೊಳಿಸುವುದಕ್ಕಾಗಿ ಟೂರ್ನಿಯನ್ನು ಆಯೋಜಿಸಲಾಗುತ್ತಿದ್ದು ಒಟ್ಟು ₹ 9,000 ಕೋಟಿ ಮೊತ್ತದ ಹೂಡಿಕೆಯನ್ನು ನಿರೀಕ್ಷಿಸಲಾಗಿದೆ. ಮೇಜರ್ ಲೀಗ್ ಕ್ರಿಕೆಟ್ (ಎಂಎಲ್‌ಸಿ) ಟೂರ್ನಿಯನ್ನು ಆಯೋಜಿಸುತ್ತಿದೆ.

ಮಡ್ರೋನಾ ವೆಂಚರ್ಸ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಸೋಮ ಸೋಮಶೇಖರ್, ಮಿಲಿವೇ ವೆಂಚರ್ಸ್‌ನ ಉಪಾಧ್ಯಕ್ಷ ಆನಂದ್ ರಾಜಾರಾಮನ್, ಇನ್ಫಿನಿಟಿ ಕಂಪ್ಯೂಟರ್ ಸೊಲ್ಯೂಷನ್ಸ್‌ನ ಅಧ್ಯಕ್ಷ ವೆಂಕಿ ಹರಿನಾರಾಯಣ ಮತ್ತು ಪೆರೋಟ್ ಜೈನ್‌ನ ವ್ಯವಸ್ಥಾಪಕ ಪಾಲುದಾರ ಸಂಜಯ್ ಗೋವಿಲ್ ಅವರೂ ಹೂಡಿಕೆಗೆ ಮುಂದಾಗಿದ್ದಾರೆ.

ನಿಖತ್: ಸ್ಪ್ರಿಂಟರ್ ಬಾಕ್ಸರ್ ಆದ ಬಗೆ..

ನವದೆಹಲಿ (ಪಿಟಿಐ): ‘ಮಹಿಳೆಯರು ಯಾಕೆ ಬಾಕ್ಸಿಂಗ್‌ನಲ್ಲಿ ತೊಡಗಿಸಿಕೊಳ್ಳುವುದಿಲ್ಲ? ಅದೇನು ಪುರುಷರಿಗೆ ಮಾತ್ರ ಸೀಮಿತವಾಗಿರುವ ಕ್ರೀಡೆಯೇ...?’

ಅಥ್ಲೆಟಿಕ್ಸ್‌ನಲ್ಲಿ ತರಬೇತಿ ಪಡೆಯುತ್ತಿದ್ದ ಯುವ ಕ್ರೀಡಾಪಟು ವರ್ಷಗಳ ಹಿಂದೆ ತಂದೆಯನ್ನು ಕೇಳಿದ ಪ್ರಶ್ನೆ ಇದು. ಆ ಬಾಲಕಿ ಈಗ ಬಾಕ್ಸಿಂಗ್‌ನಲ್ಲಿ ವಿಶ್ವ ಚಾಂಪಿಯನ್. ಅವರು ನಿಖತ್ ಜರೀನ್. ಇಸ್ತಾಂಬುಲ್‌ನಲ್ಲಿ ನಡೆದ ಮಹಿಳೆಯರ ವಿಶ್ವ ಚಾಂಪಿಯನ್‌ಷಿಪ್‌ನ 52 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದವರು.


ಅಂದು ಮೂಡಿದ ಆ ಪ್ರಶ್ನೆಯು ನಿಖತ್ ಜರೀನ್ ಅವರ ಹಾದಿಯನ್ನು ಬದಲಿಸಿತು. ಟ್ರ್ಯಾಕ್ ಬಿಟ್ಟು ಬಾಕ್ಸಿಂಗ್ ರಿಂಗ್‌ಗೆ ಇಳಿದ ಅವರು ಸಾಧನೆಯ ಹಾದಿಯಲ್ಲಿ ಮುನ್ನಡೆದರು. ಈ ಸಾಧನೆಯ ಹಿಂದೆ ಅವರ ತಂದೆ, ಮಾಜಿ ಫುಟ್‌ಬಾಲ್ ಆಟಗಾರ ಮೊಹಮ್ಮದ್ ಜಮೀಲ್ ಅವರ ಕಾಣಿಕೆಯೂ ಇದೆ.


ನಿಖತ್ ಜರೀನ್

‘ಒಮ್ಮೆ ಮಗಳನ್ನು ಕರೆದುಕೊಂಡು ಮೈದಾನಕ್ಕೆ ತೆರಳುವ ಅಭ್ಯಾಸ ಮೂಡಿಸಿಕೊಂಡಿದ್ದೆ. ಯಾವುದಾದರೊಂದು ಕ್ರೀಡೆಯಲ್ಲಿ ಆಕೆಯನ್ನು ತೊಡಗಿಸಿಕೊಳ್ಳಬೇಕು ಎಂಬುದು ನನ್ನ ಉದ್ದೇಶವಾಗಿತ್ತು. ಕೆಲವು ದಿನಗಳ ನಂತರ ಆಕೆಯ ಹಾವಭಾವ ಗಮನಿಸಿದಾಗ ಕ್ರೀಡಾಪಟು ಆಗುತ್ತಾಳೆ ಎಂದು ತಿಳಿಯಿತು. ಆ ನಂತರ ನಡೆದುದೆಲ್ಲವೂ ಸ್ಮರಣೀಯ’ ಎಂದು ಜಮೀಲ್ ಹೇಳಿದರು.

ಆರಂಭದಲ್ಲಿ 100 ಮತ್ತು 200 ಮೀಟರ್ಸ್ ಓಟದಲ್ಲಿ ತೊಡಗಿಸಿಕೊಂಡಿದ್ದ ನಿಖತ್ ನಂತರ ಬಾಕ್ಸಿಂಗ್ ಕಡೆಗೆ ವಾಲಿದರು. ಮುಸ್ಲಿಂ ಕುಟುಂಬದಿಂದ ಬಂದಿರುವುದು, ಬಾಕ್ಸಿಂಗ್‌ನಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ತೊಡಗಿಸಿಕೊಳ್ಳದೇ ಇದ್ದುದು ಮತ್ತು ತರಬೇತಿಗೆ ಸೂಕ್ತ ಅನುಕೂಲ ಇಲ್ಲದೇ ಇದ್ದುದರಿಂದ ನಿಖತ್ ಮತ್ತು ಜಮೀಲ್ ಅನೇಕ ಸವಾಲುಗಳನ್ನು ಎದುರಿಸಬೇಕಾಗಿ ಬಂದಿತ್ತು. ಎಲ್ಲವನ್ನು ಮೆಟ್ಟಿನಿಂತು ಸಾಧನೆಯ ಶಿಖರವೇರಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,809
ಇಂದಿನ ಅಂತ್ಯ	16,266
▲	457
ದಿನದ ಗರಿಷ್ಠ	16,283

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹211-510
ದ್ವಿತಳಿ (ಬಿ.ವಿ)	₹252-830

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹169.50
ಆರ್‌ಎಸ್‌ಎಸ್-5	₹164
ಗುಡ್ ಲಾಟ್	₹158.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹700-900
ಸಣ್ಣ	₹600-800

ಕರೆ: ಕೆವೈಸಿ ಆಧಾರಿತ ಹೆಸರು ತೋರಿಸುವ ವ್ಯವಸ್ಥೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಅಪರಿಚಿತರಿಂದ ಕರೆ ಬಂದಾಗ ಅದು ಯಾರಿಂದ ಬಂತು ಎಂದು ಪರಿಶೀಲಿಸಲು ಯಾವುದೋ ಆ್ಯಪ್‌ಗಳನ್ನು ನೆಚ್ಚಿಕೊಂಡಿದ್ದೀರಾ?! ಅಂತಹ ಪರಿಸ್ಥಿತಿ ತಪ್ಪಿಸಲು ಹೊಸ ವ್ಯವಸ್ಥೆಯೊಂದನ್ನು ರೂಪಿಸುವ ಬಗ್ಗೆ ಸಮಾಲೋಚನೆ ನಡೆಸಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಮುಂದಾಗಿದೆ.

ಸಿಮ್ ಖರೀದಿಸುವಾಗ ಗ್ರಾಹಕರು ಸಲ್ಲಿಸುವ ಕೆವೈಸಿ ದಾಖಲೆಗಳಲ್ಲಿ ಇರುವ ಹೆಸರೇ, ಅವರು ಇತರರಿಗೆ ಕರೆ ಮಾಡಿದಾಗ, ಕರೆ ಸ್ವೀಕರಿಸುವ ವ್ಯಕ್ತಿಯ ಮೊಬೈಲ್ ಪರದೆಯ ಮೇಲೆ ಕಾಣಿಸಿಕೊಳ್ಳುವಂತೆ ಆಗಬೇಕು ಎಂಬುದು ಟ್ರಾಯ್ ಉದ್ದೇಶ. ಇದಕ್ಕೆ ಅಗತ್ಯವಿರುವ ವ್ಯವಸ್ಥೆಯನ್ನು ರೂಪಿಸಲು ಟ್ರಾಯ್ ಶೀಘ್ರದಲ್ಲಿಯೇ ಸಮಾಲೋಚನೆ ಆರಂಭಿಸಲಿದೆ.

ಸಮಾಲೋಚನೆ ಶುರು ಮಾಡುವಂತೆ ಟ್ರಾಯ್‌ಗೆ ಕೇಂದ್ರ ದೂರಸಂಪರ್ಕ ಇಲಾಖೆಯಿಂದ ಸೂಚನೆ ಸಹ ಬಂದಿದೆ. ಇನ್ನು ಎರಡು ತಿಂಗಳಲ್ಲಿ ಸಮಾಲೋಚನೆ ಶುರುವಾಗಲಿದೆ ಎಂದು ಟ್ರಾಯ್ ಅಧ್ಯಕ್ಷ ಪಿ.ಡಿ. ವಘೇಲಾ ತಿಳಿಸಿದ್ದಾರೆ.

ಕರೆ ಮಾಡಿದವರ ಹೆಸರು ಏನು ಎಂಬುದನ್ನು ತಿಳಿಸುವ ಕೆಲವು ಆ್ಯಪ್‌ಗಳು ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಸಿಗುತ್ತಿವೆ. ಆದರೆ ಅವು ನಿಖರವಲ್ಲ.

ಬಿಎಸ್‌ಇ ಸೆನ್ಸೆಕ್ಸ್ 1,534 ಅಂಶ ಜಿಗಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಶುಕ್ರವಾರ ಸಕಾರಾತ್ಮಕ ಹಾದಿಗೆ ಮರಳಿ ವಹಿವಾಟು ಅಂತ್ಯಗೊಳಿಸಿದವು. ಜಾಗತಿಕ ಮಾರುಕಟ್ಟೆಗಳಲ್ಲಿ ವಹಿವಾಟು ಚೇತರಿಕೆ ಕಂಡಿದ್ದು, ದೇಶಿ ಷೇರುಪೇಟೆಗಳಲ್ಲಿ ವಹಿವಾಟಿನ ಏರಿಕೆಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,534 ಅಂಶ ಜಿಗಿತ ಕಂಡು 54,326 ಅಂಶಗಳಿಗೆ ತಲುಪಿತು. ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5 ಲಕ್ಷ ಕೋಟಿ ಹೆಚ್ಚಾಯಿತು. ಷೇರು ಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 254.11 ಲಕ್ಷ ಕೋಟಿಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹೊಸನಗರ	
ಬಿಳಿಗೋಟು	22899-26419
ಚಾಲಿ	36509-38299
ಕೆಂಪುಗೋಟು	31299-36399
ರಾಶಿ	45210-50049
ಕಾರ್ಕಳ	
ಹಳೆಚಾಲಿ	46000-54500
ಹೊಸಚಾಲಿ	40000-45000
ಪುತ್ತೂರು	
ಚಿಪ್ಪು	26199-30999
ಕೋಕ	18169-29869
ಫ್ಯಾಕ್ಟರಿ	10169-20801
ಹಳೆಚಾಲಿ	36099-49099
ಹೊಸಚಾಲಿ	43500-44500
ಪುತ್ತೂರು	
ಹೊಸತು	27500-45000
ಶಿವಮೊಗ್ಗ	
ಬೆಟ್ಟೆ	50039-53909
ಗೊರಬಲು	16500-37479
ರಾಶಿ	43999-49509
ಸರಕು	58010-80099
ಸಿದ್ದಾಪುರ	
ಬಿಳಿಗೋಟು	24119-32599
ಚಾಲಿ	36289-39311
ಕೋಕ	22599-31889
ಕೆಂಪುಗೋಟು	26668-32282
ರಾಶಿ	45619-49899
ತಟ್ಟಿಬೆಟ್ಟೆ	36009-42699
ಶಿರಸಿ	
ಬೆಟ್ಟೆ	37509-45699
ಬಿಳಿಗೋಟು	25099-33100
ಚಾಲಿ	46129-49599
ರಾಶಿ	46129-49599
ಯಲ್ಲಾಪುರ	
ಆಪಿ	55199-55299
ಬಿಳಿಗೋಟು	28299-34012
ಚಾಲಿ	35493-39717
ಕೋಕ	18612-30699
ಕೆಂಪುಗೋಟು	30068-34919
ರಾಶಿ	48419-54500
ತಟ್ಟಿಬೆಟ್ಟೆ	39699-47820

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	16050	218.70 ಸೆಂಟ್ಸ್
ಎಸಿ	8900	8500	8700	
ಆರ್‌ಪಿ	9500	9900	10000	ಲಂಡನ್
ಆರ್‌ಸಿ	4600	4350	4500	2080ಡಾಲರ್ಸ್

2021–22ರಲ್ಲಿ ದೇಶಕ್ಕೆ ದಾಖಲೆಯ ವಿದೇಶಿ ಬಂಡವಾಳ ಹರಿವು

ಎಫ್‌ಡಿಐ: ಕರ್ನಾಟಕಕ್ಕೆ ಮೊದಲ ಸ್ಥಾನ

ನವದೆಹಲಿ (ಪಿಟಿಐ): 2021-22ನೇ ಹಣಕಾಸು ವರ್ಷದಲ್ಲಿ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಆಕರ್ಷಿಸಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ.


ಭಾರತವು 2021-22ನೇ ಹಣಕಾಸು ವರ್ಷದಲ್ಲಿ ದಾಖಲೆಯ ₹ 6.48 ಲಕ್ಷ ಕೋಟಿ ಎಫ್‌ಡಿಐ ಆಕರ್ಷಿಸಿದೆ. ಇದರಲ್ಲಿ ಕರ್ನಾಟಕದ ಪಾಲು ಶೇಕಡ 38ರಷ್ಟು. ಮಹಾರಾಷ್ಟ್ರ (ಶೇ 26ರಷ್ಟು) ಮತ್ತು ದೆಹಲಿ (ಶೇ 14ರಷ್ಟು) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ.

ಎಫ್‌ಡಿಐ ನೀತಿಯಲ್ಲಿನ ಸುಧಾರಣೆಗಳು ಹಾಗೂ ಸುಲಲಿತ ವಹಿವಾಟಿಗೆ ತೆಗೆದುಕೊಂಡಿರುವ ಕ್ರಮಗಳಿಂದಾಗಿ ದಾಖಲೆಯ ಎಫ್‌ಡಿಐ ಹರಿದುಬಂದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಶುಕ್ರವಾರ ತಿಳಿಸಿದೆ.



ಕೋವಿಡ್ ಸಾಂಕ್ರಾಮಿಕ ಮತ್ತು ಉಕ್ರೇನ್ ಬಿಕ್ಕಟ್ಟಿನ ಹೊರತಾಗಿಯೂ ಈ ಪ್ರಮಾಣದಲ್ಲಿ ಬಂಡವಾಳ ಒಳಹರಿವು ಕಂಡುಬಂದಿದೆ ಎಂದು ಹೇಳಿದೆ. 2020-21ರಲ್ಲಿ ₹ 6.36 ಲಕ್ಷ ಕೋಟಿ ಎಫ್‌ಡಿಐ ಹರಿದುಬಂದಿತ್ತು. 2019-20ರಲ್ಲಿ ₹ 5.77 ಲಕ್ಷ ಕೋಟಿ ಎಫ್‌ಡಿಐ ಹೂಡಿಕೆ ಆಗಿತ್ತು.

ತಯಾರಿಕಾ ವಲಯದಲ್ಲಿ ವಿದೇಶಿ ಹೂಡಿಕೆಗಳಿಗೆ ಆದ್ಯತೆಯ ದೇಶವಾಗಿ ಭಾರತವು ಅತ್ಯಂತ ವೇಗದಿಂದ ಬೆಳೆಯುತ್ತಿದೆ ಎಂದು ಸಚಿವಾಲಯ ಹೇಳಿದೆ. 2020-21ಕ್ಕೆ ಹೋಲಿಸಿದರೆ 2021-22ರಲ್ಲಿ ತಯಾರಿಕಾ ವಲಯದಲ್ಲಿ ಎಫ್‌ಡಿಐ ಈಕ್ವಿಟಿ ಒಳಹರಿವು ಶೇ 76ರಷ್ಟು ಹೆಚ್ಚಾಗಿದ್ದು, ₹ 1.65 ಲಕ್ಷ ಕೋಟಿಗೆ ತಲುಪಿದೆ. 2020-21ರಲ್ಲಿ ₹ 93,854 ಕೋಟಿ ಹೂಡಿಕೆ ಆಗಿತ್ತು.



ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ವಲಯ ಅತ್ಯಂತ ಹೆಚ್ಚು ಎಫ್‌ಡಿಐ ಆಕರ್ಷಿಸಿವೆ. ಸೇವಾ ವಲಯ ಮತ್ತು ವಾಹನೋದ್ಯಮವು ನಂತರದ ಸ್ಥಾನದಗಳಲ್ಲಿವೆ ಎಂದು ಸಚಿವಾಲಯ ತಿಳಿಸಿದೆ.

ಕಲ್ಲಿದ್ದಲು ಗಣಿಗಾರಿಕೆ, ಗುತ್ತಿಗೆ ಆಧಾರಿತ ತಯಾರಿಕೆ, ಡಿಜಿಟಲ್ ಮಾಧ್ಯಮ, ಸಿಂಗಲ್ ಬ್ರ್ಯಾಂಡ್ ರಿಟೇಲ್ ವಹಿವಾಟು, ನಾಗರಿಕ ವಿಮಾನಯಾನ, ರಕ್ಷಣೆ, ವಿಮೆ ಮತ್ತು ದೂರಸಂಪರ್ಕ ವಲಯಗಳಲ್ಲಿ ಎಫ್‌ಡಿಐ ಒಳಹರಿವಿಗೆ ಅನುಕೂಲ ಆಗುವ ರೀತಿಯಲ್ಲಿ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ ಎಂದು ಅದು ಹೇಳಿದೆ.

ತಯಾರಿಕೆ, ಐ.ಟಿ. ಮತ್ತು ಔಷಧ ವಲಯಗಳಲ್ಲಿ ಎಫ್‌ಡಿಐ ಹರಿದುಬಂದಿದೆ. ಪ್ರಸಕ್ತ ವರ್ಷವೂ ಬಂಡವಾಳ ಒಳಹರಿವು ಪ್ರಮಾಣವು ಇದೇ ರೀತಿ ಮುಂದುವರಿಯುವ ನಿರೀಕ್ಷೆ ಇದೆ ಎಂದು ‘ಶಾರ್ದೂಲ್ ಅಮರ್‌ಚಂದ್ ಮಂಗಲ್‌ದಾಸ್ ಆ್ಯಂಡ್ ಕೋ’ನ ಪಾಲುದಾರ ಅಭಿಶೇಕ್ ಗುಹಾ ಹೇಳಿದ್ದಾರೆ.


ಅಕ್ಷತಾ ಮೂರ್ತಿ ಮತ್ತು ರಿಷಿ ಸುನಕ್ ದಂಪತಿ

ಬ್ರಿಟನ್: ಅತಿ ಶ್ರೀಮಂತರ ಪಟ್ಟಿಯಲ್ಲಿ ಸುನಕ್ ದಂಪತಿ

ಲಂಡನ್ (ರಾಯಿಟರ್ಸ್): ಭಾರತೀಯ ಮಾಹಿತಿ ತಂತ್ರಜ್ಞಾನದ ದೈತ್ಯ ಕಂಪನಿ ಇನ್ಫೋಸಿಸ್‌ನ ಸಂಸ್ಥಾಪಕ ನಾರಾಯಣಮೂರ್ತಿ ಅವರ ಅಳಿಯ, ಹಣಕಾಸು ಸಚಿವ ರಿಷಿ ಸುನಕ್ ಮತ್ತು ನಾರಾಯಣಮೂರ್ತಿ ಅವರ ಪುತ್ರಿ ಅಕ್ಷತಾ ಮೂರ್ತಿ ಬ್ರಿಟನ್‌ನ ಅತಿ ಶ್ರೀಮಂತ ನಿವಾಸಿಗಳ 250 ಮಂದಿ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ ಎಂದು ‘ದಿ ಸಂಡೆ ಟೈಮ್ಸ್’ ಪತ್ರಿಕೆ ಶುಕ್ರವಾರ ವರದಿ ಮಾಡಿದೆ.

ಅಕ್ಷತಾ ಮೂರ್ತಿ ಅವರು ರಿಷಿ ಸುನಕ್ ಅವರ ಪತ್ನಿ. ಈ ದಂಪತಿ ಸುಮಾರು ₹8 ಸಾವಿರ ಕೋಟಿ ಮೌಲ್ಯದ ಸಂಪತ್ತು ಹೊಂದಿದ್ದು, ಈ ಪಟ್ಟಿಯಲ್ಲಿ 222ನೇ ಸ್ಥಾನ ಪಡೆದಿದ್ದಾರೆ. ಸುನಕ್ ಅವರು ಶ್ರೀಮಂತರ ಪಟ್ಟಿ ಸೇರಲು ಅವರ ಪತ್ನಿ ಬಳಿ ಇರುವ ಸಂಪತ್ತಿನ ಮೌಲ್ಯವೂ ಕಾರಣ ಎಂದು ಅದು ಹೇಳಿದೆ.

ಭಾರತೀಯ ಪ್ರಜೆಯಾದ ಅಕ್ಷತಾ ಮೂರ್ತಿ ಇನ್ಫೋಸಿಸ್ ಕಂಪನಿಯ ಸುಮಾರು ಶೇ 0.9 ಷೇರು ಹೊಂದಿದ್ದಾರೆ.

₹2.71 ಲಕ್ಷ ಕೋಟಿಗೂ ಅಧಿಕ ಮೌಲ್ಯದ ಆಸ್ತಿ ಹೊಂದಿರುವ ಭಾರತೀಯ ಮೂಲದ ಹಿಂದೂಜಾ ಸಹೋದರರಾದ ಶ್ರೀ ಮತ್ತು ಗೋಪಿ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

‘ಪ್ರತಿ ವರ್ಷ ಶ್ರೀಮಂತರ ಪಟ್ಟಿಗೆ ಹೆಸರು ಸೇರಿಸಲು ಬಯಸುತ್ತಿರುವ ಕೆಲವರು ನಮ್ಮನ್ನು ಸಂಪರ್ಕಿಸುತ್ತಾರೆ. ಆದರೆ, ಸುನಕ್ ಮಾತ್ರ ನಮ್ಮನ್ನು ಸಂಪರ್ಕಿಸಿಲ್ಲ’ ಎಂದು ಪಟ್ಟಿ ಸಿದ್ಧಪಡಿಸಿದ ರಾಬರ್ಟ್ ವಾಟ್ಸ್ ‘ಸ್ಕೈ ನ್ಯೂಸ್’ಗೆ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಕಾರ್ಪಿಯೊ–ಎನ್ ಜೂನ್ 27ಕ್ಕೆ ಅನಾವರಣ

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಹೊಸ ಎಸ್‌ಯುವಿ ‘ಸ್ಕಾರ್ಪಿಯೊ–ಎನ್’ಅನ್ನು ಜೂನ್ 27ರಂದು ಅನಾವರಣ ಮಾಡಲಿದೆ.

ಈಗ ಮಾರುಕಟ್ಟೆಯಲ್ಲಿ ಇರುವ ಸ್ಕಾರ್ಪಿಯೊ ವಾಹನವು ‘ಸ್ಕಾರ್ಪಿಯೊ ಕ್ಲಾಸಿಕ್’ ಹೆಸರಿನಲ್ಲಿ ಮುಂದುವರಿಯಲಿದೆ.

‘ಹೊಸ ಸ್ಕಾರ್ಪಿಯೊ–ಎನ್ ವಾಹನವು ಎಸ್‌ಯುವಿ ವಿಭಾಗದಲ್ಲಿ ಹೊಸ ಮಾನದಂಡಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ’ ಎಂದು ಕಂಪನಿಯ ಆಟೊಮೋಟಿವ್ ವಿಭಾಗದ ಅಧ್ಯಕ್ಷ ವಿಜಯ್ ನಕ್ರಾ ಅವರು ಹೇಳಿದ್ದಾರೆ.

ಹೊಸ ಎಸ್‌ಯುವಿ ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ಆಯ್ಕೆಗಳನ್ನು ಹೊಂದಿರಲಿದೆ. ಅಲ್ಲದೆ, ಮ್ಯಾನುವಲ್ ಹಾಗೂ ಆಟೊಮ್ಯಾಟಿಕ್ ಆಯ್ಕೆಗಳೂ ಇದರಲ್ಲಿ ಇರಲಿವೆ.

ಈ ಎಸ್‌ಯುವಿಯನ್ನು ಚೆನ್ನೈ ಸಮೀಪದ ಮಹೀಂದ್ರ ರಿಸರ್ಚ್ ವ್ಯಾಲಿಯಲ್ಲಿ, ಅಮೆರಿಕದ ಮಹೀಂದ್ರ ತಾಂತ್ರಿಕ ಕೇಂದ್ರದಲ್ಲಿ ಹಾಗೂ ಮುಂಬೈನಲ್ಲಿ ಇರುವ ಮಹೀಂದ್ರ ಡಿಸೈನ್ ಸ್ಟುಡಿಯೊದಲ್ಲಿ ವಿನ್ಯಾಸಗೊಳಿಸಲಾಗಿದೆ.

ಪಾಲುದಾರರನ್ನು ಹುಡುಕುತ್ತಿರುವ ಮೆಟ್ರೊ ಕ್ಯಾಶ್

ನವದೆಹಲಿ (ಪಿಟಿಐ): ‘ಮೆಟ್ರೊ ಕ್ಯಾಶ್ ಆ್ಯಂಡ್ ಕ್ಯಾರಿ ಇಂಡಿಯಾ’ದಲ್ಲಿನ ಷೇರುಪಾಲನ್ನು ಮಾರಾಟ ಮಾಡಲು ಅದರ ಮಾತೃಸಂಸ್ಥೆ ಜರ್ಮನಿಯ ಮೆಟ್ರೊ ಎಜಿ ಪಾಲುದಾರರನ್ನು ಅರಸುತ್ತಿದೆ.

ಭಾರತದ ವಹಿವಾಟು ಲಾಭದಾಯಕವಾಗಿ ಬೆಳೆಯಬೇಕು ಎಂಬ ಕಾರಣಕ್ಕೆ ಪಾಲುದಾರ ಕಂಪನಿಯನ್ನು ಹುಡುಕುತ್ತಿದೆ ಎಂದು ಮೂಲಗಳು ತಿಳಿಸಿವೆ.

ಅಮೆಜಾನ್, ರಿಲಯನ್ಸ್ ರಿಟೇಲ್, ಅವೆನ್ಯು ಸುಪರ್‌ಮಾರ್ಟ್ಸ್, ಟಾಟಾ ಸಮೂಹ, ಲುಲು ಸಮೂಹವನ್ನು ಸಂಪರ್ಕಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ಭಾರತದಲ್ಲಿ ಜಾಲವನ್ನು ವಿಸ್ತರಿಸಲು, ಹೆಚ್ಚಿನ ಮಳಿಗೆಗಳನ್ನು ತೆರೆಯಲು ಹೆಚ್ಚು ಹೂಡಿಕೆ ಬೇಕು ಎಂದು ಮೂಲಗಳು ವಿವರಿಸಿವೆ.

ಕರ್ಣಾಟಕ ಬ್ಯಾಂಕ್: ಠೇವಣಿ ಬಡ್ಡಿದರ ಹೆಚ್ಚಳ

ಮಂಗಳೂರು: ಕರ್ಣಾಟಕ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿದರವನ್ನು ಪರಿಷ್ಕರಿಸಿದೆ.

1ರಿಂದ 2 ವರ್ಷಗಳ ಅವಧಿಯ ಡೊಮೆಸ್ಟಿಕ್ ಹಾಗೂ ಎನ್‌ಆರ್‌ಇ ಬಡ್ಡಿದರವನ್ನು ಪ್ರಸ್ತುತ ಇರುವ ಶೇ 5.10ರಿಂದ ಶೇ 5.25ಕ್ಕೆ ಹೆಚ್ಚಿಸಿದೆ. (₹ 10 ಕೋಟಿವರೆಗಿನ ಠೇವಣಿಗಳಿಗೆ ಮಾತ್ರ). ಇದು ಮೇ 21 ರಿಂದ ಅನ್ವಯವಾಗಲಿದೆ.

‘ಬಡ್ಡಿದರ ಹೆಚ್ಚಿಸಿರುವುದರಿಂದ ಬ್ಯಾಂಕಿನಲ್ಲಿ ಹಣ ಠೇವಣಿ ಇರಿಸಲು ಜನರಿಗೆ ಇನ್ನಷ್ಟು ಉತ್ತೇಜನ ಸಿಗಲಿದೆ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದ್ದಾರೆ.

ಕೇಂದ್ರಕ್ಕೆ ₹ 30,307 ಕೋಟಿ ಲಾಭಾಂಶ: ಆರ್‌ಬಿಐ

ಮುಂಬೈ (ಪಿಟಿಐ): 2022ರ ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರಕ್ಕೆ ₹ 30,307 ಕೋಟಿ ಲಾಭಾಂಶ ಪಾವತಿಸಲು ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹೇಳಿದೆ.

ಈ ಹಿಂದೆ 2020ರ ಜುಲೈನಿಂದ 2021ರ ಮಾರ್ಚ್ ಅವಧಿಗೆ ₹ 99,122 ಕೋಟಿ ಲಾಭಾಂಶವನ್ನು ಆರ್‌ಬಿಐ ಸರ್ಕಾರಕ್ಕೆ ನೀಡಿತ್ತು. ಈ ಮೊತ್ತಕ್ಕೆ ಹೋಲಿಸಿದರೆ 2022ರ ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷಕ್ಕೆ ನೀಡಲಿರುವ ಮೊತ್ತವು ಕಡಿಮೆ ಆಗಿದೆ.

ಸರ್ಕಾರವು ಪ್ರಸಕ್ತ ಹಣಕಾಸು ವರ್ಷಕ್ಕೆ ಕೇಂದ್ರ ಬ್ಯಾಂಕ್ ಮತ್ತು ಸರ್ಕಾರಿ ವಲಯದ ಹಣಕಾಸು ಸಂಸ್ಥೆಗಳಿಂದ ಲಾಭಾಂಶದ ರೂಪದಲ್ಲಿ ₹ 73,948 ಕೋಟಿ ವರಮಾನ ಬರುವ ನಿರೀಕ್ಷೆ ಮಾಡಿದೆ. ಅನಿಶ್ಚಿತ ಸಂದರ್ಭಗಳಲ್ಲಿ ಬಳಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು ಶೇಕಡ 5.50ರಲ್ಲಿ ಕಾಯ್ದುಕೊಳ್ಳಲು ನಿರ್ಧರಿಸಲಾಗಿದೆ.

ಶ್ರೀಲಂಕಾ: ಸರ್ಕಾರಿ ನೌಕರರಿಗೆ ರಜೆ, ಶಾಲೆಗಳು ಬಂದ್

ಕೊಲಂಬೊ(ಎಪಿ): ಇಂಧನದ ತೀವ್ರ ಕೊರತೆಯಿಂದಾಗಿ ಶ್ರೀಲಂಕಾದಲ್ಲಿ ಶುಕ್ರವಾರ ಶಾಲೆಗಳನ್ನು ಬಂದ್ ಮಾಡಲಾಗಿದೆ. ಇಂಧನ ಕೊರತೆ ನೀಗುವವರೆಗೂ ಅಗತ್ಯ ಸೇವೆಗಳನ್ನು ನಿರ್ವಹಿಸುವವರನ್ನು ಹೊರತುಪಡಿಸಿ, ಉಳಿದ ಅಧಿಕಾರಿಗಳು ಮತ್ತು ನೌಕರರು ಕರ್ತವ್ಯಕ್ಕೆ ಹಾಜರಾಗುವುದು ಬೇಡ ಎಂದು ಸಾರ್ವಜನಿಕ ಆಡಳಿತ ಸಚಿವಾಲಯ ಸೂಚಿಸಿದೆ.

ಇಂಧನ ಕೊರತೆಯಿಂದಾಗಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಖಾಸಗಿ ಶಾಲೆಗಳು ಸಹ ಶುಕ್ರವಾರ ಬಾಗಿಲು ಮುಚ್ಚಿದವು. ದೇಶದಲ್ಲಿ ಅಡುಗೆ ಅನಿಲ ಮತ್ತು ಇತರ ಇಂಧನಗಳ ತೀವ್ರ ಕೊರತೆ ಎದುರಾಗಿದೆ. ದೇಶದಾದ್ಯಂತ ಪೆಟ್ರೋಲ್ ಬಂಕ್‌ಗಳ ಮುಂದೆ ಸಾವಿರಾರು ಜನರು ಪ್ರತಿ ದಿನವೂ ಸರದಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ.

ಸಾಲದ ಸುಳಿಯಲ್ಲಿ ಸಿಲುಕಿ, ಆರ್ಥಿಕ ದಿವಾಳಿ ಅಂಚಿನಲ್ಲಿರುವ ದ್ವೀಪ ರಾಷ್ಟ್ರ ಇಂಧನ, ಅನಿಲ ಮತ್ತು ಇತರ ಅಗತ್ಯ ವಸ್ತುಗಳ ಆಮದಿಗೆ ವಿದೇಶಿ ವಿನಿಮಯ ಹೊಂದಿಸಲು ಹೆಣಗಾಡುತ್ತಿದೆ.

9 ನೂತನ ಸಚಿವರ ನೇಮಕ (ಪಿಟಿಐ): ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಸರ್ವಪಕ್ಷಗಳ ನೇತೃತ್ವದ ಸರ್ಕಾರಕ್ಕೆ ಶುಕ್ರವಾರ 9 ಹೊಸ ಸಚಿವರ ನೇಮಕವಾಗಿದೆ.

ಶ್ರೀಲಂಕಾ ಫ್ರೀಡಂ ಪಾರ್ಟಿ (ಎಸ್‌ಎಲ್‌ಎಫ್‌ಪಿ) ಪ್ರತಿನಿಧಿಸುವ ಮಾಜಿ ಸಚಿವ ನಿಮಲ್ ಸಿರಿಪಾಲ ಡಿ ಸಿಲ್ವಾ, ಪಕ್ಷೇತರ ಸಂಸದರಾದ ಸುಶಿಲ್ ಪ್ರೇಮಜಯಂತ, ವಿಜಯದಾಸ ರಾಜಪಕ್ಸ, ತಿರಾನ್ ಅಲೆಸ್ ಸೇರಿ ಒಂಬತ್ತು ಮಂದಿಗೆ ಅಧ್ಯಕ್ಷ ಗೋಟಬಯ ರಾಜಪಕ್ಷ ಪ್ರಮಾಣ ವಚನ ಬೋಧಿಸಿದರು.

ಅಧ್ಯಕ್ಷರು ಮತ್ತು ಪ್ರಧಾನಿ ಸೇರಿ ಸಂಪುಟವು 25 ಸಚಿವರಿಗೆ ಸೀಮಿತವಾಗಲಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ರಾಜ್ಯ ಮಿನಿ ಒಲಿಂಪಿಕ್ಸ್: ಟೆನಿಸ್, ಬ್ಯಾಡ್ಮಿಂಟನ್‌ನಲ್ಲಿ ಬೆಂಗಳೂರು ಕ್ರೀಡಾಪಟುಗಳ ಪಾರಮ್ಯ

ಹರ್ಡಲ್ಸ್: ಮಿಂಚಿದ ಹರ್ಷಿತಾ, ಚಂದನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ರಾಮನಗರದ ಚಂದನ್ ಎಸ್. ಮತ್ತು ಬೆಂಗಳೂರಿನ ಪಿ. ಹರ್ಷಿತಾ ರಾಜ್ಯ ಮಿನಿ ಒಲಿಂಪಿಕ್ಸ್‌ನ 80 ಮೀ. ಹರ್ಡಲ್ಸ್‌ನ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ರಾಜ್ಯ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಯೋಜಿಸಿರುವ ಕೂಟದಲ್ಲಿ ಶುಕ್ರವಾರ ಚಂದನ್ 14 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ದಕ್ಷಿಣ ಕನ್ನಡದ ಸೃಜನ್ ಜಿ. (14.4 ಸೆ.) ಮತ್ತು ತುಮಕೂರಿನ ರೋಹನ್‌ಗೌಡ ಅವರನ್ನು ಚಂದನ್ ಹಿಂದಿಕ್ಕಿದರು.

ಬಾಲಕಿಯರ ವಿಭಾಗದಲ್ಲಿ ಹರ್ಷಿತಾ ಪ್ರತಿಸ್ಪರ್ಧಿಗಳನ್ನು ಭಾರೀ ಅಂತರದಿಂದ ಹಿಂದಿಕ್ಕಿದರು. ಅವರು 13.9 ಸೆಕೆಂಡುಗಳಲ್ಲಿ ಗುರಿ ತಲುಪಿದರೆ, ಕೊಡಗಿನ ಎಂ.ಎಂ. ಜನ್ಯ ಬೊಳ್ಳಮ್ಮ (14.4 ಸೆ.) ಮತ್ತು ಚಿಕ್ಕಮಗಳೂರಿನ ಅನುಶ್ರೀ ಬಿ.ಸಿ. (16.5 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.



ಹರ್ಡಲ್ಸ್‌ನಲ್ಲಿ ಚಿನ್ನ ಜಯಿಸಿದ ಚಂದನ್ (ಎಡ)– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಫಲಿತಾಂಶಗಳು: ಬಾಲಕಿಯರು: 600 ಮೀಟರ್ಸ್: ಅನಘ್ಯಾ ಪಿ. (ಶಿವಮೊಗ್ಗ)–1, ಕಾಲ: 1 ನಿ.41.4 ಸೆ.), ಸ್ನೇಹಾ ಎಂ.ಎಂ. (ಕೊಡಗು)–2, ಶೈಲಾಶ್ರೀ ಪಾಟೀಲ್ (ಬೆಳಗಾವಿ)–3. ಬಾಲ್ ಥ್ರೊ: ಇಂಚರ ಸಿ.ಯು (ಚಿಕ್ಕಮಗಳೂರು)–1, ದೂರ: 47.30 ಮೀ., ಅಹಲ್ಯಾ ಹೆಗ್ಡೆ (ಹಾಸನ)–2, ಅಲೀಶಾ ಎಚ್.ಎಸ್ (ಹಾಸನ)–3. 80 ಮೀ. ಹರ್ಡಲ್ಸ್: ಪಿ. ಹರ್ಷಿತಾ (ಬೆಂಗಳೂರು)–1, ಕಾಲ: 13.9 ಸೆ, ಜನ್ಯ ಬೊಳ್ಳಮ್ಮ (ಕೊಡಗು)–2, ಅನುಶ್ರೀ ಬಿ.ಸಿ. (ಚಿಕ್ಕಮಗಳೂರು)–3. ಬಾಲಕರು: 600 ಮೀ.: ಸಯ್ಯದ್ ಸಬೀರ್ (ಧಾರವಾಡ)–1, ಕಾಲ: 1 ನಿ. 28 ಸೆ., ಸಂದೇಶ್ ಕಬ್ಬೂರಮಠ (ಧಾರವಾಡ)–2, ಧವಳ್ ದೇವಯ್ಯ (ಕೊಡಗು)–3. ಬಾಲ್ ಥ್ರೊ: ಹಿಮೇಶ್ ಎನ್.(ರಾಯಚೂರು)–1, ದೂರ: 82.95 ಮೀ., ಪುಷ್ಪಕ್ ನಲವಡೆ (ಬೀದರ್)–2, ಸುರ್ಜೀತ್ ಭರಮನಿ (ಹಾಸನ)–3. 80 ಮೀ. ಹರ್ಡಲ್ಸ್: ಚಂದನ್ ಎಸ್. (ರಾಮನಗರ)–1, ಕಾಲ: 14 ಸೆ., ಸೃಜನ್ ಜಿ.(ದಕ್ಷಿಣ ಕನ್ನಡ)–2, ರೋಹನ್ ಎಸ್. ಗೌಡ (ತುಮಕೂರು)–3.

ಕೊಕ್ಕೊ: ಬಾಲಕರು: ವಿಜಯನಗರ(1), ಬೆಳಗಾವಿ (2). ಬಾಲಕಿಯರು: ಬೆಳಗಾವಿ (1), ಹಾವೇರಿ (2).

ಟೆನಿಸ್: ಬಾಲಕರ ಸಿಂಗಲ್ಸ್: ತನುಶ್ ಗಿಲ್‌ದಯಾಳ್–1, ಆರಾಧ್ಯ ದ್ವಿವೇದಿ –2, ಪ್ರಕಾಶ್ ಸರನ್–3 (ಮೂವರು ಬೆಂಗಳೂರು). ಬಾಲಕಿಯರ ಸಿಂಗಲ್ಸ್: ಸಾಯಿ ಜಾಹ್ನವಿ–1 (ಬೆಂಗಳೂರು), ಕಾಶ್ವಿ ಸುನಿಲ್–2 (ಮಂಡ್ಯ), ಮೇಘನಾ ಜಿ.ಡಿ.–3 (ಬೆಂಗಳೂರು). ಡಬಲ್ಸ್: ಅನ್ವಿ ಪುನಗಂಟಿ–ಮೇಘನಾ ಜಿ.ಡಿ.–1 (ಬೆಂಗಳೂರು), ಸಾಯಿ ಜಾಹ್ನವಿ– ಸ್ನಿಗ್ಧಾ ಕಾಂತ–2 (ಬೆಂಗಳೂರು).

ಬ್ಯಾಡ್ಮಿಂಟನ್: ಬಾಲಕರು: ಸಿಂಗಲ್ಸ್: ಅಭಿನವ್ ಗರ್ಗ್–1, ಮಯೂಕ್ ಡಿ.ಬಿ–2 (ಇಬ್ಬರೂ ಬೆಂಗಳೂರು) ಬಾಲಕಿಯರ ಸಿಂಗಲ್ಸ್: ಜಡೆ ಅನಿಲ್ (ಮೈಸೂರು)–1, ಗೌರಿ ಭಟ್–2 (ಬೆಂಗಳೂರು).

ಫುಟ್‌ಬಾಲ್: ಬೆಂಗಳೂರು ತಂಡಗಳಿಗೆ ಪ್ರಶಸ್ತಿ

ಬೆಂಗಳೂರು ಜಿಲ್ಲಾ ತಂಡಗಳು ಫುಟ್‌ಬಾಲ್‌ನಲ್ಲಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡವು. ಬೆಂಗಳೂರು ಫುಟ್‌ಬಾಲ್ ಅಂಗಣದಲ್ಲಿ ಶುಕ್ರವಾರ ನಡೆದ ಬಾಲಕರ ಫೈನಲ್ ಪಂದ್ಯದಲ್ಲಿ ಬೆಂಗಳೂರು 5–0ಯಿಂದ ಮೈಸೂರು ವಿರುದ್ಧ ಜಯ ಗಳಿಸಿತು. ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ತಂಡ 8–0ಯಿಂದ ಬೆಂಗಳೂರು ಗ್ರಾಮಾಂತರ ತಂಡವನ್ನು ಮಣಿಸಿತು.

ಬಾಲಕರ ವಿಭಾಗದಲ್ಲಿ ಮೂರನೇ ನಿಮಿಷದಲ್ಲಿ ಉತ್ತಮ್ ಗಳಿಸಿಕೊಟ್ಟ ಗೋಲಿನ ಮೂಲಕ ಬೆಂಗಳೂರು ಮುನ್ನಡೆ ಸಾಧಿಸಿತು. ಸುಚಿರ್ 12ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಮುನ್ನಡೆ ಹೆಚ್ಚಿಸಿದರು. ಮೊಹಮ್ಮದ್ ಹಫೀಜುಮ್ 42 ಮತ್ತು 43ನೇ ನಿಮಿಷಗಳಲ್ಲಿ ಗೋಲು ಗಳಿಸಿ ಸಂಭ್ರಮಿಸಿದರು. 47ನೇ ನಿಮಿಷದಲ್ಲಿ ಸಾತ್ವಿಕ್ ಗೆಲುವಿನ ಅಂತರ ಹೆಚ್ಚಿಸಿದರು.

ಬಾಲಕಿಯರ ವಿಭಾಗದಲ್ಲಿ ಮೈತ್ರೇಯಿ ಪಾಲಸಮುದ್ರಂ ಹ್ಯಾಟ್ರಿಕ್ (10, 14 ಮತ್ತು 33ನೇ ನಿ.) ಮೂಲಕ ಮಿಂಚಿದರು. 15ನೇ ನಿಮಿಷದಲ್ಲಿ ತನ್ವಿ ನಾಯರ್ ಯಶಸ್ಸು ಕಂಡರು. 19 ಮತ್ತು 30ನೇ ನಿಮಿಷಗಳಲ್ಲಿ ಅನಿಕಾ ಶ್ರೀವಾಸ್ತವ ಗಳಿಸಿದ ಗೋಲುಗಳೊಂದಿಗೆ ತಂಡ 5–0ಯಿಂದ ಮುನ್ನಡೆಯಿತು.. 36ನೇ ನಿಮಿಷದಲ್ಲಿ ಮೇಧಾ ಗುಪ್ತಾ ಮತ್ತು 42ನೇ ನಿಮಿಷದಲ್ಲಿ ಶ್ಲೋಕ ಕೃಷ್ಣ ಗೆಲುವಿಗೆ ಮತ್ತಷ್ಟು ಕಾಣಿಕೆ ನೀಡಿದರು.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಎಂಸಿಎಚ್‌ಎಸ್

ಮಿನಿ ಒಲಿಂಪಿಕ್ಸ್‌ನ ಬ್ಯಾಸ್ಕೆಟ್‌ಬಾಲ್‌ನ ಬಾಲಕಿಯರ ವಿಭಾಗದಲ್ಲಿ ಎಂಸಿಎಚ್‌ಎಸ್, ಕೋರಮಂಗಲ ಎಸ್‌ಸಿ, ಮೌಂಟ್ಸ್ ಬಿ.ಸಿ., ನ್ಯಾಷನಲ್ಸ್ ಮೈಸೂರು, ಬಾಲಕರ ವಿಭಾಗದಲ್ಲಿ ಎಚ್‌ಬಿಆರ್, ಭರತ್, ಎಂ.ಎನ್.ಕೆ. ರಾವ್ ಮತ್ತು ಜೆಎಸ್‌ಸಿ ತಂಡಗಳು ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟವು.

ನಭಾ, ಬಾಲಗಣೇಶ್‌ಗೆ ಪ್ರಶಸ್ತಿ

ಬೆಂಗಳೂರು: ನಭಾ ನಿಶಾನ್ ಹಾಗೂ ಬಾಲಗಣೇಶ್ ಪಟೇಲ್ ಅವರು ಇಲ್ಲಿ ನಡೆದ ಎಐಟಿಎ 14 ವರ್ಷದೊಳಗಿನ-ವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿ ಮತ್ತು ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಶುಕ್ರವಾರ ಕೊನೆಗೊಂಡ ಟೂರ್ನಿಯ ಫೈನಲ್‌ನಲ್ಲಿ ನಭಾ 6-4, 6-2ರಿಂದ ಅರ್ಚಿಷಾ ಘೋಷ್ ಅವ ರನ್ನು ಪರಾಭವಗೊಳಿಸಿದರು. ಬಾಲಕರ ವಿಭಾಗದ ಫೈನಲ್‌ನಲ್ಲಿ ಬಾಲಗಣೇಶ್ 4-6, 6-2, 6-4ರಿಂದ ಎಂ. ದಿಗಂತ್ ಅವರನ್ನು ಸೋಲಿಸಿದರು. ಬಾಲಗಣೇಶ್ ಅವರು ದರ್ಶ್ ಎಚ್. ಕೆ. ಜೊತೆಗೂಡಿ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ 6-3, 4-6, 10-8ರಿಂದ ಮೋಹಿತ್ ರೆಡ್ಡಿ– ಆಯಾನ್ ತಾರೀನ್‌ಅವರನ್ನು ಮಣಿಸಿದರು.ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಸೃಷ್ಟಿ ಕಿರಣ್–ತನು ವಿಶ್ವಾಸ್ 6-2, 6-2ರಿಂದ ಇಂದುಶಾ ಎನ್. ಕಸ್ತೂರಿ ವಿರುದ್ಧ ಗೆದ್ದರು.



ಪ್ರಶಸ್ತಿಯೊಂದಿಗೆ ನಭಾ, ಬಾಲಗಣೇಶ್

ಸಂಕ್ಷಿಪ್ತ ಸುದ್ದಿ

ಫ್ರೆಂಚ್ ಓಪನ್: ಸೋನಿ ಸ್ಪೋರ್ಟ್ಸ್‌ನಲ್ಲಿ ನೇರ ಪ್ರಸಾರ

ಬೆಂಗಳೂರು: ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ ಫ್ರೆಂಚ್ ಓಪನ್ ಸೋನಿ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರವಾಗಲಿ-ದೆ. ಟೂರ್ನಿಯು ಭಾನುವಾರದಿಂದ ಆರಂಭವಾಗಲಿದೆ. ಸೋನಿ ನೆಟ್‌ವರ್ಕ್‌ನ ವಿವಿಧ ಚಾನೆಲ್‌ಗಳಲ್ಲಿ ಇಂಗ್ಲಿಷ್, ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪ್ರಸಾರವಾಗಲಿದೆ.

29ರಂದು ಚೆಸ್ ಟೂರ್ನಿ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯಿಂದ ಇದೇ 29ರಂದು 16 ಮತ್ತು 10 ವರ್ಷದೊಳಗಿನವರಿಗಾಗಿ ರ‍್ಯಾಪಿಡ್ ಚೆಸ್ ಟೂರ್ನಿ ನಡೆಯಲಿದೆ. ₹ 200 ಪ್ರವೇಶ ಶುಲ್ಕ ಇದೆ. ಹೆಚ್ಚಿನ ಮಾಹಿತಿಗಾಗಿ ಬಾಲಕೃಷ್ಣ ಪ್ರಭು (ಮೊ. ಸಂ. 9845466416) ಅವರನ್ನು ಸಂಪರ್ಕಿಸಬೇಕು.